
ಗೌರಿ ಲಂಕೇಶ್

20 ಸೆಪ್ಟೆಂಬರ್ 2017 ಪುಟ 16 ರೂ. 15/- ರಂಜನೆ • ಬೋಧನೆ • ಪ್ರಚೋದನೆ



ನನ್ನ ದನಿ ಅಡಗುವುದಿಲ್ಲ

'ಇಂಥ ನನ್ನ ಮಗಳು'

ನನಗೆ ಎರಡು ವರ್ಷವಾಗಿದ್ದಾಗ ನಾನು ತಾಯಿಯನ್ನು ಕಳೆದುಕೊಂಡೆ. ನನಗೆ ಮಗಳು ಹುಟ್ಟಿದಾಗ ನನ್ನ ತಾಯಿಯ ಹೆಸರು ಗೌರಮ್ಮ ಎಂದು ಹೆಸರನ್ನು ಆರಿಸಿಕೊಂಡೆ. ನನ್ನ ತಾಯಿ ತುಂಬಾ ಶಾಂತಿ ಸ್ವಭಾವದವರಂತೆ. ನನ್ನ ಅಜ್ಜ ಹೇಳುತ್ತಿದ್ದರು. ನಾನು ಸ್ವಲ್ಪ ಹಠದ ಸ್ವಭಾವದವಳು. ಗೌರಿಯನ್ನು ನೋಡಿದ್ದವರೇ ನಿಮ್ಮ ಮಗಳು ತಿದ್ದಿ ತೀಡಿದಂತೆ ಇದ್ದಾಳೆ ಎನ್ನುತ್ತಿದ್ದರು. ಅವಳ ಕಣ್ಣು ಆಕರ್ಷಕವಾಗಿದ್ದವು. ಕಣ್ಣು ತೆರೆದಾಗ ರೆಪ್ಪೆ ಹುಬ್ಬನ್ನು ಮುಟ್ಟುತ್ತಿದ್ದವು. ಯಾರೇ ತೊಂದರೆಯಲ್ಲಿ ಇದ್ದರೂ ಸಹಾಯ ಮಾಡುತ್ತಿದ್ದಳು. ತನಗಾಗಿ ಯೋಚನೆ ಮಾಡಿದ್ದವಳೆ ಅಲ್ಲ. ನನಗಂತೂ ಒಂದು ದಿನವೂ ನೋವು ಕೊಡಲಿಲ್ಲ. ಅವಳೇ ತಾಯಿಯಾಗಿದ್ದಳು. ನಾನೇ ಅವಳ ಮಗಳಾಗಿ ಇದ್ದೆ. ಎಲ್ಲರ ಎದುರು ನಮ್ಮ ಅಮ್ಮ ತುಂಬಾ 'ಇನ್‌ಡಿಫರೆಂಟ್ ವುಮೆನ್' ಎಂದು ಹೊಗಳುತ್ತಿದ್ದಳು.

ಪ್ರತಿರಾತ್ರಿ ಮನೆ ಮುಟ್ಟಿದ ತಕ್ಷಣ ಮನೆಗೆ ಬಂದೆ ಸುಸ್ತಾಗಿದೆ ಎಂದು ಮೆಸೇಜ್ ಕಳುಹಿಸುತ್ತಿದ್ದಳು. ನಾನು ಸಮಾಧಾನದಿಂದ ಮಲಗುತ್ತಿದ್ದೆ. ಅವಳು ತನ್ನ ಕಣ್ಣನ್ನು ಡೊನೆಟ್ ಮಾಡಿದ್ದಾಳೆ. ಯಾರೂ ಆ ಕಣ್ಣನ್ನು ಪಡೆಯುತ್ತಾರೋ ಅವರು ಅವಳ ದೃಷ್ಟಿಯಲ್ಲಿ ಪ್ರಪಂಚವನ್ನು ನೋಡಲಿ ಅನ್ನಿಸುತ್ತದೆ.

ಅನೇಕ ಗೌರಿಯರನ್ನು ಹುಟ್ಟು ಹಾಕಿದ್ದಾಳೆ. ನನಗೆ 'ಇಂಥ ಮಗಳು ನನ್ನ ಮಗಳು' ಎಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಎನ್ನಿಸುತ್ತದೆ.

■ ಇಂದಿರಾ ಲಂಕೇಶ್



'ನನ್ನ ಜೀವ'




ಗೌರಿ: ಹೇ, ಬೇಬಿ ನಿನ್ನ ಅಕ್ಕನಿಗೆ ಕೊನೆಯ ವಿದಾಯ ಹೇಳಲು ಇಷ್ಟು ಜನ ಸೇರ್ತಾರೆ ಅಂತ ನೀನು ಅಂದುಕೊಂಡಿದ್ಯಾ?

ಕವಿತಾ: ಇಲ್ಲಮ್ಮ. ನನಗೆ ನೋಡಿ ಶಾಕ್ ಆಗಿದೆ. ಅಲ್ಲ ನಾನು ನಿನಗೆ ಆರು ತಿಂಗಳ ಹಿಂದೆ ಬೈದಿದ್ದೆ. ನೀನು ಅದೇನ್ ಮಾಡ್ತಾ ಇದೀಯಾ ಅಂತ ಗೊತ್ತಾಗ್ತ ಇಲ್ಲ, ಒಂದು ಕಡೆ ಪೇಪರ್, ಹೋರಾಟ, ಸಿದ್ಧಾಂತ, ಇನ್ನೊಂದು ಕಡೆ ನಕ್ಸಲೈಟ್, ಸ್ವಾಮಿ ಸಂಘಟನೆ ಅಂತ ಇದ್ಯಲ್ಲ? ಇದರೆಲ್ಲರ ನಡುವೆ ನಿನಗೆ ಅಂತ ಏನಾದ್ರೂ ಮಾಡಿಕೊಂಡಿದ್ಯ? **atleast 30x40 site** ಆದ್ರೂ ಮಾಡಿಕೊಂಡಿದ್ಯಾ?

ಗೌರಿ: (ಜೋರಾಗಿ ನಕು) ನಾನಿರೋ ಸೈಜ್‌ಗೆ 3 ಅಡಿ 6 ಅಡಿನೂ ಬೇಡ. 2 ಅಡಿ 5 ಅಡಿ ಇದ್ರೇ ಸಾಕು ಆರಾಮಾವಾಗಿ ತಾಚಿ ಮಾಡ್ತೀನಿ. ಅದು ಅಲ್ದೇ ನನಗೆ ಅಂತ 30 x 40 ತಗೊಂಡಿದ್ರೂನು. ಇಲ್ಲಿ ನೋಡ್ತಾ ಇದೀಯಲ್ಲ ಈ ಜನಸಾಗರ ನಿಂತುಕೊಳ್ಳೋಕು ಜಾಗ ಸಾಕಾಗತ ಇರಲಿಲ್ಲ.

ಸಂಸದಲ್ಲಿ ಗೌರಿಗೆ ವಿದಾಯ ಹೇಳಲು ಬಂದ ಜನಸಾಗರವನ್ನು ನೋಡಿ, ಅಕ್ಕನ ಬಗ್ಗೆ ಇನ್ನೂ ಹೆಮ್ಮೆ ಆಯಿತು. ರಾಜಕಾರಣಿಗಳು, ವಿದ್ಯಾರ್ಥಿಗಳು, ನಟರು, ಸಾಹಿತಿಗಳು, ಕಾರ್ಮಿಕರು, ಮಂಗಳಮುಖಿಯರು, ಎಲ್ಲರೂ ಮಳೆಯನ್ನು ಲೆಕ್ಕಿಸದೇ ಗೌರಿ ಅಕ್ಕ, ಗೌರಿ ಮೇಡಂ, ಗೌರಿ ಅಮ್ಮ ಎಂದು ಕಣ್ಣೇರಿಟ್ಟದನ್ನು ನೋಡಿ ನನ್ನ ಅಕ್ಕ ಆರ್ಥಿಕವಾಗಿ ಆಸ್ತಿ ಮಾಡಿಲ್ದೆ ಇರಬಹುದು. ಆದರೆ ಗಳಿಸಿದ ಅಷ್ಟು ಜನರ ಪ್ರೀತಿ ಎಷ್ಟು ಕೋಟಿಗೂ ಸಮ ಅಲ್ಲ ಅಂತ ಅನಿಸಿತು. ಪೊಲೀಸಿನವರು ಹತ್ತಿರದ 25 ಜನ ಸಂಬಂಧಿಗಳು ಮಾತ್ರ ಅಕ್ಕನನ್ನು ಮಣ್ಣು ಮಾಡುವಾಗ ಇರಲಿ ಅಂತ ಹೇಳಿದರು. ಆದರೆ ನಾನು ಹಿಂದೆ ತಿರುಗಿ ನೋಡಿದಾಗ ಸಾವಿರಾರು ಜನ ಇದ್ದರು. ಅವರೆಲ್ಲರೂ ಗೌರಿಯ ಸಂಬಂಧಿಗಳೇ. ನಾವು ಗೌರಿಗೆ ರಕ್ತ ಸಂಬಂಧಿನೇ ಇರಬಹುದು. ಆದರೆ ಅಲ್ಲಿದ್ದ ಸಾವಿರಾರು ಜನ ಅವಳ ಚಿಂತನೆಗಳನ್ನು, ಸಿದ್ಧಾಂತಗಳನ್ನು ನಂಬಿದ ಸಂಬಂಧಿಗಳು.

ನಮ್ಮಿಬ್ಬರ ಪಯಣ, ಜಂಜಾಟ, ಪ್ರೀತಿ, **love failure**, ಮದುವೆ.... ಆ ಮದುವೆ ಅಂದಾಗ ನೆನಪಾಯಿತು. ಅವಳು ಕಾಲೇಜಿನಲ್ಲಿದ್ದಾಗ ನನ್ನ ತಾಯಿ ಯಾರೋ ಒಬ್ಬ ಡಾಕ್ಟರ್ ನಿನ್ನ ನೋಡೋಕ್ಕೆ ಬರ್ತಾನೆ ಅಂತ ಅವಳಿಗೆ ಇಷ್ಟ ಇಲ್ದೆ ಇದ್ರೂ ಒತ್ತಾಯ ಮಾಡಿದ್ರು. ಆಗ ಗೌರಿ ದಟ್ಟವಾದ ಉದ್ದವಾದ ಕೂದಲಿತ್ತು. ಸೀದಾ ಹೋಗಿ ಕೂದಲು ಕತ್ತರಿಸಿಕೊಂಡು **Boy cut** ಮಾಡಿಸಿಕೊಂಡು ಬಂದೇಬಿಟ್ಟಳು! ಅದನ್ನು ನೋಡಿ ನಮ್ಮ ಶಿವು ಮಾಮ ಸಿನಿಮಾ ಸ್ಟೈಲ್‌ನಲ್ಲಿ ಹೊಡೆದು ಬಡಿದು ರೂಂನಲ್ಲಿ ಕೂಡಿ ಹಾಕಿದರು. ಮರುದಿನ ಗಂಡು ಬಂದು **Boy cut** ಆದ ಗೌರಿಯನ್ನೇ ಇಷ್ಟ ಪಟ್ಟ, ಅದ್ರೇ ಅವನ ಬಳಿ ಗೌರಿ ಧೈರ್ಯವಾಗಿ ಹೋಗಿ ನಾನು ಬೇರೆಯವರನ್ನು ಪ್ರೀತಿಸುತ್ತಿದ್ದೇನೆ. ನೀನು ಡಾಕ್ಟರ್ ಆದ್ರೂ ಪರವಾಗಿಲ್ಲ, ಇಂಜಿನಿಯರ್ ಆದ್ರೂ ಪರವಾಗಿಲ್ಲ, ನೀನು ಲಕ್ಷ ಲಕ್ಷ ದುಡಿದ್ರೂ ಪರವಾಗಿಲ್ಲ, ನಾನು ನಿನ್ನ **reject** ಮಾಡ್ತೀನಿ ಅಂದ್ಲು. ನನಗೆ ಗೊತ್ತಿರೋ ಹಾಂಗೆ ಗೌರಿಯ ಮೊದಲನೇಯ ಹೋರಾಟ ಇದೆ.



ಇದಕ್ಕೂ ಮುಂಚೆ ಇನ್ನೂ ಒಂದು ಸಣ್ಣ ಸಂಗತಿ ನೆನಪಾಗುತ್ತೆ.

ನಾವೆಲ್ಲಾ ಚಿಕ್ಕವರಾಗಿದ್ದಾಗ, ನಾವೂ ಶ್ರೀಮಂತರೇನಾಗಿರಲ್ಲಿಲ್ಲ **borderline poverty** ಅಂತನೇ ಹೇಳ್ಬಹುದು. ನಮಗೆ ಚಾಕಾಲೇಟ್, ಕೇಕು ಅಂತ ಸಿಗುವುದೇ ಅಪರೂಪಕ್ಕೆ, ಅಥವಾ ಯಾರದಾದ್ರೂ ಹುಟ್ಟುಹಬ್ಬ ಇದ್ದಾಗ. ಆದರೂ ಆಸೆ ನೋಡಿ. ಒಂದು ದಿನ ನಮ್ಮ ಮನೆ ಎದುರಿಗೆ ಇದ್ದ ಮಣಿ ಅಂಗಡಿಗೆ ಏನೋ ತರಲು ಹೋಗಿದ್ದೆ. ಮಣಿ ಆ ಕಡೆ ನೋಡುತ್ತಿದ್ದಾಗ ನಾನು ಮೆಲ್ಲಗೆ ಮೂರು ಚಾಕೊಲೇಟ್‌ನ್ನು ಕದ್ದು ಮನೆಗೆ ತಂದು ಮೆಲ್ಲಗೆ ಗೌರಿಗೆ ಕೊಟ್ಟೆ. ಅವಳು ದಿಢೀರ್ ಅಂತ 'ಅಮ್ಮ ಬೇಬಿ ಚಾಕೊಲೇಟ್ ಕದ್ದಿದ್ದಾಳೆ' ಅಂತ ದೂರೇ ಬಿಡ... ಅಮ್ಮ ನನಗೆ ನಾಲ್ಕು ಬಾರಿಸಿ ಹೋಗಿ ವಾಪಾಸ್ಸು ... ಕದ್ದೆ ಸಾರಿ ಅಂತ ಹೇಳು ಅಂದಿದ್ದರು. ಅದೆ ಮ... ಅದೇ ಕೊನೆ ನಾನು ಕದ್ದಿದ್ದು. ಸಣ್ಣದಾಗಲಿ, ದೊಡ್ಡ... ಗೌರಿಯ ಸ್ವಭಾವ ಯಾವಾಗಲೂ ಸರಿಯಾದ ಹಾದಿ... ಇರುತ್ತಿತ್ತು.

ಗೌರಿಯ ಜೀವನ ಶೈಲಿ ನಮ್ಮೆಲ್ಲರಿಗಿಂತ ಭಿನ್ನ... ಆಚೆ ಇಪತ್ತೈದು ಪೈಸಕ್ಕೆ ಸೈಕಲ್ ಬಾಡಿಗೆ ತಗ... ಊರೆಲ್ಲ ಸುತ್ತುತ್ತಿದ್ರೆ, ಗೌರಿ ತನ್ನ ಪಾಡಿಗೆ ತಾನು ... ಕೂತಿರುತ್ತಿದ್ದಳು. ನಮ್ಮ ಮನೆಯವರೆಲ್ಲಾ ಯಾವು... ಒಂದು ರೀತಿಯ ವ್ಯಾಯಾಮ ಮಾಡುತ್ತಿದ್ದೆವು... ಗೌರಿ ಯಾವಾತ್ತೂ ವ್ಯಾಯಾಮ ಮಾಡಿದವಳೆ ...

ಗೌರಿಯ ಹಾಸ್ಯಪ್ರಜ್ಞೆ ಬಗ್ಗೆ ಒಂದು ಮಾತು ಹೇ... ನಾನು ಯೋಗ ಮಾಡಿ ಕೆಲವು ರಾಜ್ಯ ಮಟ್ಟದ ... ತಗೊಂಡಿದ್ದೆ. ಒಂದು ಸಲ ಗೌರಿಗೂ ಮೂರನೆ ... ಬಂತು ಅಂತ ಕೇಳಿ ಶಾಕ್ ಆಗ್ಬಿಟ್ಟೆ. ನೋಡಿ... ಸ್ಪರ್ಧೆಯಲ್ಲಿ ಇದ್ದವರೇ ಮೂರೇ ಜನ. ಅದಕ್ಕೆ... ವಿಧಿ ಇಲ್ಲದೆ ಪ್ರೈಜ್ ಕೊಟ್ಟರು ಅಂತ ನಕ್ಕಿದ್ದಳು...

ಗೌರಿಗೆ ಅಷ್ಟು ಚೆನ್ನಾಗಿ ಈಜಲು ಬರು... ಎರಡು ವರ್ಷದ ಹಿಂದೆ ನಾನು ಅವಳಿಗೆ ನೀರಿನ... ಮಲಗಿಕೊಂಡು ತೇಲಲು ಹೇಳಿ ಕೊಟ್ಟಿದ್ದೆ. ... ಕಲಿತ ಮೇಲೆ ಅವಳು ಖುಷಿ ನೋಡಬೇಕಿತ್ತು! ... ಈಜಾಡಿ ಶ್ರಮ ಪಟ್ಟರೆ ಗೌರಿ ಮಾತ್ರ ನೀರಿನ ... ಹಾಯಾಗಿ ತೇಲುತ್ತಾ ಆಕಾಶ ನೋಡುತ್ತಿದ್ದಳು!

ಗೌರಿ ಎಂಥಾ ಬ್ಯಾಚುಲರ್ ಅಂದ್ರೆ ಅವಳು ಮ... ಅಡುಗೆ ಮಾಡುತ್ತಿರಲಿಲ್ಲ. ಅವಳ ಆರೋಗ್ಯ ಚೆ... ಎಂದು ಚಪಾತಿ, ಪಲ್ಯಾ ಎಲ್ಲಾ ನಮ್ಮ ಮನೆ... ಕೊಡುತ್ತಿದ್ದೆವು. ತನ್ನ ಮೇಲಿನ ಕಾಳಜಿಗಿಂತ ಬೇರೆ... ಮೇಲೆ ಯಾವಾಗಲೂ ಹೆಚ್ಚು ಕಾಳಜಿ ತೋರಿಸು...

ಸೆಪ್ಟೆಂಬರ್ 5ರಂದು 8.15 ಗೆ ಆಗ ಘಟನೆ... ತಡೆಯಲಾರದಷ್ಟು ನೋವು ತಂದಿದೆ. ನನ್ನ ಅಕ್ಕ... ಹೆಚ್ಚಾಗಿ ಆಕೆ ನನ್ನ ಜೀವ. ಎಷ್ಟೋ ಸಲ ಜನ ನ... ಅಂತ, ಗೌರಿನ್ನ ನಾನು ಅಂತ co... ಮಾಡಿಕೊಂಡ್ಡಿದ್ದೂ ಉಂಟು. ಆದರೆ ಇವ... ಜೀವ ನನ್ನ ಬಿಟ್ಟು ಹೋಗಿ ನನ್ನನ್ನು ಅರೆಜೀವ ವ...

■ ಕವಿತಾ ಲಂಕೇಶ್

'ಅವ್ವ' ಎಂಬ ನನ್ನೊಬ್ಬಳ ಸ್ವತ್ತು...




ನಾನು ಅವ್ವನನ್ನು ಅಪಾರವಾಗಿ ಪ್ರೀತಿಸುತ್ತಿದ್ದೆ. ಹ್ಞಾ, ಒಂದ್ನಿಮಿಷ ಇರಿ. 'ಪ್ರೀತಿಸುತ್ತಿದ್ದೆ' ಎಂದೇಳುವ ಅಗತ್ಯವಿಲ್ಲ, ಅವ್ವನನ್ನು ಈಗಲೂ ಪ್ರೀತಿಸುತ್ತಿದ್ದೇನೆ...

ನನಗೆ ಫೋಟೋಗ್ರಫಿ ಅಂದ್ರೆ ತುಂಬಾ ಅಚ್ಚುಮೆಚ್ಚು, ಹಾಗಾಗಿ ವನ್ಯಜೀವಿ ಫೋಟೋಗ್ರಫಿ ಇರುತ್ತಿದ್ದ ಮ್ಯಾಗಜಿನ್, ಕ್ಯಾಲೆಂಡರ್ ಮತ್ತು ಪುಸ್ತಕಗಳನ್ನು ಅವ್ವ ನನಗಾಗಿ ಹುಡುಕಿ ತರುತ್ತಿದ್ದಳು. ಒಮ್ಮೆ ಆಕೆ ಭಾರತದ ಬುಡಕಟ್ಟು ಬದುಕನ್ನು ಬಿಂಬಿಸುವ ಒಂದು ಪುಸ್ತಕ ತಂದುಕೊಟ್ಟಿದ್ದರು. ಅದು ಎಷ್ಟು ಅದ್ಭುತವಾಗಿತ್ತೆಂದರೆ ನನ್ನ ಇಡೀ ತರಗತಿಯ ಗೆಳೆಯರೆಲ್ಲ ಅದನ್ನು ಓದಿ ಸಂಭ್ರಮಿಸಿದ್ದರು. ಸಮರ್, ಸಮಯ್ (ಇವರಿಬ್ಬರು ನನ್ನ ಕಸಿನ್‌ಗಳು) ಮತ್ತು ನನ್ನನ್ನು ಕೂರಿಸಿಕೊಂಡು ಜಗತ್ತಿನ ಆಗುಹೋಗುಗಳ ಬಗ್ಗೆ ಅವ್ವ ರಸವತ್ತಾದ ಕಥೆಯಂತೆ ಹೇಳುತ್ತಿದ್ದಳು. ವಾರಾಂತ್ಯದಲ್ಲಿ ನಮ್ಮಮ್ಮ (ಆಕೆ ಸಸ್ಯಾಹಾರಿ) ಯಾವ ಚಿಕನ್ ಅಡುಗೆ ಮಾಡಬೇಕೆಂದು ನಾವೆಲ್ಲಾ ಸೇರಿ ಚರ್ಚೆ ಮಾಡುತ್ತಿದ್ದುದನ್ನು ಯಾವತ್ತೂ ಮರೆಯಲಾಗದು. ಆದ್ರೆ ಬಹಳಷ್ಟು ಚರ್ಚೆ, ವಾದಗಳ ನಂತರ ಅಂತಿಮವಾಗಿ ಯಥಾಪ್ರಕಾರ ಆಯ್ಕೆಯಾಗುತ್ತಿದ್ದುದು ಅವ್ವನ ಫೇವರಿಟ್ ರೆಸಿಪಿಯಾದ ಗ್ರೀನ್ ಚಿಕನ್ ಕರಿ!

ನಾವು ಎಲ್ಲರೂ ಒಟ್ಟಿಗೇ ಹೋಗಿದ್ದ ಚಿಕ್ಕಮಗಳೂರು ಟ್ರಿಪ್ ಈಗಲೂ ಚೆನ್ನಾಗಿ ನೆನಪಿದೆ. ಟ್ರೆಕ್ಕಿಂಗ್‌ಗೆ ಬೆಳ್ಳ... ಹೊರಡಬೇಕಿತ್ತು, ಆದರೆ ಅವ್ವ ಏಳುತ್ತಲೇ ... ಆದರೆ ರಾತ್ರಿ ನಮ್ಮ ರೂಮ್‌ಗಳ ಹೊ... ಮಾಯಾಜೀವಿಗಳಂತ ಮಿಂಚುಹುಳುಗಳನ್ನು ಖುಷಿ... ನೋಡುತ್ತಾ ಸಂಭ್ರಮಿಸಿದ್ದೆವು. ನನಗೋಸ್ಕರ ಬಟ್ಟೆ ಖ... ತರುವ ಕೆಲಸದಲ್ಲಿ ಅವ್ವನಿಗೆ ನಿಷೇಧ ಹೇರ... ಅದಕ್ಕೊಂದು ಕಾರಣವುಂಟು. ಏನೆಂದರೆ, ಆಕೆ ... ಮಾಡುತ್ತಿದ್ದ ಮಸುಕು ಬಣ್ಣಗಳ ಬಟ್ಟೆಗಳು ನೋ... ಹಳೇ ಬಟ್ಟೆಗಳ ಥರ ಕಾಣುತ್ತಿದ್ದವು. ಅವನ್ನೆಲ್ಲ... ಸಾರಿಸೋ ಬಟ್ಟೆಗಳು ಅಂಥ ಲೇವಡಿ ಮಾಡು... ಅದರ ಬದಲಿಗೆ ಅವ್ವ ನನಗೋಸ್ಕರ ಪುಸ್ತಗಳನ್ನು ಖ... ತರುವ ಹೊಣೆ ವಹಿಸಿಕೊಂಡಿದ್ದಳು. ನಾನು ಚಿಕ್ಕವ... ಅವ್ವ ನನಗೆಂದೇ 'ಮ್ಯಾಜಿಕ್ ಪಾಟ್' ಪ... ಚಂದಾದಾರಿಕೆ ಮಾಡಿಸಿದ್ದಳು. ಅದನ್ನು ಓದುವು... ಅದರ ಜೊತೆಗೆ ಬರುತ್ತಿದ್ದ ಉಚಿತ ಗಿಫ್ಟ್‌ಗಳಿಗಾಗಿ... ಕಾಯುತ್ತಿದ್ದುದು ನೆನಪಿದೆ! ನಾನು ಬಯಸಿದ ಯಾ... ಪುಸ್ತಕವನ್ನು ಅವ್ವ ತಂದುಕೊಡುತ್ತಿದ್ದಳು. ಒಂದ... ಅದು ಅಂಗಡಿಯಲ್ಲಿ ಸಿಗದಿದ್ದರೆ ಆನ್‌ಲೈನ್‌ನಲ್ಲಿ ಆ... ಮಾಡಿ ತರಿಸಿ ಕೊಡುತ್ತಿದ್ದಳು. ತನ್ನ ತಂದೆಯೊ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediff...

ಅರ್ಧ ಗೆದ್ದಿರುವ ನನ್ನ ಸಾವನ್ನು ಉಳಿದರ್ಧ ಗೆಲ್ಲಿಸುವ ಹೊಣೆ ನಿಮ್ಮದು...



ನಾನು ಗೌರಿ

ನನಗೆ ಚೆನ್ನಾಗಿ ಗೊತ್ತು, ನಿಮಗೆಲ್ಲ ಆಘಾತವಾಗಿದೆ. ಹೇಳದೇಕೇಳದೆ ಹೀಗೆ ಹಠಾತ್ತನೆ ಅಗಲಿದ ಬಗ್ಗೆ ನನಗೂ ಬೇಸರವಿದೆ. ಆದರೆ ನಾನೇನು ಮಾಡಬಹುದಿತ್ತು ಹೇಳಿ. ಈ ಶಾಶ್ವತ ಅಗಲಿಕೆಯಲ್ಲಿ ನನ್ನ ತಪ್ಪೇನಿತ್ತು ಹೇಳಿ. ನನ್ನ ಬದುಕಿನಲ್ಲಿ ಹಾದುಹೋದ ನೂರಾರು ಮಂಗಳವಾರಗಳಂತೆ ಆ ಮಂಗಳವಾರವೂ ಶುರುವಾಯ್ತು. ಆದರೆ ಅಂತ್ಯ ಮಾತ್ರ ನನ್ನನ್ನು ನಿಮ್ಮೆಲ್ಲರಿಂದ ಶಾಶ್ವತವಾಗಿ ಅಗಲಿಸಿ ಕರೆದೊಯ್ಯುತ್ತೆ ಎಂಬ ಸಣ್ಣ ಸುಳಿವೂ ನನಗಿರಲಿಲ್ಲ, ಹಂತಕನ ಗುಂಡೇಟು ನನ್ನ ಎದೆಯನ್ನು ಸೀಳಿ, ಕೆಳಕ್ಕೆ ಕೆಡವುವರೆಗೂ ಮನಸ್ಸು ನಾಳಿನ ಸಂಚಿಕೆಯ ಬಗ್ಗೆಯೇ ಆಲೋಚಿಸುತ್ತಿತ್ತು, ಈ ಸಂದಿಗ್ಧಮಯ ಸನ್ನಿವೇಶವನ್ನು ನೀವೆಲ್ಲ ಅರ್ಥ ಮಾಡಿಕೊಳ್ಳುತ್ತೀರಿ ಎಂಬ ವಿಶ್ವಾಸದಲ್ಲೇ ನಿಮ್ಮೊಂದಿಗಿನ ಈ ಕಟ್ಟಕಡೆಯ ಸಂವಾದವನ್ನು ಶುರು ಮಾಡುತ್ತಿದ್ದೇನೆ.

ನನ್ನ ಅಂತರಂಗವನ್ನು ನಿಮ್ಮೆದುರು ಬಿಚ್ಚಿಟ್ಟು ನಿರಾಳಳಾಗಿಬಿಡಲಿಕ್ಕಾಗಿ ಈ ಕೊನೆಸಲದ 'ಕಂಡಹಾಗೆ'.

ನಾನು ಬದುಕನ್ನು ಪ್ರೀತಿಸಿದವಳು, ಬದುಕಿನ ಘನತೆಯನ್ನು ಹೆಚ್ಚಿಸಲು ಹೋರಾಡಬೇಕೆಂದು ಹೊರಟವಳು. ನಿಮ್ಮೆಲ್ಲರ ನೆಚ್ಚಿನ 'ಮೇಷ್ಟ್ರ' ಮಗಳಾದರೂ ನನ್ನ ಬದುಕು ಅಚಾನಕ್, ಅನಿವಾರ್ಯ ತಿರುವುಗಳಿಂದಲೇ ತುಂಬಿ ಹೋಗಿದೆ. ನನ್ನ ಅಂತ್ಯ ಕೂಡಾ ಅಷ್ಟೇ ಹಠಾತ್ ತಿರುವಿಗೆ ಬಂದು ನಿಲ್ಲುತ್ತೆ ಅಂತ ನಾನಂದುಕೊಂಡಿರಲಿಲ್ಲ. ಆದರೇನಂತೆ, ಬಹುಪಾಲು ತಿರುವುಗಳಂತೆ ಈ ತಿರುವು ಕೂಡಾ ನನ್ನ ಹೆಮ್ಮೆಯನ್ನು ಇಮ್ಮಡಿಗೊಳಿಸಿದೆ ಎಂಬ ಸಾರ್ಥಕತೆ ನನಗಿದೆ.


ಅಪ್ಪಅಮ್ಮನ ಉತ್ಕಟ ಪ್ರೀತಿಯಲ್ಲಿ ಬೆಳೆದ ನನಗೆ ಅಂಥ ಕೊರತೆಗಳೇನೂ ಇರಲಿಲ್ಲ, ಸಣ್ಣಪುಟ್ಟ ಏರುಪೇರುಗಳ ಹೊರತಾಗಿ ಜೀವನ ಸುಖಮಯವಾಗೇ ಇತ್ತು. ಅಪ್ಪನಂತೆ ನಿಷ್ಠುರ ಪತ್ರಕರ್ತೆ ಆಗುವ ಹಾದಿಗೆ ಅಂಟಿಕೊಂಡು ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ಸಾಗಿದ್ದಾಗ ೨೦೦೦ರಲ್ಲಿ ಧುತ್ತನೆ ನಮ್ಮನ್ನೆಲ್ಲ ಅಪ್ಪಳಿಸಿದ ಆಘಾತವೆಂದರೆ, ಅಪ್ಪನ ವಿದಾಯ! ಅಪ್ಪನನ್ನು ಅತಿಯಾಗಿ ಪ್ರೀತಿಸುತ್ತಿದ್ದ ನಾನು ಕುಸಿದುಹೋಗಿದ್ದೆ. ಆ ಶೋಕದ ಘಳಿಗೆಯಲ್ಲಿ ಸುಧಾರಿಸಿಕೊಳ್ಳಲಿಕ್ಕೂ ಅವಕಾಶವಿಲ್ಲದಂತೆ ನನ್ನ ಮೇಲೆ ಮತ್ತೊಂದು ದೊಡ್ಡ ಭಾರವೂ ಬಿದ್ದಿತು. ಅದು ಅಪ್ಪನ 'ಪತ್ರಿಕೆ'. ನಾನು ಬಹುವಾಗಿ ಪ್ರೀತಿಸುತ್ತಿದ್ದ ಅಪ್ಪನ ಬದುಕಿನ ಘನತೆಯನ್ನು ಹೆಚ್ಚಿಸಿದ, ನೀವೆಲ್ಲರೂ ಅಭಿಮಾನಿಸುತ್ತಿದ್ದ 'ಲಂಕೇಶ್ ಪತ್ರಿಕೆ'.

ಅಪ್ಪನ ಪತ್ರಿಕೆಯ ಜವಾಬ್ದಾರಿ ನನ್ನ ಮೇಲೆ ಬೀಳುವ ಸಂಗತಿ ನನ್ನಲ್ಲಿ ನಡುಕ ಹುಟ್ಟಿಸಿತ್ತು ಎಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ. ಕರುನಾಡಿನಲ್ಲಿ ದಂತಕತೆಯಾಗಿದ್ದ ಪಿ.ಲಂಕೇಶ್ ಎಂಬ ದೈತ್ಯ ಪ್ರತಿಭೆ ಎಲ್ಲಿ? ಇಂಗ್ಲಿಷ್ ಪತ್ರಿಕೆಯೊಂದರ ತೀರಾ ಸಾಮಾನ್ಯ ಪತ್ರಕರ್ತೆಯಾಗಿದ್ದ ನಾನೆಲ್ಲಿ? ಅಷ್ಟಕ್ಕೂ ಕನ್ನಡ ಬರವಣಿಗೆಯ ಗಂಧಗಾಳಿಯೇ ಗೊತ್ತಿರದಿದ್ದ ನಾನು ಕನ್ನಡ ಸಾರಸ್ವತ ಲೋಕದಲ್ಲಿ ಮೆಚ್ಚುಗೆಗೆ ಪಾತ್ರವಾಗಿದ್ದ ಪತ್ರಿಕೆಗೆ ಸಂಪಾದಕಳಾಗುವುದು ಎಂದರೆ.... ? ಮೊದಮೊದಲು ಇಂತಹ ಒಂದಷ್ಟು ಅಧೀರತೆಗಳು ನನ್ನನ್ನು ಬೇಟೆಯಾಡಿದ್ದು ನಿಜ. ಆದರೆ ಅಪ್ಪನ ಘನತೆ, ನಿಷ್ಠುರ ಪರಂಪರೆಯನ್ನು ಮುಂದುವರೆಸುವುದು ಮಗಳಾದ ನನ್ನ ಮೇಲಿದೆ ಎಂಬುದನ್ನು ಮನಗಂಡ ನಂತರ ಗಟ್ಟಿ ನಿರ್ಧಾರ ಮಾಡಿ 'ಪತ್ರಿಕೆ'ಗೆ ಹೆಗಲುಕೊಟ್ಟು ನಿಂತೆ.

ಅಲ್ಲಿಂದಾಚೆಗೆ ನನ್ನ ಬದುಕು ನನ್ನನ್ನೂ ಹಿಂದಿಕ್ಕಿ ಮುನ್ನುಗ್ಗಿತು. ನಿಮ್ಮ ನೆಚ್ಚಿನ ಮೇಷ್ಟ್ರ ಮಗಳಾಗಿ ನಾನು ಮಾಡಬೇಕಿರುವ, ಹೊರಬೇಕಿರುವ ಹೊಸ ಜವಾಬ್ದಾರಿಗಳ ಸ್ಪಷ್ಟತೆ ಸಿಗುತ್ತಾ ಬಂತು. ಇಂಗ್ಲಿಷ್ ಜರ್ನಲಿಸಂ ಪತ್ರಕರ್ತೆಗಿಂತ ಈ ಮಣ್ಣಿನ ಸೌಹಾರ್ದತೆಗೆ ಧನಿಯಾಗುವ ಲಂಕೇಶರ ಮಗಳ ಅಗತ್ಯತೆಯನ್ನು ಮನಗಂಡೆ. ಅದಕ್ಕೋಸ್ಕರ ಬಹಳಷ್ಟು ಜನರ ವಿರೋಧ ಎದುರಿಸಬೇಕಾಗುತ್ತೆ ಎಂಬ ಎಚ್ಚರಿಕೆಗಳನ್ನು ಧಿಕ್ಕರಿಸಿ ಮುಂದಡಿಯಿಟ್ಟೆ. ತೆರಬೇಕಾದ ಬೆಲೆಯನ್ನೆಲ್ಲ ಒಂದೇ ಕಂತಿನಲ್ಲಿ ತೆರಲು ಸಿದ್ಧವಾಗಿದ್ದೆ.

ಅಷ್ಟಕ್ಕೂ ನಾನು ಹಂಬಲಿಸಿದ್ದಾದರು ಏನನ್ನು. ಮೂರೊತ್ತಿನ ಕೂಳಿನ ಭರವಸೆಯಿಲ್ಲದ, ಮೈಮುಚ್ಚುವ ಬಟ್ಟೆಗೆ, ನೆತ್ತಿಮೇಲಿನ ಸೂರಿಗೆ ಗತಿಯಿಲ್ಲದ ನತದೃಷ್ಟರ ಬದುಕು ಹಸನಾಗಲಿ ಎಂದು ಬಯಸಿದೆ; ಮನುಷ್ಯನಾಗಿ ಹುಟ್ಟಿದ ಪ್ರತಿಯೊಬ್ಬನೂ ತಾರತಮ್ಯವಿಲ್ಲದೆ ಸಮನಾಗಿ ಬಾಳುವಂತಾಗಲಿ ಎಂದು ಕನಸಿದೆ; ನನ್ನ ಮುಗ್ಧ ಜನರು ವಿನಾಕಾರಣ ಶೋಷಣೆಗೆ ತುತ್ತಾಗದಿರಲಿ ಎಂದು ತುಡಿದೆ; ಹಿಂಸೆಯಿಂದ ಹೊರಬಂದು ಎಲ್ಲರೂ ಶಾಂತಿಯಿಂದ ನೆಲಸುವಂತಾಗಲು ಕನವರಿಸಿದೆ. ಇದರಲ್ಲಿ ಅಂಥಾ ತಪ್ಪೇನಿದೆ? ನನಗಂತೂ ಯಾವ ತಪ್ಪೂ ಕಾಣಿಸುತ್ತಿಲ್ಲ...

ಎಲ್ಲೋ ಆದಿವಾಸಿಗಳು ದೌರ್ಜನ್ಯಕ್ಕೆ ತುತ್ತಾದಾಗ, ಇನ್ನೆಲ್ಲೋ ಬಡವನ ಅನ್ನವನ್ನು ಈ ವ್ಯವಸ್ಥೆ ನಿರ್ದಯವಾಗಿ ಕಿತ್ತುಕೊಂಡಾಗ, ಮತ್ತೆಲ್ಲೋ ರೈತರನ್ನು ಒಕ್ಕಲೆಬ್ಬಿಸಿದಾಗ, ಯಾವುದೋ ದಲಿತನ ದನಿಯನ್ನು ಅಡಗಿಸಲು ಶೋಷಕರು ಮುಂದಾದಾಗ, ತಿನ್ನುವ ಆಹಾರವನ್ನು ನೆಪವಾಗಿಸಿಕೊಂಡು ಮನುಷ್ಯರನ್ನು ಬಡಿದು ಕೊಲ್ಲಲು ಮುಂದಾದಾಗ, ದೇಶದ ನೆಲಕ್ಕೆ ಸೇಡಿನ-ಹಿಂಸೆಯ ಕೊಳ್ಳಿ ಇಡುವಾಗ ನಾನು ಸುಮ್ಮನಿರಬೇಕಿತ್ತಾ? ಇಲ್ಲ, ಸುಮ್ಮನಿರಲು ನನ್ನಿಂದ ಖಂಡಿತ ಆಗಲಿಲ್ಲ. ನನ್ನವರಿಗಾಗಿ, ನನ್ನ ಇಂಡಿಯಾಕ್ಕಾಗಿ ಸಿಡಿದು ನಿಂತೆ. ಅದಕ್ಕೋಸ್ಕರವೇ ನಾನಿಂದು ಬೆಲೆ ತೆತ್ತಿದ್ದೇನೆ ಅಂತ ಯಾರಾದರು ಹೇಳಿದರೆ, ಅವರಿಗೆ ಪ್ರತಿಯಾಗಿ ನಾ ಹೇಳುವುದು ಇಷ್ಟೆ, ಆ ಬಗ್ಗೆ ನನಗ್ಯಾವ ಬೇಸರವೂ ಇಲ್ಲ, ಸಾರ್ಥಕತೆ ಇದೆ!



ನನ್ನ ಬದುಕಿನ ಹಾದಿಯ ಬಗ್ಗೆ ನಿಮಗೆಲ್ಲ ಗೊತ್ತಿರುವಂತದ್ದೆ. ಅದನ್ನು ಇನ್ನಷ್ಟು ಬೆಳೆಸಲು ಹೋಗುವುದಿಲ್ಲ, ಆದರೆ ಸಂಗಾತಿಗಳಿಗೆ ಒಂದು ಮಾತು ಹೇಳಬೇಕು. ನನ್ನ ಸಾವಿಗೆ ನೀವೆಲ್ಲ ಮಮ್ಮಲ ಮರುಗಿದ್ದೀರಿ, ಕಣ್ಣೀರು ಮಿಡಿದಿದ್ದೀರಿ, ಹಂತಕರಿಗೆ ಹಿಡಿಶಾಪ ಹಾಕಿದ್ದೀರಿ; ಜೊತೆಗೆ, ಗೌರಿ ಸಾವಿಗೆ ನ್ಯಾಯ ಸಿಗಬೇಕೆನ್ನುವ ಒಕ್ಕೊರಲಿನ ಕೂಗು ಹೊರಡಿಸುತ್ತಿದ್ದೀರಿ, ಅದಕ್ಕೋಸ್ಕರ ಹೋರಾಟ ಹುಟ್ಟುಹಾಕುವ ಹಾದಿಯಲ್ಲಿಯೂ ಇದೀರಿ.

ನನ್ನ ಬೇಸರ ಇರೋದು ಇಲ್ಲೇ ಸಂಗಾತಿಗಳೆ!

ಈ ನೆಲದ ಪ್ರತಿಯೊಂದು ಜೀವಿಗೂ ಸಲೀಸಾಗಿ ಸಿಗಬೇಕಿದ್ದ 'ನ್ಯಾಯ'ವನ್ನು ಹೋರಾಡಿ, ಬಡಿದಾಡಿ, ಕಾದಾಡಿ ಗಿಟ್ಟಿಸಿಕೊಳ್ಳಬೇಕಾಗಿದೆ. ಹಾಗೆ ದಕ್ಕಿಸಿಕೊಂಡ ನ್ಯಾಯ ಕೂಡಾ ಅನ್ಯಾಯದ ಮತ್ತೊಂದು ಮುಖವಾಗಿರುತ್ತದೆಯೇ ವಿನಾಃ ಮಾನವೀಯ ನ್ಯಾಯದ ಸಂತುಲನೆ ಅದರಲ್ಲಿರುವುದಿಲ್ಲ. ಬಸವಣ್ಣ, ಗಾಂಧಿ, ತೀರಾ ಇತ್ತೀಚಿನ ನಮ್ಮದೇ ಕಲ್ಬುರ್ಗಿಯಂತವರ ಸೈದ್ಧಾಂತಿಕ ಹತ್ಯೆಗಳ ಒಳಹುಗಳನ್ನು ಚೆನ್ನಾಗಿ ಅರಗಿಸಿಕೊಂಡಿರುವ ನಿಮಗೆ ಅದನ್ನೆಲ್ಲ ಸುದೀರ್ಘವಾಗಿ ಹೇಳಿ ಬೋರು ಹೊಡೆಸುವುದಿಲ್ಲ, ಆದರೆ ಒಂದು ವಿಷಯವಂತೂ ಗ್ಯಾರಂಟಿ. ಈ ಹೊಲಸು ರಾಜಕೀಯ ಷಡ್ಯಂತ್ರದ ವ್ಯವಸ್ಥೆ ನೀಡುವ 'ನ್ಯಾಯ'ದ ಬಗ್ಗೆ ನನಗೆ ಹೆಚ್ಚೇನೂ ನಿರೀಕ್ಷೆಗಳಿಲ್ಲ, ನಿಜ ಹೇಳಬೇಕೆಂದರೆ, ನನ್ನ ಸಾವಿಗೆ ಅಂತಹ 'ನ್ಯಾಯ' ಬೇಕಾಗಿಯೂ ಇಲ್ಲ.

ನನ್ನ ಸಾವಿಗೆ ಬೇಕಾಗಿರೋದು 'ಗೆಲುವು'! ಈ ಮಣ್ಣಿನ ಸೌಹಾರ್ದತೆಯ ಗಾಳಿಯನ್ನು ಕೋಮುವಾದದ ವಿಷಗಾಳಿ ನುಂಗಿಹಾಕದಂತೆ ವಿಚಾರವಾದವನ್ನು ಗಟ್ಟಿಗೊಳಿಸುವ, ಬೇರು ಆಳಕ್ಕಿಳಿಸುವ ಗೆಲುವು!! ಆ ಗೆಲುವನ್ನು ನನ್ನವರಲ್ಲದ ಯಾಂತ್ರಿಕ ಹುದ್ದೆಗಳು, ಕುರ್ಚಿಗಳು ದಕ್ಕಿಸಿಕೊಡಲಾರವು. ಅದು ನಿಮ್ಮಿಂದ ಮಾತ್ರ ಸಾಧ್ಯ. ಅಂತಹ ಗೆಲುವಿಗೆ ನನ್ನ ಹತ್ಯೆ ಅಡಿಪಾಯ ಆಗುತ್ತೆ ಅನ್ನುವುದಾದರೆ, ಅವತ್ತು ಕತ್ತಲ ಸಂಧಿಯಿಂದ ನುಗ್ಗಿಬಂದು ನನ್ನತ್ತ ಗುಂಡು ಹಾರಿಸಿದ ಆ ನಿಗೂಢ ಹಂತಕನಿಗೆ ನಾನು ಮನಬಿಚ್ಚಿ 'ಥ್ಯಾಂಕ್ಸ್' ಹೇಳಿಬಿಡುವೆ....

ಇಲ್ಲಿ ನಾನು 'ವ್ಯವಸ್ಥೆಯ ನ್ಯಾಯ'ವನ್ನು ಧಿಕ್ಕರಿಸುತ್ತಿರುವುದರ ಬಗ್ಗೆ ನಿಮಗೆ ಅಚ್ಚರಿ ಅನ್ನಿಸಬಹುದು. ಅದಕ್ಕೂ ಒಂದು ಕಾರಣವಿದೆ. ನಾನು ಮೊದಲೇ ಹೇಳಿದಂತೆ, ನನ್ನ ಹತ್ಯೆಯ ವಿಚಾರದಲ್ಲಿ ಈ 'ವ್ಯವಸ್ಥೆಯ ನ್ಯಾಯ'ದ ವ್ಯಾಪ್ತಿ ಏನು ಅನ್ನೋದು ಚೆನ್ನಾಗಿ ಗೊತ್ತು. 'ವ್ಯಕ್ತಿ ಹಂತಕ'ನ ಆಚೀಚೆ ಅದು ಕದಲಾಡುವುದಿಲ್ಲ, ನನಗೆ ಕಿಂಚಿತ್ತೂ ಇಷ್ಟವಿರದಿದ್ದರು ಕೂಡಾ ಅಮ್ಮ, ತಂಗಿ, ಆತ್ಮೀಯರ ಗೋಳಾಟಕ್ಕೆ ಮಣಿದು ಮನೆ ಮುಂದೆ ತೂಗುಹಾಕಿಸಿಕೊಂಡಿದ್ದ ಸಿಸಿಟೀವಿಯಲ್ಲಿ ಸೆರೆಯಾಗಿರೋ ದೃಶ್ಯವನ್ನು ಕಂಡು, ಈಗಾಗಲೇ ತನಿಖೆ ಶುರು ಮಾಡಿರುವ ಪೊಲೀಸರು ಐದಾರು ಅಡಿ ಅಂತರದಿಂದ ನನ್ನನ್ನು ಗುಂಡಿಕ್ಕಿ ಕೊಂದಿದ್ದಾರೆ ಎಂಬ ಅರ್ಧಸತ್ಯದ ನಿರ್ಧಾರಕ್ಕೆ ಬಂದಿದ್ದಾರೆ. ಇನ್ನೇನಿದ್ದರೂ ಆ ಐದಾರು ಅಡಿ ಅಂತರದ ಹಂತಕನನ್ನು ಹಿಡಿಯೋದಷ್ಟೆ ಬಾಕಿ. ಒಂದೊಮ್ಮೆ ಆ ಹಂತಕ ಸಿಕ್ಕು, ಸಾಕ್ಷಿಗಳು ಬಲವಾಗಿ ನಿಂತರೆ ಹಂತಕನಿಗೆ ಶಿಕ್ಷೆಯಾಗುವ ಮಟ್ಟಿಗೆ ನಮ್ಮ 'ವ್ಯವಸ್ಥೆಯ ನ್ಯಾಯ' ಅಂತ್ಯವಾಗಿಬಿಡುತ್ತೆ! ಅಷ್ಟಾಗುವುದರ ಬಗ್ಗೆಯೂ ನನಗೆ ಅನುಮಾನವಿರೋದು ಬೇರೆಮಾತು ಬಿಡಿ. ಪತ್ರಕರ್ತೆಯಾಗಿ ನನ್ನ ಅನುಭವದ ಪ್ರಕಾರ ಇಷ್ಟೊತ್ತಿಗಾಗಲೆ ತನಿಖೆಯನ್ನೇ ದಿಕ್ಕುತಪ್ಪಿಸುವಂತಹ ಪ್ರಯತ್ನಗಳೂ ಶುರುವಾಗಿರಬಹುದು ಅಂದ್ಕೊಳ್ತೀನಿ.

ಇರಲಿ, ವಾಸ್ತವ ಏನು ಗೊತ್ತಾ ಸ್ನೇಹಿತರೇ, ನಿಮಗೂ ಚೆನ್ನಾಗಿ ಗೊತ್ತಿರುವಂತೆ ನನ್ನನ್ನು ಹೊಕ್ಕ ಗುಂಡುಗಳು ನುಗ್ಗಿಬಂದದ್ದು ಸಾವಿರಾರು ಅಡಿಗಳ ದೂರದಿಂದ, ಅವು ನನ್ನಿಂದ ಐದಾರು ಅಡಿಗಳ ಅಂತರದಲ್ಲಿ ಆಸ್ಫೋಟಿಸಿವೆ ಅಷ್ಟೆ! ವ್ಯವಸ್ಥೆಯ ತನಿಖೆಯಿಂದ ಆ ಗುಂಡುಗಳನ್ನು ನುಗ್ಗಿಸಿದ ಅಸಲೀ ಹಂತಕರು ಬಯಲಾಗುವುದೇ ಇಲ್ಲ!! ಆದರೆ ನನ್ನ ಮುಂದೆ ನಿಂತು ಟ್ರಿಗರ್ ಅದುಮಿದ, ಯಾವುದೋ ಶೂದ್ರತಾಯಿ ಹೊಟ್ಟೆಯ ಹರೆಯದ ಕೂಸು ಬಲಿಪಶುವಾಗುವಷ್ಟಕ್ಕೆ, ಪ್ರಕರಣ ತೀರ್ಪಿನ ತುದಿಗೆ ಬಂದು ನಿಲ್ಲುತ್ತೆ. ಮತ್ತೆ ಒತ್ತಿ ಹೇಳ್ತೀನಿ, ಅಷ್ಟಾಗುವುದರ ಬಗ್ಗೆಯೂ ನನಗೆ ಅನುಮಾನವಿದೆ.

ನನ್ನ ಬದುಕಿನುದ್ದಕ್ಕೂ ವ್ಯಕ್ತಿ ಸಂಘರ್ಷದಂತಹ ಕ್ಷುಲ್ಲಕ ಕ್ಷಣಗಳಲ್ಲಿ ತೊಡಗಿಸಿಕೊಂಡವಳೇ ಅಲ್ಲ, ಸುಳಿಗಳ ಆಳಕ್ಕಿಳಿದು ಸೈದ್ಧಾಂತಿಕ ಸಂಘರ್ಷ ನಡೆಸುತ್ತಿದ್ದ ನಾನು ಈಗ ನನ್ನ ಸಾವಿನಲ್ಲೂ ಅಂತದ್ದೊಂದು ಗೆಲುವಿಗಾಗಿ ತುಡಿಯುವುದರಲ್ಲಿ ತಪ್ಪೇನಾದರು ಇದೆಯಾ? ಹಂತಕ ಸಿಗಲಿ, ಅವನಿಗೆ ಶಿಕ್ಷೆಯಾಗಲಿ, ಹತ್ಯೆಯ ಚರ್ಚೆಯೂ ಆಗಲಿ. ಆದರೆ ಅದೆಲ್ಲವನ್ನೂ ವ್ಯವಸ್ಥೆಯ ಓಘಕ್ಕೆ ಬಿಟ್ಟು ನೀವು ನನ್ನ ಸಾವಿನ ಸೈದ್ಧಾಂತಿಕ ಗೆಲುವಿಗೆ ಸಜ್ಜಾಗಿ ಗೆಳೆಯರೆ.

ಅಂದಹಾಗೆ ಒಂದು ಮಾತು. ಯಾವಾಗ ಕತ್ತಲಿಗೆ ಕಾದಿದ್ದುಕೊಂಡು, ತಮ್ಮ ಗುರುತುಗಳನ್ನು ಅವಿತಿಟ್ಟುಕೊಂಡು, ಒಬ್ಬಂಟಿಯಾದ ನನ್ನ ಮೇಲೆ ಗುಂಡಿನ ಮಳೆಗೆರೆದು ರಣಹೇಡಿಗಳಂತೆ ಓಡಿಹೋದರೊ ಆಗಲೇ ನನ್ನ ಸಾವು ಅರ್ಧ ಗೆದ್ದಾಗಿದೆ. ಇನ್ನೇನಿದ್ದರೂ ಉಳಿದರ್ಧ ಗೆಲ್ಲಿಸುವ ಭಾರವನ್ನು ನಿಮಗೆ ಬಿಟ್ಟು ಹೋಗುತ್ತಿದ್ದೇನೆ. ನನ್ನನ್ನು ನಂದಿಸುವ ಆತುರದಲ್ಲಿ ಆ ಮುಠ್ಠಾಳರು ನನ್ನ ದೇಹದ ಮೊಂಬತ್ತಿಗೆ ಕಿಡಿ ತಾಗಿಸಿ, ಜ್ವಾಲೆಯೊಂದನ್ನು ಹಚ್ಚಿದ್ದಾರೆ. ಆ ಒಂದು ಮೊಂಬತ್ತಿಯ ಜ್ವಾಲೆಯನ್ನು ಸಾವಿರ, ಲಕ್ಷ, ಕೋಟಿಗಳಾಗಿಸಿ ಜಗತ್ತಿಗೆ ಬೆಳಗನ್ನು ಹರಡಿಸಿ, ಕತ್ತಲೆಯಲ್ಲಿ ಅವಿತಿಟ್ಟುಕೊಂಡ ಶೋಷಕರ ಹಂತಕ ಮುಖಗಳನ್ನು ಜನರ ಮುಂದೆ ಬೆತ್ತಲಾಗಿಸುವ ಕೆಲಸ ನಿಮ್ಮಿಂದಾಗಲಿ. ನಿಮ್ಮೆಲ್ಲರ ಮೇಲೆ ವಿಶ್ವಾಸವಿದೆ. ನನ್ನ ಸಾವು ವ್ಯರ್ಥವಾಗಲಾರದು ಎಂಬ ಭರವಸೆ ಇದೆ.

ನಿಮ್ಮೊಟ್ಟಿಗೆ ಇನ್ನು ಬಹಳಷ್ಟು ಬಹಳಷ್ಟು ಮಾತಾಡುವುದಿದೆ. ಆದರೆ ಯಾಕೋ ಗೊತ್ತಿಲ್ಲ ಗಂಟಲು ಬಿಗಿಯುತ್ತಿದೆ, ಕೈಗಳು ಅದುರುತ್ತಿವೆ, ಒಲ್ಲೆಯೆಂದರು ಕಣ್ಣಾಲಿಗಳು ತೇವಗೊಳ್ಳುತ್ತಿವೆ! ನಿಮಗೆ ಚೆನ್ನಾಗಿ ಗೊತ್ತು, ನಾನು ಕಣ್ಣೀರು ಸುರಿಸುವಷ್ಟು ಅಳುಬುರುಕಿಯಲ್ಲ. ನೀವೆಲ್ಲಾ ಅಭಿಮಾನಿಸುವ, ನಾನು ಅಪಾರವಾಗಿ ಆರಾಧಿಸುವ 'ಅಪ್ಪ'ನಿಂದ ಅಂತದ್ದೊಂದು ಅಧೈರ್ಯದ ಬಳುವಳಿ ನನಗೆ ಬರಲೂ ಇಲ್ಲ. ಆದರೆ ಇದೊಂದು ಸಲ ನನ್ನನ್ನು ಕ್ಷಮಿಸಿಬಿಡಿ. ನಿಮ್ಮನ್ನೆಲ್ಲ ಬಿಟ್ಟು ಹೋಗುತ್ತಿದ್ದೇನೆ ಎಂಬ ವಾಸ್ತವ ಮುತ್ತಿದೊಡನೆ ನನ್ನನ್ನೂ ಮೋಸಗೊಳಿಸಿ ಒಂದೆರಡು ಬಿಂದುಗಳು ಕಣ್ಣಂಚಿಂದ ಜಾರಿ ಬರುತ್ತಿವೆ. ಕ್ಷಮಿಸಿ ಬಿಡಿ.

ಇಂಡಿಯಾದ ಎದೆಗೂಡಿನೊಳಗೆ ಹಿಟ್ಲರನ ಜರ್ಮನಿ ಮಿಸುಕಾಡುತ್ತಿರುವ ಈ ಹೊತ್ತಿನಲ್ಲಿ ನಿಮ್ಮನ್ನು ಬಿಟ್ಟುಹೋಗುತ್ತಿರೋದಕ್ಕೆ ನನಗೂ ವಿಪರೀತ ಬೇಸರವಿದೆ. ಹಾಗಂತ ದುಃಖ, ಬೇಸರ, ಕಣ್ಣೀರುಗಳ ನಡುವೆ ಕೈಕಟ್ಟಿಕೂರುವ ಸಮಯವಿದಲ್ಲ. ಈ ನೆಲದ ಮನುಷ್ಯತ್ವದ ಧ್ವನಿಗಳು ಒಮ್ಮೆಲೇ ಘೀಳಿಡಬೇಕಾದ ಕಾಲ. ನಿಮ್ಮ ಜೊತೆ ಸದಾ ನಾನಿರುತ್ತೇನೆ.

'ನಾನು ಗೌರಿ, ನಾವೆಲ್ಲ ಗೌರಿ' ಎಂಬ ರಣಕಹಳೆ ಮೊಳಗಿಸಿರುವ ನಿಮ್ಮೊಂದಿಗೆ ನಾನಿರುತ್ತೇನೆ. ದೃಢತೆ, ಬದ್ಧತೆ, ಸ್ಪಷ್ಟತೆ ಇವೇ ನನ್ನ ಹೊಸ ಹೆಸರುಗಳು.......

ಎಂದೆಂದಿಗೂ ನಿಮ್ಮವಳೇ ಆದ

ಇಂತಿ ನಿಮ್ಮ ಪ್ರೀತಿಯ ಗೌರಿ ■

ಹೀಗೆ ಪುಸ್ತಕಗಳ ಹುಚ್ಚು ಹಿಡಿಸಿದ್ದರು ಅಂತ ಅವ್ವ ಆಗಾಗ್ಗೆ ಹೇಳಿಕೊಳ್ಳುತ್ತಿದ್ದುದುಂಟು. ನಾನು ಆಕೆಯನ್ನು 'ಅವ್ವ' ಅಂತ ಕರೆಯುತ್ತಿದ್ದೆ, ಯಾಕೆಂದರೆ ಅವಳು ನನಗೆ ಎರಡನೇ ಅಮ್ಮನಾಗಿದ್ದಳು. ನಾನಿನ್ನೂ ಪುಟಾಣಿ ಮಗುವಾಗಿದ್ದಾಗಲೇ, ಮುಂದೆ ಮಾತುಬಂದ ಮೇಲೆ ನಾನು ಆಕೆಯನ್ನು 'ಅವ್ವ' ಅಂತಲೇ ಕರೆಯಬೇಕೆಂದು ಆಸೆಪಟ್ಟಿದ್ದಳಂತೆ. ಅದಕ್ಕೋಸ್ಕರ 'ಅವ್ವ' ಎಂದೇಳುವ ಟ್ರೈನಿಂಗ್ ನೀಡಿದ್ದಾಗಿ ಅಮ್ಮ ಹೇಳುತ್ತಾಳೆ. ಅಮ್ಮನ ಟ್ರೈನಿಂಗ್‌ನಿಂದಾಗಿ ನಾನು ಮೊದಲ ಬಾರಿ ತೊದಲು ನುಡಿಯಲ್ಲಿ 'ಅವ್ವಾ' ಎಂದ ದಿನದ ಸಂಜೆ ಮನೆಗೆ ಬಂದ ಅವ್ವನಿಗೆ ಅಮ್ಮ ಖುಷಿಯಿಂದ ಆ ವಿಚಾರ ಹೇಳಿದ್ದಳಂತೆ. ನಾನು ಅವ್ವ ಅಂದಿದ್ದನ್ನು ಕೇಳಿಸಿಕೊಂಡ ಆಕೆ ಖುಷಿಯಿಂದ ಬಿಗಿಯಾಗಿ ನನ್ನನ್ನು ತಬ್ಬಿಕೊಂಡು ಅಳಲು ಶುರು ಮಾಡಿದ್ದಳಂತೆ.

ನಾನು ಚಿಕ್ಕವಳಿದ್ದಾಗ ವಾರಾಂತ್ಯದ ದಿನಗಳಂದು ಅವ್ವನ ಮನೆಗೆ ಹೋಗುತ್ತಿದ್ದೆ. ಶನಿವಾರ ಬಂತೆಂದರೆ, ಪಕ್ಕದಲ್ಲೇ ಇದ್ದ ಐಸ್‌ಕ್ರೀಮ್ ಪಾರ್ಲರ್‌ನಲ್ಲಿ ನಮಗೆಲ್ಲ ಐಸ್‌ಕ್ರೀಮ್




ರಾತ್ರಿಯಾಗಿರುತ್ತಿತ್ತು. ನಾವು ಯಾವಾಗಲೂ 'ಡೆತ್ ಬೈ ಚಾಕೊಲೇಟ'ನ್ನೇ ತಿನ್ನುತ್ತಿದ್ದೆವು. ನಮಗೆ ಕಥೆ ಹೇಳುವ ಪ್ರತಿ ಬಾರಿಯೂ ಅವ್ವ ಸಿಂಡ್ರೆಲ್ಲಾ ಕಥೆಗಳನ್ನು ಬದಲಿಸಿ ಬೇರೆಬೇರೆ ಆಯಾಮದಲ್ಲಿ ಹೇಳುತ್ತಿದ್ದಳು; ಅವಳ ಕಥೆಗಳಲ್ಲಿ ರಾಜಕುಮಾರಿ ದಿಟ್ಟ ಮತ್ತು ಹೋರಾಟದ ಗುಣದವಳು ಆಗಿರುತ್ತಿದ್ದಳು! ಪ್ರತಿ ರಂಜಾನ್ ಹಬ್ಬಗಳಲ್ಲಿ ನಮ್ಮನ್ನು ರಸೆಲ್ ಮಾರ್ಕೆಟ್‌ಗೆ ಕರೆದೊಯ್ಯುತ್ತಿದ್ದಳು. ಅಲ್ಲಿ ನಾವೆಲ್ಲ ಎಲ್ಲಾ ಬಗೆಯ ಮಾಂಸ ಖಾದ್ಯಗಳನ್ನು ತಿನ್ನುತ್ತಿದ್ದೆವು. ಅದರಲ್ಲಿ ಥರ್ಮಾಕೋಲ್ ಬಾಲ್‌ಗಳಂತೆ ಇರುತ್ತಿದ್ದ, ನಾನು ಈ ಮೊದಲು ಎಂದೂ ನೋಡಿರದಿದ್ದ ಐಸ್‌ಕ್ರೀಮ್ ಎಂದರೆ ಬಹಳ ಇಷ್ಟ. ನನಗೆ ಚೆನ್ನಾಗಿ ನೆನಪಿದೆ ಅವ್ವ ಶನಿವಾರ ಬಂದಾಗ, ಒಂದು ಗ್ಲಾಸ್ ವೈನ್ ಹೀರುತ್ತಾ, ಕೈಯಲ್ಲಿನ ಸಿಗರೇಟ್ ಸುಡುತ್ತಾ ಹಲವಾರು ವಿಚಾರಗಳ ಬಗ್ಗೆ ಮಾತಾಡುತ್ತಾ ಮಲಗುತ್ತಿದ್ದೆವು... ಆಕೆ ತುಂಬಾ ದಣಿದಿದ್ದಳು.

ಆಕೆ ಕೆಮ್ಮುತ್ತಾ, ಸರಿರಾತ್ರಿಯವರೆಗೆ ಎದ್ದಿರುತ್ತಿದ್ದುದನ್ನು ನೋಡಲು ಕಷ್ಟವಾಗುತ್ತಿತ್ತು, ವ್ಯಾಯಾಮ ಮಾಡುವಂತೆ ನಾನು ಆಗಾಗ ಅವ್ವನಿಗೆ ಹೇಳುತ್ತಿದ್ದೆ. ಆಕೆ ಎಂದೂ ಸರಿಯಾಗಿ ತಿಂದವಳೇ ಅಲ್ಲ, ಪ್ರತಿದಿನ ವಾಕಿಂಗ್‌ಗೆ ಹೋಗುವುದಾಗಿ ನನಗೆ ಪ್ರಾಮಿಸ್ ಮಾಡಿದ್ದ ಅವ್ವ ಕೆಲದಿನ ಹೋದಳಾದರೂ ಆಮೇಲೆ ನಿಲ್ಲಿಸಿಬಿಟ್ಟಳು. ಆಕೆ ಭಯಗೊಂಡಿದ್ದನ್ನು ನಾನು ಕಂಡೇ ಇಲ್ಲ ಅಂತ ಎಲ್ಲರ ಬಳಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೆ. ಅವಳು ಸದಾ ನಗುತ್ತಾ ಆತ್ಮವಿಶ್ವಾಸಿಯಾಗಿ ನನಗೆ ಕಾಣಿಸುತ್ತಿದ್ದಳು. ಸಂತಸದ, ನಗುಮೊಗದ, ಅಪಾರ ಪ್ರೀತಿ ತುಂಬಿದ ದಿಟ್ಟತನದ ಮೊಗ ಹೊತ್ತ ಆಕೆ ನನಗೆ ಯಾವತ್ತಿಗೂ 'ಅವ್ವ'ನಾಗೇ ಇರುತ್ತಾಳೆ. ಆಕೆ ಕೆಲವರ ಪಾಲಿಗೆ 'ಅಮ್ಮ'ನಾಗಿರಬಹುದು. ಮತ್ತೆ ಹಲವರಿಗೆ 'ಅಕ್ಕ'ನಾಗಿರಬಹುದು. ಆದರೆ 'ಅವ್ವ'ನ ಅವತಾರದಲ್ಲಿ ನನಗೆ ಮತ್ತು ನನಗೊಬ್ಬಳಿಗೆ ಮಾತ್ರವೇ ಆಕೆ ಸೀಮಿತ!!


■ ಇಶಾ ಲಂಕೇಶ್

ಆರ್ವೆಲ್ ನೆನಪುಗಳ ಮಧ್ಯೆ ವಿದಾಯ ಹೇಳಿದ ಗೌರಿ ಲಂಕೇಶ್



ಜಾರ್ಜ್ ಆರ್ವೆಲ್; ಪಿ.ಲಂಕೇಶ್ ಮೆಚ್ಚಿದ ಕಾದಂಬರಿಕಾರ, ಪತ್ರಕರ್ತ ಹಾಗೂ ಪ್ರಬಂಧಕಾರನಾಗಿದ್ದ. ಪಿ.ಲಂಕೇಶ್, ಗೌರಿ ಲಂಕೇಶ್‌ಗೆ ಆರ್ವೆಲ್‌ನ್ನು ಓದಿಸಿದ್ದ ನೆನಪು. ಪ್ರಭುತ್ವದ ಜೊತೆಗಿನ ಹೋರಾಟಗಳಲ್ಲಿ ಹಿಂಸೆಯು ರಕ್ತವಾಗಿ ಸಿಡಿಯುತ್ತದೆ, ಉನ್ಮತ್ತ ಅಧಿಕಾರ ಬೂಟುಗಾಲಲ್ಲಿ ತುಳಿಯುತ್ತದೆ, ಅಸಹಾಯಕ ವೈರಿಯನ್ನು ಮುಗಿಸಿಬಿಟ್ಟೆ ಎನ್ನುವ ಭಾವೋದ್ರೇಕ ಪ್ರಚ್ಛನ್ನವಾಗಿ ಕುಣಿಯುತ್ತದೆ. ಈ ದುಃಸ್ವಪ್ನದಿಂದ ನಾವೆಲ್ಲರೂ ನಾಳೆಯ ದಿನಗಳನ್ನು ಎತ್ತಬೇಕಾಗಿದೆ. ಒಂದು ವೇಳೆ ನೀವು ಭವಿಷ್ಯವನ್ನು ಸರಿಯಾಗಿ ಕಲ್ಪಿಸಿಕೊಳ್ಳಬೇಕೆಂದಿದ್ದರೆ, ಮನುಷ್ಯ ಮುಖವನ್ನು ಬೂಟುಗಾಲು ಮೆಟ್ಟುತ್ತಿರುವ ರಕ್ತಸಿಕ್ತ ಮುಖವನ್ನು ಚಿತ್ರಿಸಿಕೊಳ್ಳಿ, ಎಂದು ಬಿ.ಬಿ.ಸಿ. ಗೆ ಕೊಟ್ಟ 'ಕೊನೆಯ ಎಚ್ಚರಿಕೆ' **(A Final Warning)** ಎನ್ನುವ ಸಂದರ್ಶನದಲ್ಲಿ ಹೇಳಿದ್ದ. ಅವನು ಪ್ರಭುತ್ವದ ಅನೇಕ ಮುಖಗಳನ್ನು ಕೂಡಾ ಲೋಕದ ಎದುರು ಬಿಚ್ಚಿ ಇಟ್ಟಿದ್ದ. ರಾಷ್ಟ್ರೀಯತೆ ಎನ್ನುವುದೇ ತೃಪ್ತಿಗೊಳಿಸಲಾಗದ ಅಧಿಕಾರದ ದಾಹ, ಅಧಿಕಾರಸ್ಥರು ತಮ್ಮ ಆತ್ಮವಂಚನೆಗಳ ಮುಖಾಂತರ ಈ ಕ್ರಿಯೆಯನ್ನು ಹದಗೊಳಿಸಲು ಪ್ರಯತ್ನಿಸುತ್ತಾರೆ. ಎಡಪಂಥೀಯ ವಿಚಾರಗಳ ಬಗ್ಗೆ ಬಹಳ ಜನ ಮಾತನಾಡುತ್ತಾರೆ. ಅದು ಕೂಡಾ ಬೆಂಕಿಯ ಜೊತೆಗಿನ ಆಟವಿದ್ದಂತೆ. ಆ ಬೆಂಕಿಯೂ ಕೂಡಾ ನಮ್ಮನ್ನು ಸುಟ್ಟು ಹಾಕುತ್ತದೆ ಎನ್ನುವುದು ಬಹಳ ಜನರಿಗೆ ಗೊತ್ತಾಗುವುದಿಲ್ಲ. ಇವೆಲ್ಲವೂ ಮೋಸದ ವಿಚಿತ್ರ ಮುಖವಾಡಗಳು ಎಂದು ಕಾಲಜ್ಞಾನಿಯಂತೆ ಪ್ರಕಟಪಡಿಸಿದ್ದ.

ಪಿ.ಲಂಕೇಶ್ ಬದುಕಿದ್ದಾಗ ಯಾವ ಪಕ್ಷದ ಪರವಾಗಿಯೂ ಇರಲಿಲ್ಲ. ಆದರೆ, ಸುತ್ತಲಿನ ಸಮಾಜವು ಚಲನಶೀಲವಾಗಿದ್ದುಕೊಂಡು, ಬದಲಾವಣೆಗೆ, ಹೊಸ ಕ್ಷಿತಿಜಗಳಿಗಾಗಿ ಹಾರೈಸಬೇಕೆನ್ನುವುದು ಅವರ ಗಾಢವಾದ ಹಂಬಲವಾಗಿತ್ತು. ಸ್ವಾತಂತ್ರ್ಯಾನಂತರ ಒಬ್ಬಂಟಿಯಾದ ಗಾಂಧೀಜಿ, ಕೊನೆಗಾಲದವರೆಗೂ ಸಮಾಜವಾದದ ಹೊಸ ಪರಿಭಾಷೆಗಾಗಿ ತಡವರಿಸುತ್ತಿದ್ದ ಲೋಹಿಯಾ ಅವರಿಗೆ ಮಾದರಿಗಳಾಗಿದ್ದರು. ಎಲ್ಲರ ಜೊತೆಗಿದ್ದು, ಜಡವಾದ ಎಲ್ಲವನ್ನೂ ಧಿಕ್ಕರಿಸುವ, ನಿಷ್ಕ್ರಿಯವಾದದ್ದನ್ನು ನಿಷ್ಠುರಣೆಯಾಗಿ ನಿರಾಕರಿಸುವ ಛಲ ಅವರಲ್ಲಿತ್ತು, ಎಲ್ಲ ರಾಜಕೀಯ ಪಕ್ಷಗಳು ವಿಶಿಷ್ಟ ಕೊಳಚೆ ಪ್ರದೇಶಗಳೆನ್ನುವ ಲೌಕಿಕ ಅನುಭವವಿತ್ತು, ನಾಡಿನ ಎಲ್ಲ ವರ್ಗಗಳ ಜನರ ಅಂತಃಸಾಕ್ಷಿಯನ್ನು ಜಾಗೃತಗೊಳಿಸುವ ದೈವಿಕ ಸ್ಪರ್ಶವಿತ್ತು, ಅವರು ಉಕ್ಕಿ ಹೊಯ್ದಾಡುವ ಸಮುದ್ರದ ಒಡೆಯನಂತಿದ್ದ. ಅವರ ಪ್ರತಿ ವಾರದ ಲೇಖನಗಳು ಜನರ ಆತ್ಮಸಾಕ್ಷಿಯ ಆಸ್ಫೋಟಗಳಂತಿರುತ್ತಿದ್ದವು. ಅಲ್ಲಿಯ ನೈತಿಕ ಚೈತನ್ಯ ಪ್ರಭುತ್ವದ ವಾರಸುದಾರರ ಎದೆಯಲ್ಲಿ ಬೆಂಕಿ ಬಿದ್ದಂತೆ ಭಯ ಹುಟ್ಟಿಸುತ್ತಿತ್ತು, ಪ್ರತಿ ವಾರದ ಲಂಕೇಶ್ ಪತ್ರಿಕೆ ಪ್ರತಿಯೊಬ್ಬ ವ್ಯಕ್ತಿಯ ಪ್ರತಿವಾರದ ಅಗ್ನಿಪರೀಕ್ಷೆಯಂತಿರುತ್ತಿತ್ತು. ಅವರಿಗೆ ಕಾಂಗ್ರೆಸ್, ಬಿ.ಜೆ.ಪಿ., ಕಮ್ಯುನಿಸ್ಟರು ಸಮಾನ ವಿರೋಧಿಗಳಾಗಿದ್ದರು. ಹಿಂಸೆಯ ಮೂಲಕ ನಿಜವಾದ ಸ್ವಾತಂತ್ರ್ಯ ಪಡೆಯಲಾಗುವುದಿಲ್ಲ ಎಂದು ಹೇಳುತ್ತಲೇ ನಕ್ಸಲ್‌ವಾದ, ಮಾವೋವಾದ, ರಾಷ್ಟ್ರೀಯ ಸ್ವಯಂ ಸೇವಕ ದಳದ ಚಟುವಟಿಕೆ ಗಳನ್ನು ಧಿಕ್ಕರಿಸಿದ್ದರು. ಎಡಪಂಥೀಯ ವಿಚಾರಧಾರೆಗಳ ಸೋಗಿನ ಮಾತುಗಳನ್ನು ಸೀಳಿ ನೋಡುವುದರಲ್ಲಿ ಲಂಕೇಶ್ ವಿಶಿಷ್ಟ ಪರಿಣತಿ ಹೊಂದಿದ್ದರು. ಈ ಬಗೆಗಿನ ಲಂಕೇಶ್ ಹಾಗೂ ಅನಂತಮೂರ್ತಿ ಮಧ್ಯದ ವಾಗ್ವಾದಗಳು ಕನ್ನಡ ಸಾಹಿತ್ಯದ ವೈಚಾರಿಕ ಪ್ರಬುದ್ಧತೆಯ ಚಿನ್ನದ ಗರಿಗಳಂತಿವೆ. ಗಾಂಧೀಜಿ, ಲೋಹಿಯಾ ಬರೀ ಹೆಸರುಗಳಾಗಿ ರಲಿಲ್ಲ, ಲಂಕೇಶ್ ದೇಹದಲ್ಲಿ ಹರಿಯುವ ರಕ್ತವಾಗಿದ್ದರು. ಲಂಕೇಶ್ ಗ್ರಾಮೀಣ ಹಾಗೂ ರೈತರ ಬದುಕಿನ ನೋವು, ಯಾತನೆಗಳನ್ನು ತಮ್ಮ ಕತ್ತು ಕೊಟ್ಟು ಪಡೆದವರಂತೆ ಬರೆಯುತ್ತಿದ್ದರು. ಆ ನೋವನ್ನೆಲ್ಲ ಕನ್ನಡದ ವಿಶಿಷ್ಟ ನುಡಿಗಳಲ್ಲಿ ಬೆಂಕಿಯ ಬಾಣಗಳಂತೆ ಬಿಡುತ್ತಿದ್ದರು. ಹೀಗಾಗಿ, ಕತೆ, ಕಾದಂಬರಿ, ಕಾವ್ಯ, ನಾಟಕಗಳ ಕಕ್ಷೆ ದಾಟಿ ಸಾಮಾನ್ಯ ಜನರ ಬದುಕನ್ನು ಪ್ರವೇಶಿಸಿದರು. ಇದು ನಿರ್ವಿಕಲ್ಪ ಅನುಸಂಧಾನವಾಗಿತ್ತು, ಅವರಿಗೆ ವಜ್ರಕಾಯ ಪ್ರಾಪ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಲಂಕೇಶ್ ಮುಟ್ಟಿ ನೋಡುವ ಧೈರ್ಯ ಭೂಮಿಯ ಮೇಲಿನ ಯಾವ ಶಕ್ತಿಗೂ ಇರಲಿಲ್ಲ. ಅದು ಸೈದ್ಧಾಂತಿಕ ಬದ್ಧತೆಯ ಸುವರ್ಣಕಾಲವಾಗಿತ್ತು, ಅದು ನಾಡು ಕಂಡ ವೈಚಾರಿಕ ಹದದ ಉನ್ನತ ಸಮಯವಾಗಿತ್ತು.




ಗೌರಿ ಲಂಕೇಶ್; ಪಿ. ಲಂಕೇಶ್ ಹೇಳಿದ ಅಥವಾ ಸ್ವೀಕರಿಸಿದ ಮೇಲಿನ ಕತೆಯ ಅರ್ಧಭಾಗವನ್ನು ಕೇಳಿ, ಅರ್ಧಭಾಗವನ್ನು ಮರೆತ ಮಗಳಂತೆ ಕಾಣುತ್ತಾಳೆ. ಪ್ರಭುತ್ವದ ಹಲವಾರು ವಿಘಟಿತ ಶಕ್ತಿಗಳ ಮಧ್ಯೆ ಅವುಗಳ ಕ್ರಾಸ್‌ಫೈರ್‌ನಲ್ಲಿ ಅಸುನೀಗಿದ್ದು, ಅರ್ಧ ಕತೆ ಮರೆತದ್ದರ ಪರಿಣಾಮವೆಂಬಂತೆ ಕಾಣುತ್ತದೆ. ವರ್ತಮಾನದಲ್ಲಿ ಅಧಿಕಾರದ ಹಸಿವೆ ಹಾಗೂ ಜಾತಿವ್ಯವಸ್ಥೆಗಳು ಹೊಸ ಅಧೋಬಿಂದುಗಳನ್ನು ಮುಟ್ಟಿವೆ. ಎಚ್ಚರದ ನಡಿಗೆ ಇರದೆಹೋದಲ್ಲಿ ಅಪಾಯ ನಿಶ್ಚಿತವೆನ್ನುವಂತಾಗಿದೆ.

ಗೌರಿ ಲಂಕೇಶ್ ಸಾವಿಗೆ ದೇಶವೇ ಬೆಚ್ಚಿ ಬಿದ್ದಿದೆ. ದೇಶದ ಎಲ್ಲ ವಿಚಾರವಾದಿಗಳು ತಮ್ಮ ತಮ್ಮ ಸಾವನ್ನೇ ಕಂಡಷ್ಟು ಭಯಗೊಂಡಿದ್ದಾರೆ. ಬಹಳಷ್ಟು ವಿಚಾರವಾದಿಗಳು ತಮ್ಮ ಜಾಕೀಟುಗಳ ಮಧ್ಯೆ ತಮ್ಮ ತಮ್ಮ ದೇಹಗಳನ್ನು ಬೆಚ್ಚಗೆ ಇಟ್ಟುಕೊಂಡು, ಕ್ರಾಂತಿಯನ್ನು ಭಾಷಣಗಳಿಗೆ ಸೀಮಿತಗೊಳಿಸಿ, ರವಿವಾರದ ಸೆಮಿನಾರುಗಳಲ್ಲಿ ಬೀಗುತ್ತ, ತಮ್ಮ ಬೌದ್ಧಿಕ ವಿರಾಟ್ ರೂಪಗಳನ್ನು ಸುಖಿಸುವ ಆತ್ಮಾರಾಧಕರಾಗಿದ್ದಾರೆ. ಇಂದು ವಿಚಾರವಾದಿಗಳು, ಪ್ರಭುತ್ವದ ಪಾಲುಗಾರಿಕೆ ಸಿಕ್ಕರೆ, ಕೂಡಲೇ ವ್ಯವಸ್ಥೆಯ ಜೊತೆಗೆ ಕರಗಿ ಹೊಂದಾಣಿಕೆ ಮಾಡಿಕೊಳ್ಳುವ ಪರಿ ಪವಾಡದಂತೆಯೇ ಕಾಣುತ್ತದೆ. ದೇಶದ ಬಹುತೇಕ ಬುದ್ಧಿಜೀವಿಗಳು ಪಕ್ಷ ರಾಜಕಾರಣದ ಪಾಲಾಗಿದ್ದಾರೆ. ಆಯಾ ಪಕ್ಷಗಳ ಬುದ್ಧಿಜೀವಿಗಳ ಕೋಟಾದ ಫಲಾನುಭವಿಗಳಾಗಿದ್ದಾರೆ. ಬುದ್ಧಿಜೀವಿಗಳ ಗಟ್ಟಿಯಾದ, ಸ್ವತಂತ್ರ ಮನೋಭಾವನೆಯ ಚಳವಳಿಯೇ ಇಲ್ಲದಂತಾಗಿದೆ. ತಮ್ಮ ಕಲ್ಪಿತ ಆದರ್ಶಗಳಿಗಾಗಿ, ವಾಸ್ತವದಲ್ಲಿ ಯಾರಾದರೂ ಹೋರಾಡುತ್ತ ಸತ್ತರೆ ಅವರ ಹೆಣವನ್ನು ನೋಡಿ ಬೆಚ್ಚಿ ಬೀಳುತ್ತಾರೆ. ತಮ್ಮ ನಟನೆಗೆ ಅನುಗುಣವಾಗಿ ತಮ್ಮದಾಗಬೇಕಾಗಿದ್ದ ಆ ಹೆಣ ಬೇರೆಯವರದಾಗಿದ್ದರಿಂದ ಅವರಲ್ಲಿ ಅದು ವಿಚಿತ್ರ ದಿಗ್ಭ್ರಮೆ ಹಾಗೂ ಕ್ಷೋಭೆಗೆ ಕಾರಣವಾಗುತ್ತದೆ. ಹೇಳಿಕೆಗಳ ಹೊಸ ಸರ್ಕಸ್ಸಿಗೆ ಹಾದಿ ಮಾಡಿಕೊಡುತ್ತದೆ. ವಿಚಿತ್ರವಾಗಿ ಚೀರುತ್ತಾರೆ. ದಿಟ್ಟವಾಗಿ ವ್ಯವಸ್ಥೆಯ ವಿರುದ್ಧ ಹೋರಾಡಿ ಮಡಿದ ಗೌರಿ ಲಂಕೇಶ್, ಈ ವಿಚಾರವಾದಿಗಳ ವಿನೂತನ ವ್ಯವಸ್ಥೆಯ ಬಲಿಯಂತೆ ಕಾಣುತ್ತಾರೆ. ಪಕ್ಷ ರಾಜಕಾರಣಗಳ ಜೊತೆ ಜೊತೆಗೆ ವಿಚಾರವಾದಿಗಳ ಚೀರಾಟಗಳು ಕೂಡಾ ವರ್ತಮಾನದ ಹೊಸ ಅವಾಂತರಗಳಾಗಿವೆ. ಹುರಿಗೊಂಡ ವೈಚಾರಿಕ ಸಂಘಟನೆಯ ಕೊರತೆಯಿಂದಾಗಿ, ಮಾಗಿದ ಧ್ವನಿಗಳ ಅಭಾವದಿಂದಾಗಿ, ಸದಾ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಗೌರಿ ಲಂಕೇಶ್ ಅಂಥವರ ಚಟುವಟಿಕೆಗಳಿಗೆ ಪೋಷಕವಾಗಿ ನಿಲ್ಲಬೇಕಾಗಿದ್ದ ಹ... ಆವರಣವೊಂದು ಇಲ್ಲದೇ ಹೋದ ದ್ದರಿಂದ, ... ಲಂಕೇಶ್ ಅಂಥವರು ಕೊನೆಯ ವರೆ... ಒಬ್ಬಂಟಿಯಾಗಿಯೇ ಉಳಿದರು. ಇದು ದೇಶದ ದು... ವಾಗಿದೆ: ಹಾಗೆ ನೋಡಿದರೆ ವರ್ತಮಾನದಲ್ಲಿ ಈ... ಒಂದು ರೀತಿಯ ಜಾಗತಿಕ ಹತಾಶೆ ಇದೆ.

ಗೌರಿ ಲಂಕೇಶ್ ಬಳಿ ಇದ್ದ ಬಲುದೊಡ್ಡ ಗುಣವೆ... ಎಲ್ಲರಿಗೂ ಅವರು ತೋರಿಸುತ್ತಿದ್ದ ಅಖಂಡ... ಪ್ರೀತಿಯಾಗಿದೆ. ಮರಣಾನಂತರ ಅವರನ್ನು ನೋ... ಬಂದ ಯುವ ಸಮುದಾಯವನ್ನು ನೋಡಿದರೆ ಲಂ... ಬರೆದಿದ್ದ 'ಅವ್ವ' ನ ನೆನಪಾಗುತ್ತಿತ್ತು, ಆಕೆ ಬಸದ ಕರಡ... ಹಾಗೆ ಯುವಕರ ಪಡೆಯನ್ನೇ ಸೃಷ್ಟಿಸಿದ್ದಳು. ಆಕೆ... ಯುವಕರು ಹೊಸ ವಿಶ್ವಾಸಾರ್ಹತೆ ಕಂಡಿದ್ದರು. ಲಂಕೇಶ್ ಶುದ್ಧ ನೀರಿನ ಸೆಲೆಯಂತೆ ಎಲ್ಲರ ಪ್ರೀ... ದಾಹಕ್ಕೆ ಸಂತೃಪ್ತಿ ಕೊಟ್ಟಿದ್ದರು. ಎಲ್ಲರ ಕಷ್ಟಕ್ಕೆ ಮಿಡಿಯ... ರೀತಿಯೂ ಕೂಡಾ ಅನುಪಮವಾಗಿತ್ತು, ನಮಗೆಲ್ಲ ತಂ... ಕಡೆಯವರು ಎನ್ನುವ ಬಿರುದು ಇತ್ತು, ಆ ವಿಶ್ವಾಸ ಬ... ಮತ್ತೊಬ್ಬರಲ್ಲಿ ಕಂಡುಕೊಳ್ಳುವುದು ಬಹಳಷ್ಟು ... ಕೆಲಸ ಎನ್ನುವುದು ನಮ್ಮೆಲ್ಲರಿಗೆ ಗೊತ್ತಿದೆ. ತಂದೆಗ... ಮಗಳಾಗಿ ತನ್ನನ್ನು ತಾನು ರೂಪಿಸಿಕೊಂಡು, ... ಹೊಣೆಗಾರಿಕೆಯ ಜೊತೆಜೊತೆಗೆ ಅಸಹಾಯಕರ ಬದು... ಒಂದಿಷ್ಟು ಬೆಳಕು ಕೊಡಲು ಪ್ರಯತ್ನಿಸಿದ ಗೌರಿ ಲಂ... ಮಾನವತಾವಾದದ ನೂತನ ಪ್ರತಿನಿಧಿಯಂತೆ ಕಂಡ...


ವ್ಯಕ್ತಿಗತವಾಗಿ ತನ್ನ ಸಂಪರ್ಕದ ಆವರ್ತದಲ್ಲಿ ... ಒಂದೊಂದು ಹೃದಯವನ್ನೂ ವಿಶೇಷವಾದ ಹೂವೆನ್ನು... ಮೇಲೆತ್ತುತ್ತಿದ್ದಳು, ಅವುಗಳಲ್ಲಿಯ ಸಣ್ಣ ಸಣ್ಣ ಪಿಸುದನಿಗ... ಆದ್ಯಂತವಾಗಿ ಆಲಿಸುತ್ತಿದ್ದಳು. ಕೊನೆಕೊನೆಗೆ ... ಹಕ್ಕಿಯಂತೆ ಕಾಣುತ್ತಿದ್ದ ಗೌರಿ ಲಂಕೇಶ್, ಅಂತರಂಗ... ಬನದ ಕರಡಿಯಾಗಿದ್ದಳೆನ್ನುವುದು ಸಮೀಪವರ್ತಿಗ... ಮನದ ಮಾತಾಗಿದೆ.

ಜಾರ್ಜ್ ಆರ್ವೆಲ್ ಹೇಳಿದ ಕೊನೆಯ ಮಾ... 'ಜನರು ರಾತ್ರಿಯಲ್ಲಿ ತಮ್ಮ ತಮ್ಮ ಹಾಸಿಗೆಗಳಲ್ಲಿ ಸುಖ... ನಿದ್ರಿಸುತ್ತಾರೆ, ಯಾಕೆಂದರೆ ಹೊರಗಡೆ ತಮ್ಮನ್ನು ಕಾ... ಕೆಲವು ಕಾವಲುಗಾರರಿದ್ದಾರೆಂದು,' ಆದರೆ ಇಂದು ಅ... ಕಾವಲುಗಾರರ ಕೊಲೆಯಾಗಿದೆ. ಜನರು ಸುಖ... ನಿದ್ರಿಸಲು ಸಾಧ್ಯವಿಲ್ಲ, ಗೌರಿ ಲಂಕೇಶ್ ಸಾವಿನ ದಿ... **am also Gauri'** ಎಂದು ಹಲವಾರು ಯುವ... ಯುವತಿಯರು ಕೈಯಲ್ಲಿ ಭಿತ್ತಿಪತ್ರಗಳನ್ನು ಹಿಡಿದಿ... ಆ ಭಿತ್ತಿಪತ್ರಗಳ ಬಿಳಿ ಹಾಳೆಯ ಮೇಲಿನ ಅಕ್ಷರ... ವ್ಯಕ್ತಿತ್ವವಾಗಿ ಅರಳಿದರೆ, ಈ ದೇಶದ ಭವ... ಎಂತಹ ಕೆಚ್ಚು ಪ್ರಾಪ್ತವಾದೀತು ಎನ್ನುವ... ಕಣ್ಣೆದುರಿನ ಸಾವನ್ನು ಕಿಂಚಿತ್ ಹಸ... ಗೊಳಿಸಿತ್ತು. ಗೌರಿ ಲಂಕೇಶ್ ಮಣ್ಣಿನ ... ಹೊಸ ಮಣ್ಣಾಗಿ ಸೇರಿಕೊಳ್ಳುತ್ತ ಹೊಸ ... ಜೀವಕೊಡಲಿ ಎನ್ನುವುದು ನಲುಗ... ಹೃದಯದ ಸಣ್ಣ ಪ್ರಾರ್ಥನೆ ಮಾತ್ರ ಆ...



ಎಸ್.ಎಫ್.ಯೋಗಪ್ಪನವ...

ಗೌರಿ ದೇಹಾಂತ್ಯ



ಗೌರಿ ಲಂಕೇಶ್ ಅವರ ಕೊಲೆಗಡುಕರು ಯಾರು? ಅವರ ಉದ್ದೇಶ ಏನಿತ್ತು? ಈ ಕೊಲೆಗೆ ಸೈದ್ಧಾಂತಿಕ ಕಾರಣಗಳಿದ್ದವೆ? - ಈ ಪ್ರಶ್ನೆಗಳ ಕುರಿತು ತಲೆಬುಡವಿಲ್ಲದ ಊಹಾಪೋಹಗಳನ್ನಷ್ಟೆ ನಡೆಸಬಹುದು. ಆದರೆ ಒಂದು ಮಾತಂತೂ ಖಾತ್ರಿ. ಗೌರಿ ಅವರ ರಾಜಕೀಯ ನಿಲುವುಗಳನ್ನು ಹಲ್ಲು ಕಚ್ಚಿ ವಿರೋಧಿಸುವವರು ಸಾಕಷ್ಟು ಜನ ಇದ್ದರು. ಗೌರಿ ತನ್ನ ಅಭಿಪ್ರಾಯಗಳನ್ನು ವಿರೋಧಿಸುವವರ ಜೊತೆಗೆ ಘನತೆ ಗೌರವಗಳಿಂದ ವರ್ತಿಸುತ್ತಿದ್ದರು. ಆದಾಗ್ಯೂ ಅವರಿಗೆ ಎಡೆಬಿಡದೆ 'ದ್ವೇಷ ಅಂಚೆ' ರವಾನೆಯಾಗುತ್ತಿತ್ತು, ಇಂತಹ ಅಂಚೆಯನ್ನು ಪೋಸ್ಟ್ ಮಾಡುತ್ತಿದ್ದ ಫೇಸ್‌ಬುಕ್‌ನ ಮುಖಹೀನರ ಜೊತೆಗೆ ನಾಡಿನ ಪಟ್ಟಭದ್ರರಲ್ಲೂ, ಬಹುತೇಕರಿಗೆ ಗೌರಿಯವರ ಬಗ್ಗೆ ದ್ವೇಷವಿತ್ತು, ಗೌರಿಗೆ, ತನಗೆ ಕಾದಿರುವ ಅಪಾಯದ ಅರಿವು ಇದ್ದಿರಬಹುದು. 2014ರಲ್ಲಿ ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ದಿನ ಅವರು ಅಪರೂಪಕ್ಕೆ ನನಗೆ ಫೋನ್ ಮಾಡಿದ್ದರು. ತನ್ನ ದುಗುಡ, ತಲ್ಲಣಗಳನ್ನು ಯಾರ ಬಳಿಯಾದರೂ ಅವರಿಗೆ ಹೇಳಿಕೊಳ್ಳಲೇಬೇಕಿತ್ತು, ಆ ವೇಳೆಗಾಗಲೇ ಅವರ ಮೇಲೆ ಎಳೆಂಟು ಕ್ರಿಮಿನಲ್ ಕೇಸುಗಳು ದಾಖಲಾಗಿದ್ದವು. ಇನ್ನು ಮುಂದೆ ಏನು ಕಾದಿದೆಯೋ ಎಂದು ಗೌರಿ ಕಂಗಾಲಾಗಿದ್ದರು. ಆದರೆ ಅವರು ಹಾಗೆ ಹೆಚ್ಚು ಹೊತ್ತು ಮಂಕು ಹಿಡಿದು ಕೂರುವವರಲ್ಲ ಎಂದು ನನಗೆ ಗೊತ್ತಿತ್ತು, ಮಹಾ ಛಲಗಾತಿಯಾದ ಗೌರಿ, ತನ್ನ ಎಂದಿನ ಲವಲವಿಕೆಯ ದಿನಚರಿಗೆ ಮರಳಿದರು. ಕಡೆಯ ಬಾರಿ ನಾನು ಅವರನ್ನು ಕಂಡದ್ದು 2016ರ ಅಕ್ಟೋಬರ್ 9 ರಂದು; 'ಉಡುಪಿ ಚಲೋ' ಸಮಾರೋಪ ಸಭೆಯಲ್ಲಿ; ಸೊರಗಿದ್ದರೂ ಅವರು ಹಸನ್ಮುಖಿಯಾಗಿದ್ದರು, ಚೈತನ್ಯಭರಿತರಾಗಿದ್ದರು. ಆ ಕಾರ್ಯಕ್ರಮದ ಸಲುವಾಗಿ ಅವರು ಪತ್ರಿಕೆಯ ಒಂದು ವಿಶೇಷ ಸಂಚಿಕೆಯನ್ನು ಹೊರತಂದಿದ್ದರು.


ಗೌರಿಯವರ ತಂದೆಯವರ ಕಾಲದಿಂದಲೂ ಪತ್ರಿಕೆ, ಹಿಂದುತ್ವದ ಸಿದ್ಧಾಂತ, ಸಂಘ ಪರಿವಾರದ ಕ್ರಿಮಿನಲ್ ಕೃತ್ಯಗಳು ಮತ್ತು ಬಿ.ಜೆ.ಪಿ ರಾಜಕೀಯಕ್ಕೆ ಪ್ರಬಲ ಪ್ರತಿರೋಧ ಮಾಧ್ಯಮವಾಗಿತ್ತು, ದೇಶದಲ್ಲಿ ಜೀವಹಿಂಸೆಯ ಒಂದು ಹೊಸ ಶಕೆಯನ್ನೇ ಶುರು ಮಾಡಿದ ರಾಮಜನ್ಮಭೂಮಿ ಚಳವಳಿ ಹಾಗೂ ಬಿ.ಜೆ.ಪಿ.ಯ ವಾಜಪೇಯಿ ಸರಕಾರದ ಅಧಿಕಾರಾವಧಿಯಲ್ಲಿ ನಡೆದ ಅಣು ಅಸ್ತ್ರ ಪ್ರಯೋಗಗಳ ವಿರುದ್ಧ ಪತ್ರಿಕೆ ಪ್ರಚೋದಿಸಿದ ಜನಾಂದೋಲನ, ಕರ್ನಾಟಕದಲ್ಲಿ ಜನಪರ ಚಳವಳಿಗಳ ಶೂನ್ಯತೆಯನ್ನು ತುಂಬಿಕೊಟ್ಟಿತ್ತು. ಪತ್ರಿಕಾ ಮಾಧ್ಯಮದಲ್ಲಿ ಲಂಕೇಶ್ ಹಾಕಿಕೊಟ್ಟ ಆ ಪರಂಪರೆಯನ್ನು ಅವರ ಮಗಳು ಇದುವರೆಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಅನೇಕ ಓದುಗರು ಲಂಕೇಶ್ ಜೊತೆಗೆ ಗೌರಿಯವರನ್ನು ಹೋಲಿಸಿ, ತಂದೆಯ ಗದ್ಯದ ಖಾರ, ಒಗರು ಮತ್ತು ಹರಿತ ಮಗಳ ಬರಹಗಳಲ್ಲಿ ಕಾಣುವುದಿಲ್ಲ ಎಂದು ಕೊರಗುವುದುಂಟು. ಲಂಕೇಶ್‌ರ ಗದ್ಯಕ್ಕೆ ಚಾಟಿ ಏಟಿನಂತೆ ನಮ್ಮನ್ನು ಎಚ್ಚರಿಸುವ ಗುಣ ಇತ್ತು; ಹಾಗೆಯೇ ಒಮ್ಮೊಮ್ಮೆ ತನ್ನ ವಿಶಿಷ್ಟ ಶೈಲಿಯಿಂದ ನಮ್ಮನ್ನು ಮೋಡಿ ಮಾಡಿ ಪರವಶಗೊಳಿಸುವ ಶಕ್ತಿಯೂ ಆ ಗದ್ಯಕ್ಕಿತ್ತು. ಸ್ವತಃ ಲಂಕೇಶ್‌ಗೆ ಅಂತಹ ಗದ್ಯ ಶೈಲಿಯ ಬಗ್ಗೆ ಆಕರ್ಷಣೆಯೂ ಇತ್ತು; ಹೇವರಿಕೆಯೂ ಇತ್ತು, ಜನಪ್ರಿಯತೆ ಬಗ್ಗೆ ಕೂಡ ಅವರಿಗೆ ಅಂತಹದೇ ಮೆಚ್ಚುಗೆ ಮತ್ತು ತಿರಸ್ಕಾರದ ಭಾವನೆಗಳಿದ್ದವು. ಒಂಟಿಯಾಗಿ ಅಸಹಾಯಕನೂ, ದುರ್ಬಲನೂ ಆಗಿರುವ ಮನುಷ್ಯ ಗುಂಪಿನಲ್ಲಿ, ಯಾವುದೇ ಗುಂಪಿನಲ್ಲಿ ಒಬ್ಬನಾಗಿ ಮೃಗದಂತೆ ವರ್ತಿಸುವ ವಿಪರ್ಯಾಸವೂ ಅವರಿಗೆ ಗೊತ್ತಿತ್ತು, ಹಾಗಾಗಿ ಅವರ ಕತೆ ಕವಿತೆ ಕಾದಂಬರಿ ನಾಟಕ ಚಲನಚಿತ್ರಗಳಲ್ಲಿ ದಮನ, ನೋವು, ಹಿಂಸೆ, ಶೋಷಣೆಗಳ ಚಿತ್ರಣವಿದೆ; ಆದರೆ ಶೋಷಕರು ಮತ್ತು ಶೋಷಿತರು ಎಂಬ ಅಚಲವೂ, ಶಾಶ್ವತವೂ ಆದ ಪ್ರಭೇದಗಳಿಲ್ಲ, ಚಲನಶೀಲ ಬದುಕಿನಲ್ಲಿ ಅವು ಸಂದರ್ಭಕ್ಕೆ ತಕ್ಕಂತೆ ಬದಲಾಗುವ ಪಾತ್ರಗಳು.

ನನಗೆ ಗೊತ್ತಿರುವ ಮಟ್ಟಿಗೆ, ಗೌರಿ ಕೆಲವು ಅನುವಾದ... ಹೊರತುಪಡಿಸಿ ಪತ್ರಿಕೆಯ ಸಂಪಾದಕತ್ವ ಮತ್ತು ... ಬರವಣಿಗೆಗಳಲ್ಲಿ ಮಾತ್ರ ತಮ್ಮನ್ನು ತೊಡಗಿಸಿಕೊಂ... ಲಂಕೇಶ್‌ರಷ್ಟು ವಿಸ್ತಾರವೂ ವೈವಿಧ್ಯಮಯವೂ ... ಕಾರ್ಯಕ್ಷೇತ್ರ ಅವರದ್ದಲ್ಲ, ಆದರೆ ಬದುಕು ಮತ್ತು ಬರ... ಕುರಿತು ಕೆಲವು ಮೂಲಭೂತ ಪಾಠಗಳನ್ನು ಗೌರಿ, ತಂದೆಯಿಂದ ಕಲಿತಿದ್ದಾರೆ. ಪತ್ರಿಕೆ ನಿರಂತರ... ಪ್ರತಿಪಾದಿಸುತ್ತ ಬಂದಿರುವ ಸಮಾಜವಾದ ... ಹಿಂದುತ್ವದ ವಿರುದ್ಧ ವ್ಯಕ್ತಪಡಿಸುತ್ತಿರುವ ಪ್ರತಿರೋ... ಮಟ್ಟಿಗೆ ಹೇಳುವುದಾದರೆ, ಲಂಕೇಶ್‌ರಿಗಿಂತ ಅವರ ಮ... ಹೆಚ್ಚು ನಿಖರವಾಗಿ ಮತ್ತು ಹೋಮ್‌ವರ್ಕ್‌ನೊ... ಬರೆದಿದ್ದಾರೆ. ಪತ್ರಿಕೆ ಈಗ ಮೊದಲಿನ ಹಾಗಿಲ್ಲ ... ಹೇಳುವ ಹೆಚ್ಚಿನವರ ಮಾತಿಗೆ ನಾನು ಬೆಲೆ ಕೊಡುವ... ಅವರು ಪತ್ರಿಕೆಯ ಓದು ನಿಲ್ಲಿಸಿ ಹಲವು ವರ್ಷಗ... ಎಂಬ ಸತ್ಯವನ್ನು ನಾನು ಕಂಡುಕೊಂಡಿದ್ದೇನೆ.

ನರೇಂದ್ರ ದಾಬೋಲ್ಕರ್, ಗೋವಿಂದ್ ಪ... ಎಂ.ಎಂ.ಕಲಬುರ್ಗಿ ಈಗ ಗೌರಿ ಲಂಕೇಶ್ - ... ಕಾಲದ ಹಿಂಸೆ ಕುರಿತ ಚಿಂತನೆ ಈ ನಾಲ್ಕು ಹೆಸರು... ಮಾತ್ರ ಯಾಕೆ ಸೀಮಿತವಾಗಿರಬೇಕು? ವಿಚಾರವಾದಿ... ಪತ್ರಕರ್ತರು ಮತ್ತು ಚಿಂತಕರ ಜೊತೆ ಈ ದ... ಅಸಂಖ್ಯ ಮುಸ್ಲಿಮರು, ಕ್ರೈಸ್ತರು, ದಲಿತರು ಹಾ... ಆದಿವಾಸಿಗಳು ಹಿಂಸೆಗೆ ಬಲಿಯಾಗಿದ್ದಾರೆ. ಈ ಪೈಕಿ ... ಕೆಲವು ಹೆಸರುಗಳು- ಮೊಹಮ್ಮದ್ ಅಖ್ಲಾಕ್, ರೋ... ವೇಮುಲ, ಪೆಹ್ಲು ಖಾನ್, ಹಾಫೀಜ್ ಜುನೈದ್ ... -ತಕ್ಷಣ ನೆನಪಿಗೆ ಬರುತ್ತಿವೆ, ಆ ಕೊಲೆಗಳ ಸಂ... ಸನ್ನಿವೇಶಗಳೂ ನೆನಪಾಗುತ್ತಿವೆ. ಹಿಂಸೆ, ದಬ್ಬಾಳಿಕೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore 4. Phone ...
Fax : 26604536, E-mail :lankesh70@rediff...

ಇತಿಹಾಸವಾದ ರೆಬೆಲ್ ಹುಡುಗಿ



ಹಂತಕರ ಗುಂಡಿಗೆ ಬಲಿಯಾದ ಗೌರಿ ಲಂಕೇಶ್‌ಗೆ ಅವರ ಮಾಜಿ ಪತಿ, ಹಿರಿಯ ಪತ್ರಕರ್ತ, ನ್ಯೂಯಾರ್ಕ್‌ನಲ್ಲಿ ಟೈಮ್ಸ್ ಆಫ್ ಇಂಡಿಯಾದ ಸ್ಥಾನಿಕ ಸಂಪಾದಕರಾಗಿರುವ ಚಿದಾನಂದ ರಾಜ್‌ಘಟ್ಟ ಹಾಗೂ ಅವರ ಪತ್ನಿ ಮೇರಿ ಬ್ರೀಡಿಂಗ್ ಅವರ ಹೃದಯಸ್ಪರ್ಶಿ ನುಡಿನಮನ.

ನಾವಿಬ್ಬರೂ ಬೇರ್ಪಟ್ಟು, ನಮ್ಮದೇ ಆದ ದಾರಿಯನ್ನು ಹಿಡಿದ ಸುದೀರ್ಘ ಸಮಯದ ಬಳಿಕ ಗೌರಿ ನನ್ನನ್ನು ಅಮೆರಿಕದಲ್ಲಿ 1996ರಲ್ಲಿ ಭೇಟಿಯಾಗಿದ್ದಳು. ನಮ್ಮ ಅಂತಿಮ ಗಮ್ಯತಾಣ ಒಂದೇ ಅಂದರೆ ಮಣ್ಣಲ್ಲೇ ಜನಿಸಿ, ಮಣ್ಣಿಗೇ ಮರಳುವುದು ಎಂಬುದು ನಾಸ್ತಿಕರಾದ ನಮ್ಮಿಬ್ಬರಿಗೂ ಚೆನ್ನಾಗಿ ಅರಿವಿತ್ತು, ಇವೆರಡರ ಮಧ್ಯೆ ಘನತೆಯನ್ನು ಮೆರೆಯಲು ಸಾಕಷ್ಟು ಅವಕಾಶವಿದೆ ಎಂಬುದನ್ನು ನಾವು ಒಪ್ಪಿಕೊಂಡಿದ್ದೆವು.


ಹಲವು ಅಪಾಯಗಳು, ಪರಿಶ್ರಮಗಳು ಹಾಗೂ ಉರುಳುಗಳನ್ನು ನಾವು ಈಗಾಗಲೇ ಎದುರಿಸಿದ್ದೇವೆ. ಆ ಘನತೆಯು ನಮ್ಮನ್ನು ಇಷ್ಟು ದೂರದವರೆಗೂ ಕರೆತಂದಿದೆ ಹಾಗೂ ಘನತೆಯು ನಮ್ಮನ್ನು ಮನೆಯೆಡೆಗೆ ಕರೆದೊಯ್ಯುವುದು ಆ ಘನತೆಯನ್ನು ನೀವು ಅಳೆಯಲು ಬಯಸಿದ್ದೇ ಆದರೆ, ನಮ್ಮ ಮಗಳಿಗೆ ಗೌರಿ ಮಾದರಿಯಾಗಲಿ ಎಂದು ಹಾರೈಸಿ ನನ್ನ ಪತ್ನಿ ಮೇರಿ ಬ್ರೀಡಿಂಗ್ ಸಲ್ಲಿಸಿರುವ ಶ್ರದ್ಧಾಂಜಲಿಯನ್ನು ನೋಡಿ. ಇದೊಂದು ಅದ್ಭುತವಾದ ಘನತೆಯಾಗಿದೆ. ನಮ್ಮ ಮಕ್ಕಳಾದ ದಿಯಾ ಹಾಗೂ ಧ್ಯಾನ್ ಮೇಲೆ ಪ್ರೀತಿಯ ಹೊನಲನ್ನೇ ಹರಿಸುವ ಮೂಲಕ ಗೌರಿ ಅಳೆಯಲು ಸಾಧ್ಯವಿಲ್ಲದಷ್ಟು ಘನಸ್ಥಿಕೆಯನ್ನು ಹಿಂದಿರುಗಿಸಿದ್ದಾಳೆ. ಅದು ಆಕೆಗಷ್ಟೇ ಸಾಧ್ಯ, ಉದಾರವಾದ ಚೇತನ, ವಿಶಾಲವಾದ ಹೃದಯ, ಮಿತಿಯಿಲ್ಲದ ಪ್ರೀತಿ ಆಕೆಯದು. ಆದರೆ ಇವೆಲ್ಲವೂ ಅವೈಚಾರಿಕರಿಗೆ ಅರ್ಥವಾಗದು. ಇಂತಹ ಘನತೆಯು ಅವರನ್ನು ಹಾಗೂ ಅವರ ಗ್ರಹಿಕೆಯನ್ನು ಮೀರಿದ್ದಾಗಿದೆ. ಗೌರಿಗೆ ಶ್ರದ್ಧಾಂಜಲಿ ಸಲ್ಲಿಸಲು ನನಗೆ ಪದಗಳು ಸಿಗದಿದ್ದಾಗ, ನನ್ನ ಪತ್ನಿ ಮೇರಿ ಬ್ರೀಡಿಂಗ್ ಅವೆಲ್ಲವನ್ನೂ ಹೇಳಿದಳು. ಅದನ್ನು ಅವಳ ಮಾತುಗಳಲ್ಲೇ ಓದಿ...

ಆ ರಾತ್ರಿ ಬೆಂಗಳೂರಿನಲ್ಲಿ ವಾಕ್‌ಸ್ವಾತಂತ್ರ್ಯ ಮೂಕವಾಗಿತ್ತು. ಕೆಲವೇ ತಾಸುಗಳ ಮೊದಲು ನನ್ನ ಅತ್ತಿಗೆಯ ಜೊತೆ ಫೋನ್‌ನಲ್ಲಿ ಮಾತನಾಡುತ್ತಿದ್ದಾಗ, ಟಿವಿ ಪರದೆಯಮೇಲೆ "ಗೌರಿ ಲಂಕೇಶ್‌ರನ್ನು ಗುಂಡಿಕ್ಕಿ ಕೊಲೆಗೈಯಲಾಗಿದೆ"ಎಂಬ ಸುದ್ದಿ ಅಪ್ಪಳಿಸಿತು. ಗೌರಿ... ನಮ್ಮ ಗೌರಿ ಅವರನ್ನು ಆಕೆಯ ಮನೆಯ ಮುಂದೆಯೇ ಗುಂಡಿಕ್ಕಲಾಗಿದೆ. ಫೋನ್‌ನ ಇನ್ನೊಂದು ಬದಿಯಿಂದ ಬಿಕ್ಕಳಿಕೆ ಕೇಳಿಬಂದಿತು. ಹಾಗಾಗಲಾರದು. ನಿನಗೆ ಖಚಿತವಿದೆಯೇ ಎಂದು ನಾನಾಕೆಯನ್ನು ಕೇಳಿದೆ. ಆಕೆ ಹೇಳಿದಳು. ಹೌದು...

ಮೌನವಾದೆ. ನಾನು ಫೋನನ್ನು ಬಿಟ್ಟು, ತಕ್ಷಣವೇ ಓಡುತ್ತಾ ಮೆಟ್ಟಿಲೇರಿದೆ. ಚಿದುವನ್ನು ಕರೆದೆ. ಆ ಕ್ಷಣವಾದರೂ ನಾನು ಆತನೊಂದಿಗಿರಬೇಕಾಗಿದೆ. ನನ್ನ ಹೃದಯ ಒಡೆದಿತ್ತು, ವಿಷಾದ ಮಡುಗಟ್ಟಿತ್ತು, ಅತ್ಯಂತ ಭಯಾನಕ ಕ್ಷಣ ಅದಾಗಿತ್ತು, ಹುಣ್ಣಿಮೆಯ ದಿನವದು.. ಪ್ರೇರೇಪಿಸಲ್ಪಟ್ಟ ಕೆಲವು ಹುಚ್ಚು ಅವೈಚಾರಿಕರು ಆಕೆಯ ಮನೆಯ ಮುಂದೆ ಗುಂಡಿನ ಮಳೆಗೆರೆದು ಆಕೆಯನ್ನು ಕೊಲೆಗೈದಿದ್ದಾರೆ. ಹೇಗೆ... ಅದಕ್ಕೆ ಪದಗಳೇ ಇಲ್ಲ, ಆ ಕ್ಷಣದಲ್ಲಿ ವಾಕ್‌ಸ್ವಾತಂತ್ರ್ಯಕ್ಕಾಗಿನ ಹೋರಾಟವು ಮೂಕವಾಗಿತ್ತು.

ಆಕೆ ನನ್ನ ಪತಿಯ ಮೊದಲ ಪತ್ನಿಯಾಗಿದ್ದಳು. ಆಕೆ ನನ್ನ ಗೆಳತಿಯೂ ಆಗಿದ್ದಳು ಮತ್ತು ಪ್ರಕೃತಿಯ ಪ್ರಬಲವಾದ ಶಕ್ತಿ ಅವಳಾಗಿದ್ದಳೆಂದು ಪರಿಗಣಿಸಬಹುದಾಗಿದೆ. ನಾವು ಆಕೆಯನ್ನು ಪ್ರೀತಿಸಿದ್ದೆವು. ವಿಚಾರವಾದಿ, ನಾಸ್ತಿಕವಾದಿ ಅವಳಾಗಿದ್ದಳು. ಹೆಮ್ಮೆಯ ಕನ್ನಡಿಗಳಾಗಿದ್ದಳು ಹಾಗೂ ಪ್ರತಿಯೊಬ್ಬರಿಗೂ ತಮ್ಮ ಮನಸ್ಸಿನಲ್ಲಿ ಇದ್ದುದನ್ನು ಮಾತನಾಡುವ ಹಕ್ಕಿದೆ ಎಂಬುದನ್ನು ಆಕೆ ದೃಢವಾಗಿ ನಂಬಿದ್ದಳು. ತಮಗಾಗಿ ಮಾತನಾಡಲು ಸಾಧ್ಯವಾಗದವರ ಪರವಾಗಿ ಗೌರಿ ಧ್ವನಿಯೆತ್ತಿದ್ದಳು. ತನ್ನ ಪತ್ರಿಕೆಯ ಮೂಲಕ ಆಕೆ ಅವರಿಗೆ ಧ್ವನಿಯಾದಳು. ಆಕೆಯ ಬಗ್ಗೆ ತಿಳಿದುಕೊಂಡರೆ ನಿಮಗೆ ಹೆಮ್ಮೆಯೆನಿಸುವುದು. ಅವಳು ಸ್ಥಾಪಿತ ಹಿತಾಸಕ್ತಿಗಳ ಬಲವಾದ ವಿರೋಧಿಯಾಗಿದ್ದಳು, ಇತರರು ಅಂಜುವೆಡೆ ಮುನ್ನುಗ್ಗುವುದಕ್ಕೆ ಗೌರಿ ಹಿಂದೆಮುಂದೆ ನೋಡುತ್ತಿರಲಿಲ್ಲ, ಅನ್ಯಾಯವನ್ನು ಕಂಡಲ್ಲಿ ಅದರ ವಿರುದ್ಧ ಧ್ವನಿಯೆತ್ತದೆ ಬಿಡುತ್ತಿರಲಿಲ್ಲ.

ಇಂದು ರಾತ್ರಿ ಭಾರತ ಹಾಗೂ ಎಲ್ಲೆಡೆ ವಾಕ್‌ಸ್ವಾತಂತ್ರ್ಯಕ್ಕಾಗಿ, ಜಾತ್ಯತೀತತೆಗಾಗಿ ಹಾಗೂ ನ್ಯಾಯಕ್ಕಾಗಿನ ಹೋರಾಟ ವಾಸ್ತವವಾಗುತ್ತಿದೆ. ಬಲಿಷ್ಠ ಹಾಗೂ ದಿಟ್ಟ ಸ್ವತಂತ್ರ ಮನೋಭಾವದ ಗೌರಿಯು ನನ್ನ ಮಗಳಿಗೆ ಮಾದರಿಯಾಗಲಿ ಎಂದು ನಾನು ಹಾರೈಸುತ್ತೇನೆ.



ಆಕೆಯ ಸಾವಿನ ಕೆಲವೇ ನಿಮಿಷಗಳ ಬಳಿಕ ದಿಯಾ ಮಹಡಿ ಮೆಟ್ಟಿಲೇರಿ, ನಿದ್ರಿಸಲು ಸಿದ್ಧಳಾಗುತ್ತಿದ್ದಳು. ಆಕೆ ನನ್ನನ್ನು ಕೇಳಿದಳು. "ಅಮ್ಮಾ.. ಪ್ರಮಾದವೇನಾದರೂ ನಡೆಯಿತೇ? ಏನಾಯಿತು?. ಬರಸಿಡಿಲಿನಂತೆ ಬಂದೆರಗಿದ ಸುದ್ದಿಯನ್ನು ಅರಗಿಸಿಕೊಳ್ಳಲು ಸಾಧ್ಯವಿಲ್ಲದ ನಾನು, ಆಕೆಯನ್ನು ತಬ್ಬಿಕೊಂಡು ಎಲ್ಲವೂ ಸರಿಯಾಗಿದೆ ಎಂದೆ. ಗೌರಿ ದಿಯಾಳನ್ನು ಪ್ರೀತಿಸುತ್ತಿದ್ದಳು ಮತ್ತು ದಿಯಾಗೆ ಗೌರಿಯೆಂದರೆ ಸದಾ ಕುತೂಹಲ.


ದಿಯಾ ಎಂದಿನಂತೆ, 'ಗುಡ್‌ನೈಟ್ ಸ್ಟೋರಿಸ್ ಫಾರ್ ರೆಬೆಲ್ ಗರ್ಲ್ಸ್' ಎಂಬ ಪುಸ್ತಕವನ್ನು ಎತ್ತಿಕೊಂಡಳು. ಆಗ ಒತ್ತರಿಸಿ ಬಂದ ಕಣ್ಣೀರನ್ನು ತಡೆಯಲು ಕಷ್ಟಪಟ್ಟು ಪ್ರಯತ್ನಿಸಿದೆ. ದಿಯಾ, ಸೊಮಾಲಿಯಾದ ಪ್ರಪ್ರಥಮ ಮಹಿಳಾ ಅಧ್ಯಕ್ಷೀಯ ಅಭ್ಯರ್ಥಿ ಫಾದುಮೊ ದಾಯಿಬ್‌ಳ ಬಗ್ಗೆ ಮಾತನಾಡಿದಳು. ಅಮ್ಮಾ, ಫಾದುಮೊ ಬಗ್ಗೆ ನಾವು ಮತ್ತೊಮ್ಮೆ ಓದೋಣವೇ?. ಯಾಕೆ ಜನರು ಯುದ್ಧ ಮಾಡುತ್ತಾರೆಂದು ನನಗೆ ಹೇಳುವಿಯಾ ಎಂದು ಆಕೆ ಪ್ರಶ್ನಿಸಿದಳು.

ಈಗಲೂ ಕಣ್ಣೀರನ್ನು ತಡೆದುಕೊಳ್ಳಲು ಬಹಳ ಕಷ್ಟಪಟ್ಟೆ. ದುಃಖದಿಂದ ತುಟಿಯನ್ನು ಕಚ್ಚಿಕೊಂಡ ನಾನು, ದಿಯಾಳಿಗೆ ಜನರು ಯಾಕೆ ಯುದ್ಧ ಮಾಡುತ್ತಾರೆ ಹಾಗೂ ಜಗತ್ತಿನಲ್ಲಿ ಯಾಕೆ ಅನ್ಯಾಯ ಹಾಗೂ ದ್ವೇಷ ತಾಂಡವವಾಡುತ್ತಿದೆ ಯೆಂಬುದನ್ನು ವಿವರಿಸಲು ಪ್ರಯತ್ನಿಸಿದೆ. "ಚಿಂತಿಸಬೇಡ ಅಮ್ಮಾ. ಮಾಟಿಲ್ಡಳಂತೆ (ಆಂಗ್ಲ ಕಾದಂಬರಿಕಾರ ರೋಲ್ಡ್ ಡಾಹ್ಲ್ ಅವರ ಕಾದಬಂರಿಯ ಕಥಾಪಾತ್ರ) ಲೋಕದಲ್ಲಿ ಜನರು ಒಳ್ಳೆಯದನ್ನು ಅಥವಾ ಕೆಟ್ಟದನ್ನು ಆರಿಸಿಕೊಳ್ಳುತ್ತಾರೆ. ಮಾಟಿಲ್ಡ ತನ್ನ ಶಕ್ತಿಯನ್ನು ಒಳಿತಿಗಾಗಿ ಬಳಸಿಕೊಂಡಳು. ನಾವು ಕೂಡಾ ನಮ್ಮ ಶಕ್ತಿಯನ್ನು ದುಷ್ಟ ಜನರ ವಿರುದ್ಧ ಒಳ್ಳೆಯದಕ್ಕಾಗಿ ಬಳಸಿಕೊಳ್ಳಬೇಕಾಗಿದೆ...

ಫಾದುಮೊಳ ಕಥೆಯ ಕೊನೆಯ ಸಾಲನ್ನು ಓದುತ್ತಿದ್ದ ನಾನು ಅವಳ ಮಾತಿಗೆ ಹೌದೆಂದೆ. ಬದುಕಿನ ಎಲ್ಲಾ ಸಾಧ್ಯತೆಗಳು ನಿನ್ನ ಅಂಗೈಯಲ್ಲಿರುತ್ತದೆ ಎಂದು ನನ್ನ ತಾಯಿ ಯಾವತ್ತೂ ಹೇಳುತ್ತಿದ್ದಳು. ಅದು ಖಂಡಿತವಾಗಿಯೂ ಸತ್ಯ. ದಿಯಾಳನ್ನು ನಿದ್ದೆ ಆವರಿಸುತ್ತಿತ್ತು ಹಾಗೂ ಆಕೆಯ ಕಣ್ಣುಗಳು ಮುಚ್ಚುತ್ತಿದ್ದವು. ಈ ಹೊತ್ತಲ್ಲಿ ಗೌರಿ ನಮ್ಮೊಂದಿಗಿರಬೇಕೆಂದು ನನಗನಿಸುತ್ತಿತ್ತು. ಆಕೆಯೂ ಅದಕ್ಕೆ ಸಮ್ಮತಿಸುತ್ತಿದ್ದಳು ಎಂದು ನಾನು ಭಾವಿಸುತ್ತೇನೆ. ಈಗ, ನನ್ನ ಮಗಳಿಗೆ ನಮ್ಮ ಅಚ್ಚುಮೆಚ್ಚಿನ ನಿಜವಾದ ರೆಬೆಲ್ ಹುಡುಗಿ ಗೌರಿ ಲಂಕೇಶ್‌ಳ ಕಥೆಯನ್ನು ಓದಿಹೇಳಲು ನಾನು ಶಕ್ತಿಯನ್ನು ರೂಢಿಸಿಕೊಳ್ಳಬೇಕಾಗಿದೆ.

● ಚಿದಾನಂದ ರಾಜ್ ಘಟ್ಟ

ಬಲಿಯಾದ ಲಕ್ಷಾಂತರ ಜನರನ್ನು ಕೇವಲ ಸಂಖ್ಯೆಯಾಗಿ ಮಾತ್ರ ನಾವು ಗ್ರಹಿಸುವುದು; ಅದು ಕೂಡ ಸೊನ್ನೆಗಳಲ್ಲಿ ಕೊನೆಗೊಳ್ಳುವ ಒಂದು ಅಂದಾಜು ಸಂಖ್ಯೆ. ಒಂದು ಜೀವ ಹೆಚ್ಚು; ಒಂದು ಜೀವ ಕಡಿಮೆ ಆದರೂ ಏನು ವ್ಯತ್ಯಾಸವಾಗುವುದಿಲ್ಲ. ರಾಜಕೀಯ ಕಾರಣಗಳಿಗೆ ಅಥವಾ ಅಭಿವೃದ್ಧಿಯ ನೆವದಲ್ಲಿ ಅಥವಾ ಕೇವಲ ನಮ್ಮ ಹಾಗೆ ಉಣ್ಣುವುದಿಲ್ಲ, ಉಡುವುದಿಲ್ಲ, ನಮ್ಮ ಸೊಡ್ಡಿನ ಹಾಗೆ ಅವರದ್ದಿಲ್ಲ ಎಂಬ ಕಾರಣಗಳಿಗಾಗಿ ಜನರನ್ನು ಕೊಲ್ಲುವ ವ್ಯವಸ್ಥೆಯಲ್ಲಿ ಈ ಸರಣಿಯ ಮುಂದುವರಿಕೆಯಾಗಿ ನರೇಂದ್ರ ದಭೋಲ್ಕರ್, ಗೋವಿಂದ್ ಪನ್ಸಾರೆ, ಎಂ.ಎಂ ಕಲಬುರ್ಗಿ ಮತ್ತು ಗೌರಿಯಂತಹವರು ಕೊಲೆಯಾಗುತ್ತಾರೆ. ನಾವು ಉಸಿರಾಡುವ ಗಾಳಿಯಲ್ಲೇ ಈ ದಮನ, ದ್ವೇಷ ಮತ್ತು ಹಿಂಸೆಯ ವಿಷ ಸೇರಿ ಹೋಗಿರುವುದು ಗೌರಿಗೆ ಗೊತ್ತಿತ್ತು, ಪತ್ರಿಕೆಯ ಪ್ರತಿವಾರದ ಸಂಚಿಕೆಯಲ್ಲೂ ಆಕೆ ಅದರ ವಿರುದ್ಧ ದನಿ ಎತ್ತಿದರು. ಕೊನೆಗೆ ಆ ಹಿಂಸೆಗೆ ತಾವೇ ಬಲಿಯಾದರು. ಗೌರಿಯವರ ಈ ಜೀವಹತ್ಯೆಯ ಕುರಿತು ನಾಡಿನ ಎಲ್ಲೆಡೆ ನಡೆದ ಸಂತಾಪ ಸೂಚಕ ಸಭೆಗಳು ಪ್ರತಿಭಟನೆ ಆಗಿ ರೂಪಾಂತರಗೊಂಡದ್ದು ಆಕಸ್ಮಿಕವಲ್ಲ. ಆಗಿರುವುದು ಗೌರಿಯ ದೇಹಾಂತ್ಯ ಮಾತ್ರ. ಹಿಂಸೆ ಮತ್ತು ಶೋಷಣೆಗಳ ವಿರುದ್ಧ ಅವರ ಅಭಿಯಾನವನ್ನು ಮುಂದುವರಿಸುವುದೇ ಅವರ ನೆನಪಿಗೆ ನಾವು ಸಲ್ಲಿಸಬಹುದಾದ ಗೌರವ.




● ಜಿ.ರಾಜಶೇಖರ

ನಾ ಕಂಡ ಗೌರಿ



ನಿನ್ನೆಯಷ್ಟೇ ಅಲ್ಲವೆ ಗೌರಿ ನನ್ನ ಆಫೀಸಿಗೆ ಬಂದಿದ್ದು ಆದಾಗಲೇ ಒಂದೂವರೆ ದಶಕ ಕಳೆದುಹೋಯಿತೆ. ಕೃಶದೇಹದ ಬಿಸುಮಾತಿನ ಗೌರಿ ನಮ್ಮನ್ನು ಆವರಿಸಿಕೊಂಡಿದ್ದಳು. **Respect me** ನಿನಗಿಂತಲೂ ಆರು ತಿಂಗಳು ಹೆಚ್ಚು ವಯಸ್ಸು ಮತ್ತು ಅನುಭವ ಇದ್ದವಳು ನಾನು ಎಂದು ನನ್ನ ಮಾತನ್ನು ನಿಲ್ಲಿಸುತ್ತಿದ್ದ ಗೌರಿ ನಮ್ಮ ಕಚೇರಿಯ ಅದೆಷ್ಟೋ ಬಡಜನರ, ಹೆಣ್ಣುಮಕ್ಕಳ ಹಿಜ್ರಾಗಳ, ಲೈಂಗಿಕ ಅಲ್ಪಸಂಖ್ಯಾತರ, ಕೇಳಿದಕೂಡಲೇ ಅವರ ಪರವಾಗಿ ನಿಂತು ಬಿಡುವ ಗೌರಿ ಅದೆಷ್ಟು ಜನರಿಗೆ ಸಹಾಯ ಮಾಡಿದಳು. ನಾವು ನಡೆಸಿಕೊಟ್ಟ ಕೇಸುಗಳು ಒಂದಿಷ್ಟಾದರೆ ನಮ್ಮ ಜನಪರ ಕೆಲಸಗಳಿಗೆ ಅದೆಷ್ಟೋ ಪಟ್ಟು ಸಹಾಯ ಮಾಡಿದಳು ಗೌರಿ. ಆ ಪುಟ್ಟ ದೇಹದಲ್ಲಿ ಅದೆಷ್ಟು ಚೇತನವಿಟ್ಟಿದ್ದಳು. ನನ್ನ ಸಹೋದ್ಯೋಗಿಗಳ ಹಿರಿಯಕ್ಕನಂತೆ, ಅಮ್ಮನಂತೆ ತಿಳಿಹೇಳುವ, ಉಪದೇಶಿಸುವ ಛೇಡಿಸುವ ಗೌರಿ. ಈಗ ನೆನಪು ಮಾತ್ರವೆಂದರೆ ನಂಬಲಾಗುತ್ತಿಲ್ಲ.


ಗೌರಿ ಪರ ನಡೆಸಿದ ಈದ್ಗಾ ಮೈದಾನದ ಕೇಸಿನಲ್ಲಿ ಕಫೀಲ್ ಅಹಮದ್‌ನ ತಂದೆತಾಯಿಯಾಗಿರಲಿ, ಬಾಬಾಬುಡನ್‌ಗಿರಿಯ ಹೋರಾಟವಾಗಿರಲಿ, ಪ್ರೇಮಲತಾ ಶಾಸ್ತ್ರಿಯವರ ಪ್ರಕರಣವಾಗಿರಲಿ, ಅದೆಷ್ಟು ಸಲ ಬೆದರಿಕೆಯ ಫೋನುಗಳು, ಪತ್ರಗಳು, ಸೆಕ್ಯೂರಿಟಿ ಇರಬೇಕು. ಗೌರಿ ಅಂದಾಗಲೆಲ್ಲಾ ನನ್ನನ್ನು ಹುಚ್ಚನಂತೆ ನೋಡುವ, ಹೋಗೋ ಮಾರಾಯ ಬೇರೆ ಕೆಲಸ ಇಲ್ಲವಾ ಎಂದುಬಿಡುತ್ತಿದ್ದ ಗೌರಿ ಹಠಾತನೆ ಇನ್ನಿಲ್ಲವಾಗಿದ್ದು ಕತೆಯಾಗಿ ಹೋಗಿದ್ದು ನನ್ನನ್ನು ಕಾಡುತ್ತಿದೆ.



ಯಾವುದೇ ಕಾರಣಕ್ಕೂ ಪ್ರಕರಣಗಳಲ್ಲಿ ತನ್ನ ನಿಲುವನ್ನು ಬದಲಿಸದ ಒಂದು ರೀತಿಯ ಹಠಮಾರಿಯ ಪ್ರತೀಕದಂತಿದ್ದ ಗೌರಿ ಜೈಲಿಗಾದರೂ ಹೋಗಲಿಕ್ಕೆ ಸಿದ್ಧ. 'ನಾ' ಬರೆದದ್ದು ಮಾನನಷ್ಟವಲ್ಲ, ಯಾರ ಹಂಗಿಲ್ಲದೆ ಬದುಕಿದವಳು ಗೌರಿ. ಪ್ರೊಫೆಸರ್ ಕಲ್ಬುರ್ಗಿ ಹಾಗೂ ಗೌರಿ ಸಾಕಷ್ಟು ಮಾನನಷ್ಟ ಮೊಕದ್ದಮೆಗಳನ್ನು ಎದುರಿಸಿದವರು. ಗೌರಿ ಪ್ರತಿ ಕೇಸನ್ನು ಜನರೊಡನೆ ತಲುಪುವ ಅವಕಾಶವೆಂಬಂತೆ ಹೊರಟವಳು. ಕೇಸಿಗೆ ಹೋದಾಗಲೆಲ್ಲಾ ಜನರನ್ನು ಸೇರಿಸುವ, ಚರ್ಚೆ ಶುರು ಮಾಡಿಬಿಡುವ ವ್ಯಕ್ತಿಯಾಗಿದ್ದಳು ಗೌರಿ. ಕೋರ್ಟಲ್ಲೇ ಕೂತು ಪುಸ್ತಕ ಓದಿ ಬಿಡುವ 'ಕಂಡಹಾಗೆ' ಬರೆದುಬಿಡುವ ಗೌರಿ ಸದಾ ಹಸನ್ಮುಖಿ. ನಾ ತಮಾಷೆ ಮಾಡುತ್ತಿದ್ದ ಆಲಮಟ್ಟಿ ಜಂಗಮ ಜೋಗಿ ಜೋಳಿಗೆ ಹೊತ್ತು ಹೊರಟೆ ಬಿಟ್ಟಳೆ, ಇಲ್ಲ ನಮ್ಮನ್ನು ಕಾಡುವ, ಛೇಡಿಸುವ ನಮ್ಮ ಬದ್ಧತೆಯನ್ನು ಸದಾ ಹೊರಗೆ ಹಚ್ಚುವ ಯಾವತ್ತೂ ನನ್ನೊಡನೆ ನಮ್ಮೊಡನೆ ಇದ್ದಾಳೆ ಗೌರಿ.

● ಬಿ.ಟಿ. ವೆಂಕಟೇಶ್

ಮುಖ್ಯಮಂತ್ರಿಯಿಂದ ಪಡೆದದ್ದು ಬುದ್ಧನ ಮೂರ್ತಿ ಮಾತ್ರ



ನಾವೆಲ್ಲ ಲಂಕೇಶ್ ಪತ್ರಿಕೆ ಎಂಬ ಏಕೋಪಾಧ್ಯಾಯ ಶಾಲೆಯ ವಿದ್ಯಾರ್ಥಿಗಳು. ನನಗೆ ಲಂಕೇಶ್ ತರಗತಿಯಲ್ಲಿ ಕಲಿಸಿದ ಗುರುವಲ್ಲ, ನನ್ನಂತಹ ಸಾವಿರಾರು ಏಕಲವ್ಯರಿಗೆ ಅವರು ಮಾನಸಗುರು. 'ಲಂಕೇಶ್ ಅವರ ವಾರಸುದಾರರು ನೀವು ಮೂವರು ಮಕ್ಕಳು ಮಾತ್ರ ಎಂದು ತಿಳಿಯಬೇಡಿ. ಅವರಿಂದ ಕಲಿತು ಬೆಳೆದ ನಮ್ಮಂತಹ ಲಕ್ಷಾಂತರ ಮಂದಿ ಇದ್ದಾರೆ' ಎಂದು ಗೌರಿ 'ಅಪ್ಪ' 'ಅಪ್ಪ' ಎಂದಾಗ ನಾನು ಕಿಚಾಯಿಸಿದ್ದುಂಟು.

ಲಂಕೇಶ್ ಅವರ ಶಿಷ್ಯರು, ಅಭಿಮಾನಿಗಳು, ವಾರಸುದಾರರು ಎಂದು ತಿಳಿದುಕೊಂಡ ಒಂದು ದೊಡ್ಡ ಗುಂಪು ಇಂದಿನ ಸಾಹಿತ್ಯ ಮತ್ತು ಮಾಧ್ಯಮ ಕ್ಷೇತ್ರದಲ್ಲಿದೆ. ಆದರೆ ಗೌರಿ ಅಪ್ಪನನ್ನು ಮೀರಿಸಿದ್ದಾಳೆ. ಎಷ್ಟೊಂದು ಮಂದಿಗೆ ಈಕೆ ಅಮ್ಮ? ಎಷ್ಟೊಂದು ಮಕ್ಕಳು...


ಕಳೆದ ಕೆಲವು ದಿನಗಳಲ್ಲಿ ರಾಜ್ಯವಷ್ಟೇ ಯಾಕೆ ದೇಶ-ವಿದೇಶಗಳಿಂದಲೂ 'ನಾನು ಗೌರಿ' ಎನ್ನುವ ಘೋಷಣೆ ಅನುರಣಿಸತೊಡಗಿದೆ. ಲಕ್ಷಾಂತರ ಯುವಕರು- ಯುವತಿಯರು, ವಿದ್ಯಾರ್ಥಿಗಳು ಸ್ವಂತ ಅಮ್ಮನನ್ನು, ಅಕ್ಕನನ್ನು ಕಳೆದುಕೊಂಡವರಂತೆ ರೋದಿಸತೊಡಗಿದ್ದಾರೆ. ಈ ಪ್ರೀತಿಗೆ ಗೌರಿ ಖಂಡಿತ ಅರ್ಹಳಾಗಿದ್ದಳು. ತನಗಿಂತ ಕಿರಿಯರನ್ನು ಆಕೆ ಅತ್ಯಂತ ಪ್ರೀತಿಯಿಂದ ಸಂಬೋಧಿಸುತ್ತಿದ್ದುದೇ 'ಮರಿ' ಮತ್ತು 'ಕೂಸು' ಎಂದು.

ಮಕ್ಕಳನ್ನು ಹೆತ್ತು ಅಮ್ಮನೆನಿಸಿಕೊಳ್ಳದೆ ಲಕ್ಷಾಂತರ ಮಕ್ಕಳಿಗೆ ಪ್ರೀತಿ ಕೊಟ್ಟು ಅಮ್ಮನಾದವಳು ಗೌರಿ. ಆಕೆಯ ಗುಬ್ಬಚ್ಚಿಯಂತ ಸಣ್ಣ ದೇಹದೊಳಗಿದ್ದ ದೊಡ್ಡ ಹೃದಯದಲ್ಲಿ ಪ್ರೀತಿಯೊಂದನ್ನು ಬಿಟ್ಟು ಇತರರಿಗೆ ಕೊಡಲು ಬೇರೆ ಏನೂ ಇರಲಿಲ್ಲ.

ಲಂಕೇಶ್ ನಿಧನಾನಂತರ ಅವರ ಮಕ್ಕಳು ಪತ್ರಿಕೆಯನ್ನು ಕೈಗೆ ತೆಗೆದುಕೊಂಡಾಗ ನನಗೆ ಬೇಸರವಾಗಿತ್ತು. ಮಕ್ಕಳಿಗೆ ಅಪ್ಪನ ಮೇಲೆ ಹಕ್ಕು ಇರಬಹುದು, ಆದರೆ ಆ ಅಪ್ಪ ಪ್ರಾರಂಭಿಸಿದ್ದ ಪತ್ರಿಕೆ ರಾಜ್ಯದ ಲಕ್ಷಾಂತರ ಓದುಗರ ಆಸ್ತಿಯಾಗಿತ್ತು. ಮಕ್ಕಳು ಅದನ್ನು ವಶಕ್ಕೆ ತೆಗೆದುಕೊಂಡದ್ದು ನನ್ನಂತಹವರಿಗೆ ಇಷ್ಟವಾಗಿರಲಿಲ್ಲ. ಅದಕ್ಕೆ ತಕ್ಕ ಹಾಗೆ ಲಂಕೇಶ್ ಅವರ ಹಳೆಯ ಬರಹಗಳನ್ನೇ ಹೆಚ್ಚು ಮುದ್ರಿಸುತ್ತಾ, ಅಪ್ಪನ ಹೆಸರನ್ನೇ ಬಳಸಿಕೊಂಡು ಪತ್ರಿಕೆ ಹೊರಬರುತ್ತಿರುವುದು ಕಂಡು ನಿರಾಶೆಯಾಗಿತ್ತು.

ಆಗಿನ ಗೌರಿಯ ಒಳಗಿನ ಕಷ್ಟಗಳು ಏನಿತ್ತೋ ಗೊತ್ತಿಲ್ಲ. ಕೊನೆಗೆ ಅದರಿಂದ ಹೊರಬಂದು 'ಗೌರಿ ಲಂಕೇಶ್' ಎಂಬ ಹೆಸರಿನ ಸ್ವಂತ ಪತ್ರಿಕೆ ಪ್ರಾರಂಭಿಸಿದ ನಂತರವೇ ಗೌರಿ ಮತ್ತು ಪತ್ರಿಕೆಯ ಕಡೆ ನಾನು ಕುತೂಹಲದಿಂದ ನೋಡಲಾರಂಭಿಸಿದ್ದು.

ಗೌರಿ ಸಂಪಾದಕತ್ವದಲ್ಲಿ ನಿಧಾನವಾಗಿ ಬದಲಾಗುತ್ತಿದ್ದ ಪತ್ರಿಕೆ ಅನೇಕ ಟೀಕೆ-ಟಿಪ್ಪಣಿಗಳನ್ನು ಎದುರಿಸುತ್ತಾ ಬಂದಿದೆ. ಅದರಲ್ಲಿ ಮುಖ್ಯವಾದುದು ಗೌರಿ **Journalism** ಮತ್ತು **Activism** ನಡುವಿನ ಗೆರೆಯನ್ನು ಅಳಿಸಿ ಹಾಕಿದಳೆಂಬುದು. ಕಳೆದ ಬುಧವಾರ ವಿಕ್ಟೋರಿಯಾ ಶವಾಗಾರದಲ್ಲಿ ಭೇಟಿಯಾಗಿದ್ದ ಇಂದ್ರಜಿತ್ ಕೂಡಾ ಇದನ್ನೇ ಪರೋಕ್ಷವಾಗಿ ನನ್ನೊಡನೆ ಹೇಳಿದ್ದರು. ನಾನು ವೃತ್ತಿಯಲ್ಲಿ ಸಕ್ರಿಯನಾಗಿದ್ದಾಗ ಒಮ್ಮೊಮ್ಮೆ ನನಗೂ ಹಾಗೆ ಅನಿಸುತ್ತಿತ್ತು.



ಹಾಗಿದ್ದರೆ ಲಂಕೇಶ್ **Activist** ಆಗಿರಲಿಲ್ಲವೇ? ಲಂಕೇಶ್ ಒಬ್ಬ ಪಕ್ಕಾ ಕಸುಬುದಾರ ಪತ್ರಕರ್ತರಾಗಿದ್ದರೆಂಬುದು ನಿಜ. ಅವರು **Journalism** ಮತ್ತು **Actvism** ನಡುವೆ ಗೆರೆ ಹಾಕಿಕೊಂಡಿದ್ದರೂ ಆಗಾಗ ತಾನೆ ಎಳೆದ ಗೆರೆಯನ್ನು ದಾಟುವ ಪ್ರಯತ್ನ ಮಾಡಿದ್ದರು ಎನ್ನುವುದು ಕೂಡ ನಿಜ. ಗುಂಡೂರಾವ್ ಸರ್ಕಾರದ ಪದಚ್ಯುತಿ, ಕ್ರಾಂತಿರಂಗದ ರಚನೆಯಲ್ಲಿ ಸಂಪಾದಕನಾಗಿ ಮಾತ್ರವಲ್ಲದೆ ಅದರ ಹೊರಗೆ ನಿಂತು ರಾಜಕೀಯ ಕಾರ್ಯಕರ್ತನಂತೆ ಕೂಡಾ ಕಾರ್ಯನಿರ್ವಹಿಸಿದ್ದರು.

ನಂತರದ ದಿನಗಳಲ್ಲಿ ತಮ್ಮದೇ ರಾಜಕೀಯ ಪಕ್ಷ ಸ್ಥಾಪಿಸಿದ್ದರು, ತೃತೀಯ ರಂಗ ಹುಟ್ಟುಹಾಕಲು ಪ್ರಯತ್ನಿಸಿದ್ದರು. ಚುನಾವಣೆಯ ಕಾಲದಲ್ಲಿ 'ಇಂತಹವರನ್ನು ಸೋಲಿಸಿ, ಗೆಲ್ಲಿಸಿ' ಎಂದು ಫರ್ಮಾನು ಹೊರಡಿಸುತ್ತಿದ್ದರು. ಇವೆಲ್ಲವೂ ಕನ್ನಡದ ಪತ್ರಿಕಾಲೋಕಕ್ಕೆ ಹೊಸಪ್ರಯೋಗವಾಗಿದ್ದವು. ಸಾಂಪ್ರದಾಯಿಕ ಸಂಪಾದಕನೊಬ್ಬ ಯೋಚನೆಯನ್ನೂ ಮಾಡದಿದ್ದ ನಿರ್ಧಾರಗಳು. ಆ ಅರ್ಥದಲ್ಲಿ ಅವರೂ ಒಬ್ಬ **Activist Journalist** ಆಗಿದ್ದರು.

ಎಂಬತ್ತರ ದಶಕದಲ್ಲಿನ ದಲಿತ, ರೈತ ಮತ್ತು ಭಾಷಾ ಚಳವಳಿಗಳಿಂದಾಗಿ ಇಡೀ ರಾಜ್ಯದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಎಚ್ಚರದ ವಾತಾವರಣ ನಿರ್ಮಾಣವಾಗಿತ್ತು. ಆ ಕಾಲದ ಕರೆಯನ್ನು ಸರಿಯಾಗಿ ಗ್ರಹಿಸಿದ್ದ ಲಂಕೇಶ್, ಪತ್ರಿಕೆಯನ್ನು ಜಾಣಜಾಣೆಯರಿಗಾಗಿ ರೂಪಿಸುತ್ತಾ ಹೋದರು. ಲಂಕೇಶ್ ರೀತಿ ಯೋಚನೆ ಮಾಡುವುದೇ ಹೆಮ್ಮೆ ಎಂದು ಅನಿಸುತ್ತಿದ್ದ ಕಾಲ ಅದು.

ಆದರೆ ಗೌರಿ ಬದುಕಿದ ಕಾಲಘಟ್ಟದ ಚಿತ್ರಣವೇ ಬೇರೆ. ಚಳವಳಿಗಳೆಲ್ಲ ಸೊರಗಿ ಹೋಗಿರುವ, ಸಾರ್ವಜನಿಕ ಆತ್ಮಸಾಕ್ಷಿಯೇ ಸತ್ತುಹೋಗಿದೆಯೇನೋ ಎಂಬ ಆತಂಕ ಹುಟ್ಟಿಸಿರುವ, ಸಜ್ಜನರನ್ನು ಮೀರಿ ದುರ್ಜನರ ಸಂತ[...] ಬೆಳೆಯುತ್ತಿದೆಯೇನೋ ಎಂದು ನಮ್ಮಲ್ಲಿಯೇ ಅನುಮಾ[...] ಹುಟ್ಟಿಸುತ್ತಿರುವ, ಪ್ರಜಾಪ್ರಭುತ್ವದ ಅಸ್ತಿತ್ವವೇ ಅಪಾಯ[...]ದಲ್ಲಿರುವ ಕಾಲವಿದು. ಇದು ಲಂಕೇಶ್ ಬದುಕಿದ್ದ ಕಾ[...] ಅಲ್ಲ.

ಆಗಿನ ಕಾಲದ ಕರೆ ಲಂಕೇಶ್ ಅವರನ್ನು ರೂಪಿಸಿ[...] ಹಾಗೆ, ಈ ಕಾಲದ ಕರೆ ಗೌರಿಯನ್ನು ರೂಪಿಸಿತ[...] ಎನ್ನುವುದಷ್ಟೇ ಸತ್ಯ.

ಆದ್ದರಿಂದ ಗೌರಿ ಹೊಸ ಆ್ಯಕ್ಟಿವಿಸ್ಟ್ ಜರ್ನಲಿಸ[...] ಆಗಿರಲಿಲ್ಲ. ತಂದೆಯ ಪರಂಪರೆಯನ್[...] ಮುಂದುವರಿಸಿಕೊಂಡು ಹೋಗುವ ಪ್ರಯತ್ನ ಮಾಡಿದ್ದ[...] ನನ್ನ ಗುರುಗಳಾದ ವಡ್ಡರ್ಸೆಯವರು ಪಕ್ಷಪಾ[...] ಪತ್ರಿಕೋದ್ಯಮದ ಬಗ್ಗೆ ಮಾತನಾಡುತ್ತಿದ್ದರು. ಸತ್ಯ ಧರ್ಮ[...] ನ್ಯಾಯದ ಪ್ರಶ್ನೆ ಎದುರಾದಾಗ ಪತ್ರಕರ್ತರು ಪಕ್ಷಪಾತಿಗಳಾ[...] ಇರಬೇಕಾಗುತ್ತದೆ ಎನ್ನುವುದು ಅವರ ವಾದವಾಗಿತ್ತು.

ಗೌರಿ ಅಂತಹ ಪಕ್ಷಪಾತಿ ಪತ್ರಿಕೋದ್ಯಮ[...] ಪರವಾಗಿದ್ದರು. ಕಾಂಗ್ರೆಸ್, ಬಿಜೆಪಿ, ಕಮ್ಯುನಿಸ[...] ಆರ್.ಎಸ್.ಎಸ್., ಬಾಬಾಬುಡನ್ ಗಿರಿ ವಿವಾದ, ನಕ್ಸಲಿಸ[...] ರಾಘವೇಶ್ವರ ಸ್ವಾಮೀಜಿ ಮೇಲಿನ ಅತ್ಯಾಚಾರದ ಆರೋಪ[...] ಇಂತಹ ಹಲವಾರು ವಿಚಾರಗಳಲ್ಲಿ ಆಕೆ ಒಂದುಕ[...] ಗಟ್ಟಿಯಾಗಿ ನೆಲಕಚ್ಚಿ ನಿಂತು ಪತ್ರಕರ್ತೆಯ ಕರ್ತ[...] ನಿರ್ವಹಿಸಿದ್ದಳು.

ಮಾಧ್ಯಮ ಕ್ಷೇತ್ರವೇ ಅತ್ಯಂತ ವೇಗವಾಗಿ ಜನ[...] ನಂಬಿಕೆಯನ್ನು ಕಳೆದುಕೊಳ್ಳುತ್ತಿರುವ ಇಂದಿನ ದಿನಗಳ[...] ಗೌರಿ ಜನಪರವಾಗಿ ನಿಂತು ತನ್ನ ಪತ್ರಿಕೆಯ ಮೂಲಕ[...] ಸಾಮಾಜಿಕ-ರಾಜಕೀಯ ಹೋರಾಟವನ್ನು ನಡೆಸುತ್ತಿದ್ದ[...] ಸಂಪ್ರದಾಯಸ್ಥ ಪತ್ರಕರ್ತರಿಗೆ ಗೌರಿ ವೃತ್ತಿಯಲ್ಲಿ ಹಿಡಿ[...]ದಾರಿ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು, ಮು[...] ವಾಹಿನಿಯ ಪತ್ರಿಕೆಗಳ ಓದುಗರಿಗೆ ಗೌರಿಯ ಈ ನಿಲು[...] ಅತಿರೇಕದ್ದು ಎಂದು ಅನಿಸಿರಲೂಬಹುದು ಆದರೆ ಆಕೆ[...] ಉದ್ದೇಶದ ಹಿಂದಿನ ಪ್ರಾಮಾಣಿಕತೆಯನ್ನು ಪ್ರಶ್ನಿಸು[...] ನೈತಿಕತೆಯನ್ನು ಎಷ್ಟು ಮಂದಿ ಪತ್ರಕರ್ತ[...] ಉಳಿಸಿಕೊಂಡಿದ್ದಾರೆ?

ಇಡೀ ಮಾಧ್ಯಮ ಕ್ಷೇತ್ರವೇ ಉದ್ಯಮವಾಗಿರುವ[...] ಅಪ್ಪ ನೆಟ್ಟ ಮರಕ್ಕೆ ಜೋತುಬಿದ್ದ ಗೌರಿ ಜಾಹೀರಾ[...] ಇಲ್ಲದೆಯೇ ಪತ್ರಿಕೆ ನಡೆಸಬೇಕೆಂದು ತೀರ್ಮಾನಿಸಿದಾಗ[...] ಅರ್ಧ ಸೋತುಹೋಗಿದ್ದಳು. ಅದರ ಜತೆಗೆ ಸುದ್ದಿಗ[...] ಆದರಾಚೆಗಿನ ವಿಶ್ಲೇಷಣೆಗಾಗಿ ಟಿವಿ ಚಾನೆಲ್‌ಗಳಿಂದ ಹಿಡಿ[...] ಮೊಬೈಲ್‌ವರೆಗೆ ಹಲವಾರು ಮೂಲಗ[...] ಹುಟ್ಟಿಕೊಂಡಿರುವಾಗ ಪ್ರತಿ ವಾರ 15 ರೂಪಾಯಿ ಕೊ[...] ಖರೀದಿಸುವವರ ಸಂಖ್ಯೆ ಕೂಡಾ ದಿನದಿಂದ ದಿ[...] ಕಡಿಮೆಯಾಗುತ್ತಿತ್ತು.

ಇಂತಹ ಪ್ರತಿಕೂಲ ಪರಿಸ್ಥಿತಿಯನ್ನು ಎದು[...]

'ಆಕೆಯಿಂದ ಕಲಿಯಲು ಸಣ್ಣಸಣ್ಣ ವಿಷಯಗಳೇ ಸಾಕಷ್ಟಿದ್ದವು'

"ನಿಮಗೆ ಅವರು ಎಷ್ಟು ವರ್ಷದಿಂದ ಗೊತ್ತು" "ಅವರನ್ನು ಮೊದಲು ಭೇಟಿಯಾದದ್ದು ಯಾವಾಗ" ಇಂಥಾ ಅಸಂಬದ್ಧ ಪ್ರಶ್ನೆಗಳೆ ಮತ್ತೆಮತ್ತೆ ಪತ್ರಕರ್ತರಿಂದ ನನ್ನತ್ತ ತೂರಿಬರುತ್ತಿವೆ. ನನಗೀಗ ಅವೇ ಪ್ರಶ್ನೆಗಳು ಕಾಡುತ್ತಿವೆ. ಮೊದಲೆಲ್ಲಿ ಭೇಟಿಯಾದೆ, ನೆನಪಾಗುವುದಿಲ್ಲ, ಅವಳ ಮುಖ ಕಣ್ಣೆದುರಿಗೆ ನುಸುಳಿ ಬಂದಾಗೆಲ್ಲ ನೆನಪಾಗುವುದು ಒಂದೇಒಂದು ಸಂಗತಿ, ಗೌರಿ ಹೆಸರಲ್ಲಿ ರಿಂಗ್ ಆಗುತ್ತಿದ್ದ ಮೊಬೈಲ್‌ನ್ನು ರಿಸೀವ್ ಮಾಡಿ ಕಿವಿಗಾನಿಸಿಕೊಳ್ಳುತ್ತಿದ್ದಂತೆ ಅತ್ತ ಕಡೆಯಿಂದ 'ಹಲೋ' ಎಂಬ ಔಪಚಾರಿಕವೂ ಇಲ್ಲದೆ ತೂರಿಬರುತ್ತಿದ್ದ "ಎಲ್ಲಿದೀಯಾ? ವಿಧಾನಸೌಧಕ್ಕೆ ಹೋಗ್ಬೇಕಿತ್ತು ಫ್ರೀ ಇದಿಯಾ ಬರ್ತೀಯಾ" ಎಂಬ ಆತ್ಮೀಯ ಧ್ವನಿ ಮಾತ್ರ. ಇಲ್ಲ ಎಂದು ಹೇಳಲು ನನಗೆ ಸಾಧ್ಯವೇ ಇಲ್ಲ, ಹೆಚ್ಚೆಂದರೆ ಸ್ವಲ್ಪ ಸಮಯ ಬದಲಾಯಿಸುತ್ತಿದ್ದೆ ಅಷ್ಟೆ. ನಾವಿಬ್ಬರೂ ಒಟ್ಟಿಗೇ ಸೇರಿ ಮಾಡಲು ಹೊರಟಿದ್ದ ಕೆಲಸದ ಗಹನತೆ ಹಾಗಿತ್ತು. ಒಂದು ಅನ್ಯಾಯದ ವಿರುದ್ಧ, ಅತ್ಯಾಚಾರದ ವಿರುದ್ಧ ನ್ಯಾಯದ ಬಾಗಿಲು ತಟ್ಟಲು ಹೊರಟವರು. ದಾರಿಯಲ್ಲಿ ನಮ್ಮ ಕಥೆಗಳು ಬೇರೆಯದೇ ರೀತಿಯಲ್ಲಿ ಬಿಚ್ಚಿಕೊಳ್ಳುತ್ತಿದ್ದವು. ನಾವು ನಮ್ಮಂಥ ಚಳವಳಿಗಳ ಬಗ್ಗೆ ಬರೀ ಮೀಟಿಂಗ್ ಮಾಡುವವರು ಎಂದೇ ಆಕೆ ಹೇಳುತ್ತಿದ್ದುದು. "ಅಯ್ಯಪ್ಪಾ... ನನ್ ಕೈಲಾಗಲ್ಲ ಅದೇನು ಮಾಡ್ತೀರೋ...", ಇದು ಆಕೆಯ ಉದ್ಗಾರ. ನಾನು ಸುಮ್ನೆ ನಗ್ತಿದ್ದೆ... ಸ್ವಲ್ಪಮಟ್ಟಿಗೆ ಅವಳು ಹೇಳೋದು ನಿಜಾನೇ, ಅದು ನಮ್ಮ ಚಳವಳಿಯ ಅಗತ್ಯ. ನಾವಿಬ್ಬರೂ ಒಟ್ಟಿಗೇ ವಿಧಾನಸೌಧದ ಗೇಟಿಗೆ ಬಂದರೆ ಪಹರೆಯವರು ನಿಲ್ಲಿಸಿದ ತಕ್ಷಣ ಕಾರಿನ ಗ್ಲಾಸ್ ಇಳಿಸಿ "ಗೌರಿ ಲಂಕೇಶ್, ವಿಮಲಾ" ಅನ್ನೋಳು. "ಥೂ ಅದ್ಯಾಕೆ ನಿನ್ ಒಬ್ಬಳ ಹೆಸರು ಸಾಲದಾ? ಅದರಲ್ಲಿಯೂ ಲಂಕೇಶ್ ಇದೆಯಲ್ಲ ಜೊತೆಗೆ" ಎಂದರೂ ಪ್ರತೀ ಬಾರಿಯೂ ಹಾಗೆಯೇ. ಒಂದು ಗಂಭೀರ ಪ್ರಕರಣದ ಬೆನ್ನತ್ತಿ ಅದನ್ನು ಇತ್ಯರ್ಥಗೊಳಿಸಬೇಕೆನ್ನುವ ಹಠಕ್ಕೆ ಬಿದ್ದು ಅಧಿಕಾರದ ಕೇಂದ್ರಸ್ಥಾನಕ್ಕೆ ಎಡತಾಕಲು ಶುರು ಮಾಡಿದನಂತರ ನಮ್ಮಿಬ್ಬರ ಬಾಂಧವ್ಯ ಮತ್ತಷ್ಟೂ ಆಳವಾಯ್ತು. ಆಗ ನಾವು ಪರಸ್ಪರ ಬಹಳಷ್ಟು ಅರ್ಥಮಾಡಿಕೊಂಡೆವು. ಆ ಕೆಲಸ ಸಾಧಿಸಲೇಬೇಕೆನ್ನುವ ಹಠದಿಂದ ಛಲ ಬಿಡದ ತ್ರಿವಿಕ್ರಮನ ರೀತಿ ವಿಧಾನಸೌಧದ, ಹೈಕೋರ್ಟಿನ ಕಂಬಗಳನ್ನು ಸುತ್ತಿದ್ದೆವು. ಆ ಸುತ್ತಾಟವನ್ನು ಕಂಡ ಕೆಲವರು ಗೌರಿ ಎಂ.ಎಲ್.ಸಿ ಟಿಕೆಟ್‌ಗಾಗಿ ಓಡಾಡ್ತಿದಾಳಂತೆ ಎಂಬ ಸುದ್ದಿ ಹಬ್ಬಿಸಿದ್ದರು. ಗೌರಿಯ ವ್ಯಕ್ತಿತ್ವ ಗೊತ್ತಿರದವರ ಸಿಲ್ಲಿ ಕಮೆಂಟ್‌ಗಳಷ್ಟೆ ಅವು. ಅವಳಲ್ಲಿದ್ದ ಸಭ್ಯತೆಯ ನಡೆನುಡಿ ಪ್ರತಿಯೊಬ್ಬರೂ ಕಲಿಯಲೇಬೇಕಾದ ಅನುಕರಣೀಯ ನಡೆನುಡಿಗಳಾಗಿದ್ದವು. ವಿಧಾನಸೌಧದಲ್ಲಿ ಮೂರು ಮಹಡಿಗೆ ಮೂರು ಬಾರಿ ಹೋದರೂ ಪ್ರತಿ ಬಾರಿಯೂ ಲಿಫ್ಟ್ ಆಪರೇಟರ್‌ಗೆ ಥ್ಯಾಂಕ್ಯೂ ಅನ್ನುತ್ತಿದ್ದಳು. ಅವರಿಗೆ ಅದೆಷ್ಟು ಖುಷಿ ಕೊಡುತ್ತಿತ್ತು ಎಂಬುದನ್ನು ನೋಡಿದಾಗಲೇ ಇಂತಹ ಸಣ್ಣಸಣ್ಣ ವಿಷಯಗಳು ಅದೆಷ್ಟು ಮುಖ್ಯ ಎಂಬುದು ನನಗೆ ಅರ್ಥವಾದದ್ದು. ಈ ಸಂದರ್ಭದಲ್ಲಿ ಕೆಲ ಓದುಗರಿಗೆ ಇದು ಮುಖಸ್ತುತಿಯ, ಹೊಗಳಿಕೆಯ ಲೇಖನ ಅನ್ನಿಸಬಹುದಾದರು ಆಕೆಯಿಂದ ನಾನು ಸಾಕಷ್ಟು ಸಣ್ಣಸಣ್ಣ ಸಂಗತಿಗಳನ್ನು ಕಲಿತದ್ದನ್ನು ಪ್ರಾಮಾಣಿಕ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇನೆ.



ಅವಳೊಳಗೆ ಒಬ್ಬ ಗುಪ್ತಗಾಮಿನಿ ತಾಯಿಯಿದ್ದಳು. ಆ ತಾಯ್ತನದ ಮನಸ್ಸು ಯಾರನ್ನೂ ದ್ವೇಷಿಸುತ್ತಿರಲಿ[...] ಬದಲಿಗೆ ತಿದ್ದಿ ಬುದ್ಧಿ ಹೇಳುವ, ಕ್ಷಮಿಸಿ ಬಿಡು[...] ಉದಾತ್ತತೆಯಿತ್ತು. ಎಷ್ಟೋ ಬಾರಿ ತನ್ನ ಪತ್ರಿಕೆಯ[...] ಪ್ರಕಟಿಸುತ್ತಿದ್ದ ಲೇಖನಗಳಿಂದ ಆಕೆ ಸಾಕಷ್ಟು ತೊಂದರ[...] ಒಳಗಾಗುತ್ತಿದ್ದಳು. ದೌರ್ಜನ್ಯ ಅತ್ಯಾಚಾರದಂತ[...] ಪ್ರಕರಣಗಳನ್ನಿಟ್ಟುಕೊಂಡು, ದಲಿತ ದಮನಿತರ ಬವಣೆ[...] ಕುರಿತು ಆಕೆ ಪತ್ತೆ ಮಾಡಿಸಿ, ಹಸಿಹಸಿಯಾಗಿಯ[...] ಪ್ರಕಟಿಸಿಬಿಡುತ್ತಿದ್ದ ಕಾರಣದಿಂದಾಗಿ ಸಾಕಷ್ಟು ತೊಂದರೆಗ[...] ಸಿಲುಕುತ್ತಿದ್ದಳು. ನನಗೆ ಎಷ್ಟೊ ಬಾರಿ ಅನಿಸುತ್ತಿತ್ತು ಇವ[...] ಪತ್ರಿಕೆಯ ಭಾಷೆಯನ್ನು ಬದಲಿಸಬೇಕು ಎಂದು. ಭಾಷೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಕಾಠಿಣ್ಯವಿದೆ ಎಂದ[...] ಅನಿಸುತ್ತಿತ್ತು. ಒಂದೆರಡು ಬಾರಿ ಹೇಳಿಯೂ ಇದ್ದೆನಾದ[...] ಗಟ್ಟಿ ಸ್ವರದಲ್ಲಿ ವಾದ ಮಾಡಲು ಹೋಗಿರಲಿಲ್ಲ. ಆ[...] ಹಲವು ವಿಷಯಗಳ ಬಗ್ಗೆ ನನಗೆ ತಕರಾರುಗಳಿದ್ದ[...] ಆಕೆಯ ಪತ್ರಿಕಾ ಪರಂಪರೆ ತಂದೆಯ ಕಾಲದಿಂದ[...] ತನ್ನದೇ ಕೆಲವು ವಿಶೇಷ ವಿಷಯಗಳಿಗಾಗಿ ಪ್ರಖ್ಯಾತವಾಗಿ[...] ಜಾಹಿರಾತು ಪಡೆಯದೇ ನಡೆಸಿದ ಅಪ್ಪನ ವೈಶಿಷ್ಟ್ಯವ[...] ಬಹಳ ಕಷ್ಟಪಟ್ಟು ಉಳಿಸಿಕೊಂಡು ಬಂದ ಛಲಗಾತಿಯ[...]

ನಮ್ಮಿಬ್ಬರ ಮಧ್ಯೆ ನಡೆಯುತ್ತಿದ್ದ ತೀರ ವಾಗ[...] ಜಾತಿಯ ಕುರಿತಾಗಿತ್ತು. ಯಾರಾದರೂ ಹೇಳಿದರೂ ತ[...] ಹೋಗದಷ್ಟು ಆ ವಿಷಯದಲ್ಲಿ ದಡ್ಡಿ ನಾನು ಅಥ[...] ನಾನು ಮನುಷ್ಯಳು ಇತರರೂ ಮನುಷ್ಯರು ಎಂದೇ ಭಾ[...] ಹಾಗೆಯೇ ಬದುಕುತ್ತಿರುವ ನನಗೆ ಯಾರ ಜಾತಿ[...] ಬಗ್ಗೆಯೂ ತಿಳಿದುಕೊಳ್ಳುವ ಆಸಕ್ತಿಯೇ ಇರಲಿಲ್ಲ. ಅವಳ[...] ನೋಡಿದ ತಕ್ಷಣವೇ ಜಾತಿ ಕಂಡುಹಿಡಿಯುವ[...] ಸೂಕ್ಷ್ಮಮತಿ. ಅವಳೊಡನೆ ವಾದ ಮಾಡಿಮಾಡಿ ಸುಸ್ತಾಗು[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone: 26676427
Fax : 26604536, E-mail :lankesh70@rediffmail...

ಗಲ್ಲುವಂತಹ ಆರ್ಥಿಕ ನಿಪುಣೆ ಕೂಡಾ ಗೌರಿ ಆಗಿರಲಿಲ್ಲ, ಪಿ.ಲಂಕೇಶ್ ತನ್ನೆಲ್ಲ ಪ್ರತಿಭೆಯ ಜತೆಗೆ ಒಬ್ಬ ಪಕ್ಕಾ ವ್ಯವಹಾರಸ್ಥರಾಗಿದ್ದರು. ಗೌರಿ ಪತ್ರಿಕೆ ನಡೆಸುವ ಕಷ್ಟಗಳನ್ನೆಲ್ಲ ಹೇಳಿಕೊಳ್ಳುವಾಗ ನನಗೆ ಮುಂಗಾರು ದಿನಗಳ ವರ್ಧನೆ ನೆನಪಾಗುತ್ತಿದ್ದರು. 'ಈ ತಿಂಗಳ ಸಂಬಳ ಕೊಟ್ಟಿದ್ದೇನೆ, ಮುಂದಿನ ತಿಂಗಳು ಏನೆಂದು ಗೊತ್ತಿಲ್ಲ' ಎಂದೇ ಇತ್ತೀಚಿನ ದಿನಗಳಲ್ಲಿ ಗೌರಿ ಮಾತು ಶುರುವಾಗುತ್ತಿತ್ತು.

ಕಾಂಗ್ರೆಸ್ ಪಕ್ಷದ ಬಗ್ಗೆ ಅನೇಕ ತಕರಾರುಗಳಿದ್ದರೂ ಸಿದ್ದರಾಮಯ್ಯನವರ ಜತೆಗೆ ಮುಖ್ಯಮಂತ್ರಿ ಮತ್ತು ಪತ್ರಕರ್ತೆಯನ್ನು ಮೀರಿದ ಬಾಂಧವ್ಯ ಇತ್ತು. ಆದರೆ ಹಲವಾರು ಬಾರಿ ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದಂತೆ ತನ್ನೆದುರಿಗೆ ಕೂತವರು ಮುಖ್ಯಮಂತ್ರಿ ಎನ್ನುವುದನ್ನೇ ಮರೆತು ತಾರಾಮಾರ ಜಗಳವಾಡುತ್ತಿದ್ದುದಕ್ಕೆ ನಾನೇ ಪ್ರತ್ಯಕ್ಷ ಸಾಕ್ಷಿ. ಮುಖ್ಯಮಂತ್ರಿಯವರು ಕೂಡಾ ಮಕ್ಕಳನ್ನು ತಂದೆ ರಮಿಸುವಂತೆ ನಸುನಗುತ್ತಾ ಸಮಾಧಾನ ಮಾಡುತ್ತಿದ್ದರು.

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರನಾಗಿ ಹಲವು ಸಂಪಾದಕರ ಎರಡು ಮುಖಗಳನ್ನು ನೋಡಿ ಹನ್ನಾರೆ ಕಂಡು ನಾನು ಅಸಹ್ಯ ಪಟ್ಟಿದ್ದುಂಟು. ಆದರೆ ಗೌರಿ ತನಗಿರುವ ಸಲುಗೆಯನ್ನು ದುರುಪಯೋಗಪಡಿಸಿಕೊಳ್ಳಲಿಲ್ಲ. ತನಗಾಗಿ ಎಂದೂ ಏನನ್ನೂ ಸರ್ಕಾರ ಇಲ್ಲವೆ ಮುಖ್ಯಮಂತ್ರಿಯವರಿಂದ ಕೇಳಿರಲಿಲ್ಲ.

ಕೇಳಲೇ ಇಲ್ಲವೆಂದಲ್ಲ. ಮುಖ್ಯಮಂತ್ರಿಯವರ ಮನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಬುದ್ಧನ ಮೂರ್ತಿಗಳು. ಅದರಲ್ಲೊಂದು ಮೂರ್ತಿ ಗೌರಿಯನ್ನು ಸೆಳೆದಿತ್ತು. ಆ ಮೂರ್ತಿ ನನಗೆ ಬೇಕು ಎಂದು ಗೌರಿ ನನ್ನೊಡನೆ ಹೇಳಿದಾಗ ನಾನು ಸಿಎಂ ಕಡೆ ತೋರಿಸಿದ್ದೆ. ತಕ್ಷಣ ನೇರವಾಗಿ ಸಿದ್ದರಾಮಯ್ಯನವರ ಬಳಿ ಹೋದ ಗೌರಿ 'ಆ ಬುದ್ಧನ ಮೂರ್ತಿ ನನಗೆ ಬೇಕು' ಎಂದು ಕೇಳಿದ್ದಳು. ಅವರು ಅಷ್ಟೇ ಅಕ್ಕರೆಯಿಂದ 'ಕೊಂಡ್ಹೋಗಮ್ಮ" ಎಂದರು. ಗೌರಿ ಅದನ್ನೆತ್ತಿಕೊಂಡು ಹೋಗಿಯೇ ಬಿಟ್ಟಳು.

ಆ ಇಡೀ ದೃಶ್ಯ ನನ್ನ ಕಣ್ಣಿಗೆ ಕಟ್ಟಿದ ಹಾಗಿದೆ. ಪುಟ್ಟ ಮಕ್ಕಳು ಯಾವುದೋ ಬೊಂಬೆಯನ್ನು ನೋಡಿ ಬೇಕೆಂದು ತಂದೆ ಬಳಿ ರಚ್ಚೆ ಹಿಡಿದ ಹಾಗೆ, ಅಪ್ಪ ಪ್ರೀತಿಯಿಂದ ಅದನ್ನು ಮಗಳ ಕೈಗೆ ಕೊಟ್ಟ ಹಾಗೆ ಇತ್ತು. ಈ ಸರ್ಕಾರದಿಂದ, ಮುಖ್ಯಮಂತ್ರಿಗಳಿಂದ ಗೌರಿ ಪಡೆದ ಏಕೈಕ ಉಡುಗೊರೆ ಬುದ್ಧನ ಮೂರ್ತಿ ಮಾತ್ರ. ಗೌರಿ ನಮ್ಮೊಡನೆ ಇಲ್ಲ ಎಂದಾಗೆಲ್ಲ ನನಗೆ ನೆನಪಾಗುವುದು ಆ ಬುದ್ಧನ ಶಾಂತ, ನಿರ್ಲಿಪ್ತ ಮುಖಾರವಿಂದ ಮಾತ್ರ. ಹೌದು ನಾನು ಗೌರಿ, ನಾವೆಲ್ಲರೂ ಗೌರಿ.



● ದಿನೇಶ್ ಅಮೀನ್‌ಮಟ್ಟು

ಜಾತಿಯ ಆಧಾರದಲ್ಲಿ ನಡೆಯುವ ಎಲ್ಲ ರೀತಿಯ ದೌರ್ಜನ್ಯಗಳನ್ನು ಶೋಷಣೆಯನ್ನು ವಿರೋಧಿಸಿದರೆ ಸಾಕಲ್ಲ, ಎಲ್ಲರ ಪ್ರತ್ಯೇಕ ಜಾತಿಯನ್ನು ತಿಳಿದುಕೊಂಡು ಮಾಡಬೇಕಾಗಿರೋದು ಏನು ಅನ್ನೋದು ನನ್ನ ವಾದ. ಆದರೆ ಆಕೆ ಮತ್ತೆಮತ್ತೆ ನನಗೆ ಅದನ್ನು ತಿಳಿ ಹೇಳಲು ಪ್ರಯತ್ನಿಸಿ ಹಣ್ಣಾಗುತ್ತಿದ್ದಳು. ಇಂದಿಗೂ ಅದನ್ನು ಸ್ವೀಕರಿಸಲು ಸಾಧ್ಯವೇ ಆಗಿಲ್ಲ. ಒಮ್ಮೆ ನೀವು ಮೇಲ್ಜಾತಿಯಲ್ಲಿ ಹುಟ್ಟಿರುವ ಕಾರಣಕ್ಕೆ ಎಂದಾಗ ನನ್ನ ತಂದೆಯ ಬಗ್ಗೆ ಅವರು ಬದುಕಿದ ರೀತಿಯ ಬಗ್ಗೆ ಹೇಳಿದ್ದೆ. ನನ್ನ ತಂದೆ ಸ್ವತಃ ಅರ್ಚಕರಾಗಿದ್ದು ಇಡೀ ಸೀಮೆಯ ಪುರೋಹಿತರಾಗಿದ್ದು ನಾನು ಹುಟ್ಟಿ ಬೆಳೆದಿದ್ದೆಲ್ಲ ಊರ ದೇವಸ್ಥಾನದಲ್ಲಿ ಎಂಬುದನ್ನು ಹೇಳಿ ತಂದೆ ನನ್ನನ್ನು ಹೀಗೆ ಬೆಳೆಸಿದ ಬಗ್ಗೆ ಅವರೊಳಗೆ ಇದ್ದ ಒಬ್ಬ ವಿಚಾರವಾದಿ ಮಾನವತ್ವದ ಬಗ್ಗೆ ಹೇಳಿದಾಗ ನಿಮ್ಮಪ್ಪನ ಬಗ್ಗೆ ಲೇಖನ ಬರೆದುಕೊಡು ಎಂದು ಹೇಳಿದ್ದಳು. ಎರಡು ವರ್ಷದಿಂದ ಕೇಳಿದವಳಿಗೆ ಸತಾಯಿಸಿ ಸತಾಯಿಸಿ ಅವಳು ಬಹಳ ಮುಜುಗರದಿಂದ ಆದರೆ ಬಹು ಉಪಯುಕ್ತ ಲೇಖನಗಳನ್ನೊಳಗೊಂಡ ಒಂದು ದೀಪಾವಳಿ ವಿಶೇಷಾಂಕ ಹೊರತರಲು ಅನಿವಾರ್ಯವಾಗಿ ತೀರ್ಮಾನಿಸಿ ಆ ಉಸಕ್ಕೊಂದು ಮತ್ತೆ ತಿರುಗಾಟ ಸುತ್ತುವಿಕೆ ಪ್ರಾರಂಭವಾದಾಗ ಪ್ರಾಮಿಸ್ ಮಾಡಿದ್ದೆ, ಅಪ್ಪನ ಲೇಖನ ವಿಶೇಷಾಂಕಕ್ಕೆ ಬರೆದು ಕೊಡುತ್ತೇನೆ ಎಂದು. ಗೆಳತಿ ಬರೆದೆ, ಆದರೆ ಹೀಗೆ ಬರೆಯುವುದು ಬೇಡದಿತ್ತು.

ಓ ತಾಯಿ ಭಾರತಾಂಬೆ
ನಿನ್ನ ಮಗಳ ಕೊಂದರು.
ಹೋರಾಟದ ಜೀವಿಯನ್ನು,
ಒಡನಾಡಿ ಬಂಧುವನ್ನು,
ನಿನ್ನ ಮಗಳನ್ನು ಕೊಂದರು.




● ವಿಮಲಾ ಕೆ.ಎಸ್.



ಗೌರೀ ದುಃಖ

ಲಂಕೇಶರ ಸಾಹಿತ್ಯದ ಮತ್ತು ಪತ್ರಿಕೆಯ ಓದುಗರಾಗಿದ್ದ ನಮಗೆ, ಅವರ ಮಕ್ಕಳ ಬಗ್ಗೆ ಹೆಚ್ಚೇನೂ ಗೊತ್ತಿರಲಿಲ್ಲ. ಲಂಕೇಶರು ಇಲ್ಲವಾಗಿ ಪತ್ರಿಕೆಯ ಸಂಪಾದಕತ್ವ-ಮಾಲೀಕತ್ವ ವಹಿಸಿಕೊಂಡ ಬಳಿಕವೇ ಗೌರಿಯವರ ಹೆಸರು ಕೇಳಿದ್ದು. ನಗರದ ಆಂಗ್ಲಮಾಧ್ಯಮ ಶಾಲೆಗಳಲ್ಲಿ ಕಲಿತು, ಆಂಗ್ಲ ಪತ್ರಕರ್ತರಾಗಿ ಕರ್ನಾಟಕದ ಹೊರಗಿದ್ದ ಅವರಿಗೆ, ಕರ್ನಾಟಕದ ಜತೆ ಆಪ್ತವಾದ ಸಂಬಂಧಗಳಿರಲಿಲ್ಲ. ಕನ್ನಡದಲ್ಲಿ ಬರೆಯುವುದಕ್ಕೂ ಬರುತ್ತಿರಲಿಲ್ಲ. ಬಹುಶಃ ಬಾಬಾಬುಡನಗಿರಿ ಹೋರಾಟ ಅವರ ಪ್ರಾದೇಶೀಕರಣದ ರೂಪಾಂತರಕ್ಕೆ ಮುನ್ನುಡಿ ಬರೆಯಿತು. ಅನೇಕ ಜಾಥಾಗಳಲ್ಲಿ ವೇದಿಕೆಯಲ್ಲಿ ಸೆರೆಮನೆಯಲ್ಲಿ ಅವರೊಟ್ಟಿಗೆ ಇರುವ ಅವಕಾಶಗಳು ನನಗೆ ಒದಗಿದವು. ಅವರ ಮಾನವೀಯ ಕಾಳಜಿ, ಸಾಮಾಜಿಕ ಬದ್ಧತೆ, ನೇರಗುಣ, ದುಡುಕುತನ, ಸರಳತೆ, ಹಠಮಾರಿತನಗಳ ಪರಿಚಯ ಆಗುತ್ತ ಹೋಯಿತು. ನಾಸ್ತಿಕ ಮಾನವತಾವಾದಿ ವೈಚಾರಿಕತೆಯಲ್ಲಿ ರೂಪುಗೊಂಡ ಆಲೋಚನಕ್ರಮವುಳ್ಳ ಅವರೊಬ್ಬ ಆಧುನಿಕ ಮನಸ್ಸಿನ ಸ್ತ್ರೀಯಾಗಿದ್ದರು. ಅವರ ಪ್ರತಿರೋಧವು ಸದಾ ನಾಗರಿಕ ಹಕ್ಕಿನ ಪರಿಭಾಷೆಯಲ್ಲಿತ್ತು. ಧರ್ಮಗಳನ್ನು ನಾಗರಿಕ ಸಮಾಜದ ಅನಿಷ್ಟವೆಂದು ಅವರು ಪರಿಭಾವಿಸಿದಂತಿತ್ತು. ಅದರಲ್ಲೂ ಧರ್ಮಗಳು ಜನರನ್ನು ವಿಭಜಿಸಲು ದಮನಿಸಲು ನಿಯಂತ್ರಿಸಲು ಸಲಕರಣೆಯಾಗಿ ಬಳಸುವ ಶಕ್ತಿಗಳ ಬಗ್ಗೆ ಅವರಿಗೆ ದೃಢವಾದ ಖಚಿತವಾದ ವಿರೋಧವಿತ್ತು. ಆದರೆ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ, ದಲಿತರ ಮಹಿಳೆಯರ ಮುಸ್ಲಿಮರ ಹಾಗೂ ಲೋಕದ ಸಮಸ್ತ ದಮನಿತರ ಬಗ್ಗೆ ಕಾಳಜಿಯಿತ್ತು. ಅವರು ತಮ್ಮ ಅಪ್ಪನಂತೆಯೆ ಒಳ್ಳೆಯ ಭಾಷಣಕಾರ್ತಿ ಆಗಿರಲಿಲ್ಲ. ತುಂಡುತುಂಡಾಗಿ ಪದಗಳನ್ನು ಉಚ್ಚರಿಸುತ್ತ ಕೊರಳಪಟ್ಟಿಗೆ ಕೈಹಾಕುವಂತೆ ನೇರವಾಗಿ ಮಾತಾಡುತ್ತಿದ್ದರು. ಮಾತೂ ಬಹಳ ಕಡಿಮೆ. ಮಲೆಬೆನ್ನೂರು ಕೋಮುಗಲಭೆಯ ಬಳಿಕ ದಾವಣಗೆರೆಯಲ್ಲಿ ಏರ್ಪಾಡಾಗಿದ್ದ ಸಾಮರಸ್ಯ ಕಾರ್ಯಕ್ರಮ ನೆನಪಾಗುತ್ತಿದೆ. ಅವರು ಸಭೆಯ ಜನರನ್ನು ತರಾಟೆ ತೆಗೆದುಕೊಳ್ಳುವಂತೆ ಮಾತು ಶುರುಮಾಡಿದರು. ಸಭೆಯಲ್ಲಿದ್ದ ಕೆಲವರು ಕೆರಳಿ ಗಲಭೆ ಎಬ್ಬಿಸಿದರು. ಭಾಷಣವನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು. ಲಂಕೇಶ್ ಕೂಡ ಭಾಷಣದಲ್ಲಿ ಬರೆಹದಲ್ಲಿ ಜನರನ್ನು ಬೈಯುತ್ತಿದ್ದರು. ಆದರೆ ಅವರ ಬೈತದಲ್ಲಿ ಹಿರಿತನದ ವಿವೇಕ ಹಾಯಿಸಿ ತಿದ್ದುವ ಒಂದು ಗುಣವೂ ಇತ್ತು. ಗೌರಿಯವರಲ್ಲಿ ದುಷ್ಟ ವಿಚಾರದ ಪ್ರಭಾವಕ್ಕೆ ಸಿಲುಕಿದ ಜನರನ್ನು ಸೆಳೆದುಕೊಂಡು, ಸಮಜಾಯಿಷಿ ಕೊಟ್ಟು ಮನಪರಿವರ್ತಿಸುವ ಸುಧಾರಕ ಗುಣ ಕಮ್ಮಿ. ದುಷ್ಟರಿಗೆ ಸೆಡ್ಡುಹೊಡೆದು ಕದನಕ್ಕೆ ಕರೆಯುವ ವಿಧಾನವೇ ಪ್ರಧಾನವಾಗಿತ್ತು. ಕೋಮುದಂಗೆಗಳು ಉತ್ತುಂಗಾವಸ್ಥೆಯಲ್ಲಿದ್ದಾಗ ಲಂಕೇಶ್ ಬರೆದ 'ಇಟ್ಟಿಗೆ ಪವಿತ್ರ, ಜೀವ ಪವಿತ್ರವಲ್ಲ' ಲೇಖನ ಗಮನಿಸಬೇಕು. ಅಲ್ಲಿ, ಇಟ್ಟಿಗೆ ಅಥವಾ ಸ್ಥಾವರರೂಪದ ಗುಡಿಯನ್ನು ಪವಿತ್ರ ಎಂದು ಚೀತ್ಕರಿಸುವವರನ್ನು ಖಂಡಿಸುವುದಕ್ಕಿಂತ, ನಮ್ಮ ಜತೆ ಇರುವ ಸಂಸಾರಸ್ಥ ಜನ, ಅವರ ಜೀವ, ಬದುಕು ಹಾಗೂ ಮಾನವೀಯ ಸಂಬಂಧಗಳು ಹೆಚ್ಚು ಮುಖ್ಯ ಎಂದು ಮನವರಿಕೆಗೊಳಿಸುವ ಹಿತವಾದವೇ ಹೆಚ್ಚಾಗಿದೆ. ಅದರ ದನಿ, ಇಟ್ಟಿಗೆ ರಾಜಕಾರಣದ ಜತೆ ಕೈಜೋಡಿಸಿದ ಮುಗ್ಧರನ್ನು ಮಾತ್ರವಲ್ಲ, ಆ ರಾಜಕಾರಣವನ್ನು ಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದ ಕೆಲವರನ್ನೂ ಕಲಕುವಷ್ಟು ಗಾಢವಾಗಿದೆ. ಬಹುಶಃ ಗೌರಿ ಈ ಆ ಲೇಖನ ಬರೆದಿದ್ದರೆ 'ಇಟ್ಟಿಗೆ ಪವಿತ್ರವೆನ್ನುವರಿಗೆ ಧಿಕ್ಕಾರ' ಎಂದು ಶೀರ್ಷಿಕೆ ಕೊಡುತ್ತಿದ್ದರೊ ಏನೊ? 'ಆವರಣ'ದಂತಹ ಕೆಟ್ಟ ಮತ್ತು ದುಷ್ಟತನವುಳ್ಳ ಕಾದಂಬರಿಯನ್ನು ವಿರೋಧಿಸಿ, ಅದಕ್ಕೆ ಸಲ್ಲದ ಜನಪ್ರಿಯತೆಯನ್ನು ಕೊಡಬಾರದು ಎಂಬುದು ನನ್ನ ಅಭಿಮತವಾಗಿತ್ತು. ಅವರು ಒಪ್ಪಲಿಲ್ಲ. ನಮ್ಮಿಂದೆಲ್ಲ ಲೇಖನ ಬರೆಯಿಸಿ ಪುಸ್ತಕ ತಂದರು. ಗೌರಿಯ ದಾರಿಯೇ ಬೇರೆ.

ಭಾರತದಲ್ಲಿ ಜನರ ಧರ್ಮಶ್ರದ್ಧೆಗಳು ಅವರ ಸಂಸ್ಕೃತಿ ಹಾಗೂ ಮತೀಯ ರಾಜಕಾರಣದ ಜತೆ ಬೆರೆತುಹೋಗಿರುವ ಸಂಕೀರ್ಣ ಸನ್ನಿವೇಶವಿದೆ. ಇಲ್ಲಿ ಮತಧರ್ಮವನ್ನು ರಾಜಕಾರಣದಲ್ಲಿ ಬಳಸುವವರು ತಮ್ಮ ಸೈದ್ಧಾಂತಿಕ-ರಾಜಕೀಯ ಎದುರಾಳಿಗಳನ್ನು ಸುಲಭವಾಗಿ 'ಧರ್ಮವಿರೋಧಿ'ಗಳೆಂದು ಲೇಬಲ್ ಮಾಡುವುದು ಸುಲಭ; ತಮ್ಮನ್ನು ಧರ್ಮದ ವಕ್ತಾರರಾಗಿ ಬಿಂಬಿಸಿಕೊಂಡು ಸಮುದಾಯಗಳನ್ನು ವಶಪಡಿಸಿಕೊಳ್ಳುವುದು ಇನ್ನೂ ಸಲೀಸು. ಇದು ಧಾರ್ಮಿಕ ವಿಕಾರಗಳನ್ನು ಮುಖಾಮುಖಿ ಮಾಡುವ ಎಲ್ಲ ವೈಚಾರಿಕ ಚಳವಳಿಗಳ ಮುಂದಿರುವ ಕತ್ತಿಯಂಚಿನ ದಾರಿ; ಧಾರ್ಮಿಕವಾಗಿರುವ ಜನರನ್ನು ಸ್ಪರ್ಶಿಸುವ ಮತ್ತು ಎದುರಾಳಿಗಳನ್ನು ನಿಶ್ಶಸ್ತ್ರಗೊಳಿಸುವ ಹೊಸನುಡಿಗಟ್ಟನ್ನು ಹುಟ್ಟಿಸಿಕೊಳ್ಳಬೇಕಾದ ಸವಾಲು ಕೂಡ. ಧಾರ್ಮಿಕರಾಗಿದ್ದೂ ಜೀವಪರವಾಗಿರುವ ಜನ ಕಟ್ಟಿಕೊಂಡಿರುವ ಸಾಂಸ್ಕೃತಿಕ ಲೋಕಗಳನ್ನು ಹಾಗೂ ಧಾರ್ಮಿಕ ವಿಕಾರಗಳನ್ನೂ ಬೇರೆಮಾಡಿ ನೋಡುವ ವಿಷಯದಲ್ಲಿ ಹುಶಾರುತನ ತೋರಬೇಕಾದ ಸನ್ನಿವೇಶವಿದು. ಆದರೆ ಗೌರಿಗೆ ನಮ್ಮ ಮಾತು-ಕ್ರಿಯೆಗಳನ್ನು ಎದುರಾಳಿಗಳು ಹತ್ಯಾರವಾಗಿ ಬಳಸಿಕೊಳ್ಳದಂತೆ ನೋಡುವ ಯುದ್ಧತಾಂತ್ರಿಕ ಹುಶಾರುತನ ಅಷ್ಟಾಗಿರಲಿಲ್ಲ. ಪಾಶ್ಚಿಮಾತ್ಯ ನಾಗರಿಕ ಪ್ರಜ್ಞೆಯುಳ್ಳ ಅವರಲ್ಲಿ ತಪ್ಪು ಕೆಟ್ಟದ್ದು ಅನಿಸಿದ್ದನ್ನು ನೇರವಾಗಿ ಖಂಡಿಸುವ ನಿಷ್ಠುರವಾದಿ ದುಡುಕಿತ್ತು. ಅವರ ಈ ಧೀಮಂತ ನಿಷ್ಠುರತೆಯಲ್ಲಿ ಸಮಸಮಾಜದ ಕನಸಿತ್ತು. ಇದನ್ನು ಅವರ ಎದುರಾಳಿಗಳಿಗಿರಲಿ, ಅನೇಕ ಸಂಗಾತಿಗಳಿಗೂ ಅರಿಯಲು ಸಾಧ್ಯವಾಗಲಿಲ್ಲ.



ಕರ್ನಾಟಕದ ರಾಜಕಾರಣ, ಪತ್ರಿಕೋದ್ಯಮ ಚಳವಳಿಗಳ ಎರಡು ದಶಕಗಳ ಬಾಳುವೆಯಲ್ಲಿ ಗೌರಿ ತಮಗೇ ಅರಿಯದೆ ರೂಪಾಂತರ ಪಡೆಯುತ್ತಿದ್ದರು. ಪತ್ರಿಕೆ ವಹಿಸಿಕೊಂಡಾಗ ಆರೋಗ್ಯಕರವಾಗಿದ್ದ ಅವರ ದೇಹ ಈಚೆಗೆ ಹೆಚ್ಚಿನ ಕೆಲಸದಿಂದಲೂ ಆರ್ಥಿಕ ಬಿಕ್ಕಟ್ಟಿನಿಂದಲೂ ಬಳಲಿ ಸೊರಗುತ್ತಿತ್ತು. ಆದರೆ ಒಳಗಿನ ಚೈತನ್ಯ ದೀಪ್ತವಾಗಿತ್ತು ಮತ್ತು ಮಾಗುತ್ತಿತ್ತು. ಮತೀಯವಾದದ ನಂಜಿನ ಚುಚ್ಚುಮದ್ದಿಗೆ ಒಳಗಾದ ಹುಡುಗರು ಅವರನ್ನು ನೀಚ ಭಾಷೆಯಲ್ಲಿ ಟ್ರಾಲ್ ಮಾಡುತ್ತಿದ್ದರು. ಅವರನ್ನು ದಾರಿತಪ್ಪಿದ ಮಕ್ಕಳು ಎಂದು ಭಾವಿಸಿ ಗೌರಿ ತಾಳ್ಮೆಯಿಂದ ಅವರ ಜತೆ ಸಂವಾದ ಮಾಡುತ್ತಿದ್ದರು. ಅವರು ಕುರುಡಾಗಿ ಸೈದ್ಧಾಂತಿಕ ರಾಜಕೀಯ ಎದುರಾಳಿಗಳನ್ನು ವಿರೋಧಿಸುತ್ತಿರಲಿಲ್ಲ. ಯಾರೊ ಮೋದಿಯವರ ಇಂಗ್ಲೀಷನ್ನು ಗೇಲಿಮಾಡಿದಾಗ, ಬ್ರಿಟಿಷರಿಂದ ಆಳಿಸಿಕೊಂಡ ದೇಶದಲ್ಲಿ ಇಂಗ್ಲೀಷ್ ಅಧಿಕಾರದ ಮತ್ತು ತಾರತಮ್ಯದ ಉಪಕರಣವಾಗಿದ್ದು, ಭಾಷೆಯ ಕಾರಣಕ್ಕೆ ನಮ್ಮ ಸೈದ್ಧಾಂತಿಕ ಎದುರಾಳಿಯನ್ನು ನಿಂದಿಸುವುದು ತಪ್ಪು ಎಂದು ಅವರು ಖಂಡಿಸಿದರು; ಭೈರಪ್ಪನವರ 'ಆವರಣ' 'ಕವಲು'ಗಳಲ್ಲಿದ್ದ ರೋಗಗ್ರಸ್ತ ದೃಷ್ಟಿಕೋನವನ್ನು ಕಟುವಾಗಿ ವಿರೋಧಿಸಿದ್ದ ಅವರೇ, 'ಉತ್ತರಕಾಂಡ'ವನ್ನು ಓದಿ, ಅದು ಯಾಕೆ ಒಳ್ಳೆಯ ಕಾದಂಬರಿ ಎಂದು ಹೋದಲ್ಲೆಲ್ಲ ಹೇಳುತ್ತಿದ್ದರು. ಮಕ್ಕಳಿಲ್ಲದ ಅವರಲ್ಲಿ ಸೈದ್ಧಾಂತಿಕ ತಾಯ್ತನದ ಪ್ರಜ್ಞೆ ಜಾಗೃತಗೊಂಡಿತ್ತು. ಜೆಎನ್‌ಯು ಹಾಗೂ ಹೈದರಾಬಾದ್ ಚಳವಳಿಗಳಲ್ಲಿ ತೊಡಗಿದ್ದ ತರುಣ-ತರುಣಿಯರನ್ನು ತಮ್ಮ ದತ್ತುಮಕ್ಕಳೆಂದು ಘೋಷಿಸಿದರು. ಅವರಲ್ಲಿ ಕೆಲವರಿಗೆ ಬಟ್ಟೆಬರೆ ತೊಡಿಸಿ ಉಣಿಸಿ ಸಂತೋಷ ಪಡುತ್ತಿದ್ದರು. ಇದು ಚಳವಳಿಗಳಿಗೆ ಅವರು ಹೆಣ್ಣಾಗಿ ಕೊಡುತ್ತಿದ್ದ ಮಾನವೀಯ ಸ್ಪರ್ಶವಾಗಿತ್ತು. ಮಕ್ಕಳಿಲ್ಲದ ಅವರು ಅನುಭವಿಸುತ್ತಿದ್ದ ಹೊಸತಾಯ್ತನವೂ ಆಗಿತ್ತು. ಚಳವಳಿಗಳಲ್ಲಿ ತೊಡಗಿಸಿಕೊಂಡ ಹುಡುಗ ಹುಡುಗಿಯರಿಂದ ತಮಗೆ ಶಕ್ತಿಯನ್ನು ಆವಾಹಿಸಿಕೊಳ್ಳುತ್ತಿದ್ದರು. ಅವರ ಮೇಲೆ ಎಲ್ಲೇ ಹಲ್ಲೆಯಾದರೂ ಮಿಡುಕುತ್ತಿದ್ದರು. ಹೊಸ ಸಮಾಜ ಕಟ್ಟುವ ಕನಸುಳ್ಳ ಹೊಸತಲೆಮಾರಿನ ಎಲ್ಲ ಜತೆ ನಂಟಿನ ವಿಶಾಲಜಾಲ ಕಟ್ಟುತ್ತಿದ್ದರು. ಹಲವು ಜೀವಪರ ಚಳವಳಿಗಳ ತಾಯಾಗಿದ್ದರು. ಬರೆಹದಲ್ಲಿ ಅವರನ್ನು ಲಂಕೇಶರ ಜತೆ ಹೋಲಿಸಲು ಸಾಧ್ಯವಿಲ್ಲ. ಆದರೆ ಚಳವಳಿ ಹಾಗೂ ಸಾಮಾಜಿಕ ಬದ್ಧತೆಯ ವಿಷಯದಲ್ಲಿ ಅವರು ಲಂಕೇಶರಿಂದ ಭಿನ್ನದಾರಿಯಲ್ಲಿ ಬಹುದೂರ ಚಲಿಸಿದ್ದರು. ಅವರ ವಿಶಿಷ್ಟ ವ್ಯಕ್ತಿತ್ವ ಮತ್ತು ನಮ್ಮ ಕಾಲದ ಚಾರಿತ್ರಿಕ ಒತ್ತಡಗಳೇ ಅವರ ಹಾದಿಯನ್ನು ರೂಪಿಸಿದವು.

ಪುರಾಣದಲ್ಲಿ ದಕ್ಷನ ಮಗಳಾದ ಗೌರಿ, ಗಂಡನಿಗಾದ ಅಪಮಾನ ಸಹಿಸದೆ ಪ್ರತಿಭಟನಾರ್ಥವಾಗಿ ಯಜ್ಞಕುಂಡಕ್ಕೆ ಬಿದ್ದು ಆತ್ಮಾಹುತಿ ಮಾಡಿಕೊಂಡವಳು. ಇದಕ್ಕೇ ಇರಬೇಕು, ಬೆಂಕಿ ಉರಿಯಂತಹ ದಳಗಳನ್ನು ಹೊಂದಿರುವ ಕಾಡುಪುಷ್ಪಕ್ಕೆ ಗೌರಿಹೂವು ಎನ್ನುವರು. ಬೆಂಕಿಯ ಸುಡುನಿಷ್ಠುರತೆ ಇರಿಸಿಕೊಂಡಿದ್ದ ಗೌರಿ ತಾವು ನಂಬಿದ ವಿಚಾರಕ್ಕಾಗಿ ತುಪಾಕಿಯ ಬೆಂಕಿಗೆ ಬಲಿಯಾದರು. ತುಪಾಕಿಯಿಂದ ಕ್ರಾಂತಿ ಸಾಧ್ಯವಿಲ್ಲ ಎಂದ ಅವರ ಜೀವ ತುಪಾಕಿಯಿಂದಲೇ ಹೋಯಿತು. ಕಲಬುರ್ಗಿ ಕೊಲೆಯಾದಾಗ ನಾನು ಬರೆದ ಮಾತನ್ನು ಇಲ್ಲೂ ಬರೆಯಬಹುದು: 'ಅವರನ್ನು ಕೊಂದವರು ಯಾರೆಂದು ಖಚಿತವಾಗಿಲ್ಲ. ಆದರೆ ಅವರ ಕೊಲೆಗೆ ಮುನ್ನ ಹಿಂಸಿಸಿದವರು ಯಾರು; ಕೊಲೆಯಾದ ಬಳಿಕ ಸಂಭ್ರಮಿಸುತ್ತಿರುವವರು ಯಾರು ಎಂದು ಗೋಡೆ ಬರೆಹದಂತೆ ಸ್ಪಷ್ಟವಾಗಿದೆ'. ದಿಗ್ಭ್ರಮೆಗೊಳಿಸುತ್ತಿರುವುದು ಬಾಡಿಗೆ ಹಂತಕರ ಕ್ರೌರ್ಯವಲ್ಲ, ವೈಚಾರಿಕ ಸೈದ್ಧಾಂತಿಕ ಭಿನ್ನಮತಗಳನ್ನು ಮನಸೋ ಇಚ್ಛೆ ನಿಂದಿಸಿ, ಬಡಿದು ಇಲ್ಲವೇ ಕೊಂದು ತೀರಿಸಬಹುದು ಎಂಬ ಧೋರಣೆ ಹೊಸತಲೆಮಾರಿನ ಸಾವಿರಾರು ಹುಡುಗರಲ್ಲಿ (ಹುಡುಗಿಯರಲ್ಲಿ ಅಲ್ಲ) ನೆಲೆಯೂರುತ್ತಿರುವುದು. ಆದರೆ ಕಲಬುರ್ಗಿ-ಗೌರಿಯರ ದಾರುಣ ಕೊಲೆಗೆ ಲೋಕದ ಜನ ಪ್ರತಿಕ್ರಿಯಿಸಿದ ಪರಿ ಅಪೂರ್ವವಾಗಿದೆ. ಇವರಿಬ್ಬರ ವ್ಯಕ್ತಿತ್ವ, ವಿಚಾರ, ಕ್ರಿಯೆಗಳು ಬದುಕಿರುವಾಗ ಇರುವುದಕ್ಕಿಂತ ಸಾವಿನ ಬಳಿಕ ಹೆಚ್ಚು ಪ್ರಭಾವಶಾಲಿ ಆಗಿರುವಂತೆ ಕಾಣುತ್ತಿದೆ. ಮಾನವೀಯ ಕರ್ನಾಟಕ ಕಟ್ಟುವವರ ಹಾದಿಯಲ್ಲಿ ಬೆಳಕು ಪೂರ್ತ ಆರಿಲ್ಲ. ಇನ್ನೂ ನಡೆಯಬಹುದು-ಆದರೆ ಬಡಿಬಡಿಯಾಗಿ ಅಲ್ಲ.




● ರಹಮತ್ ತರೀಕೆರೆ

ಗಾಂಧಿಯ ಬೆಳಕಲ್ಲಿ ಗೌರಿ....

ನಾನು ಬಾಲ್ಯದಲ್ಲಿ ಕೇಳಿದ ಕತೆ ಇದು. ಈ ಕತೆ ಹೇಳಿದ್ದು ನನ್ನ ತಾಯಿ. ಆಕೆ ಅದನ್ನು ನನಗೆ ಹೇಳುವ ಸಂದರ್ಭದಲ್ಲಿ ಯಾವ ಉದ್ದೇಶ ಇತ್ತು ಎನ್ನುವುದು ನನಗೆ ಅರಿಯದು. ಆದರೆ ಆ ಬಳಿಕ, ಈ ಕತೆ ನಾನು ಬೆಳೆದಂತೆ ಹೆಚ್ಚು ಹೆಚ್ಚು ಉಜ್ವಲಗೊಳ್ಳುತ್ತಾ, ನನ್ನನ್ನು ವಾಸ್ತವಕ್ಕೆ ಮುಖಾಮುಖಿಯಾಗುವುದಕ್ಕೆ ಪ್ರೇರೇಪಿಸಿದೆ. ನನ್ನ ತಾಯಿ ಹೇಳಿದ ಕತೆ ಹೀಗಿದೆ.

ಪ್ರವಾದಿ ಮಹಮ್ಮದ್ ಆಗಷ್ಟೇ ಮಕ್ಕಾದಲ್ಲಿ ತನ್ನ ಚಿಂತನೆಗಳನ್ನು ಹರಡುತ್ತಿದ್ದ ಕಾಲ. ಅವರು ಭಾಗಶಃ ಒಂಟಿಯಾಗಿದ್ದರು. ಹಲವರಿಂದ ಹುಚ್ಚ ಎಂಬ ಟೀಕೆಗೀಡಾಗಿದ್ದರಷ್ಟೇ ಅಲ್ಲದೆ ಹಲ್ಲೆಗೂ ಒಳಗಾಗಿದ್ದರು. ಎಲ್ಲರಿಗೂ ಅವರೊಂದು ತಮಾಷೆಯ ವಸ್ತು. ಇನ್ನೊಂದೆಡೆ ಮಹಮ್ಮದರ ಸಂಬಂಧಿಯಾಗಿರುವ ಮಕ್ಕಾದ ನಾಯಕ ಅಬೂಜಹಲ್ (ಈತನ ನಿಜವಾದ ಹೆಸರು ಅಮ್ರ್ ಬಿನ್ ಹಿಶಾಮ್) ಮಹಮ್ಮದರಿಗೆ ಸರಿಯಾದ ಪಾಠ ಕಲಿಸಲು ಕಾಯುತ್ತಿದ್ದ. ಕೈಗೆ ಸಿಕ್ಕಿದರೆ ಕೊಂದೇ ಹಾಕುವುದೆಂದು ತೀರ್ಮಾನಿಸಿದ್ದ. ಮಕ್ಕಾದ ಪುಂಡರೆಲ್ಲ ಸಮಯ ಸಿಕ್ಕಿದಾಗ ಮಹಮ್ಮದರ ಮೇಲೆ ಟೀಕೆ, ದಾಳಿಗಳನ್ನು ನಡೆಸುತ್ತಿದ್ದರು.



ಒಂದು ದಿನ ಮಕ್ಕಾದ ನಗರದ ಮೂಲೆಯಲ್ಲಿ ರೌಡಿಗಳೆನಿಸಿಕೊಂಡ ಕೆಲವರು ಕುಳಿತು ಮಹಮ್ಮದರ ಚಿಂತನೆ, ಹೋರಾಟವನ್ನು ಚರ್ಚಿಸಿ ನಗುತ್ತಿದ್ದರು. ಆ ಸಂದರ್ಭದಲ್ಲಿ ಆ ಗುಂಪಿನ ಕಡೆಗೆ ಒಬ್ಬ ಬಡ ಕಾರ್ಮಿಕ ಬಂದ. "ಈ ನಗರದ ಆಗರ್ಭ ಶ್ರೀಮಂತ ಅಬೂಜಹಲ್ ನನಗೆ ಹಣವನ್ನು ಕೊಡುವುದಕ್ಕಿದೆ. ಕೇಳಿದರೆ ಬೆದರಿಸುತ್ತಾನೆ. ದಯವಿಟ್ಟು ಅದನ್ನು ವಸೂಲಿ ಮಾಡಿ ಕೊಡಿ" ಎಂದು ಗೋಗರೆಯ ತೊಡಗಿದ. ಅಲ್ಲಿದ್ದವರೆಲ್ಲ ಬಲಿಷ್ಠರು. ಶಕ್ತಿವಂತರು. ಗಣ್ಯರೂ ಅವರ ನಡುವೆ ಇದ್ದರು. ಆದರೆ ಅವರ್‍ಯಾರಿಗೂ ಈ ಕಾರ್ಮಿಕನಿಗಾಗಿ ಅಬೂಜಹಲ್‌ನೊಂದಿಗೆ ನಿಷ್ಠುರ ಕಟ್ಟಿಕೊಳ್ಳುವ ಇರಾದೆಯಿರಲಿಲ್ಲ. ಇನ್ನೇನು ಆತನನ್ನು ಗದರಿಸಿ ಓಡಿಸಬೇಕು ಎನ್ನುವಷ್ಟರಲ್ಲಿ ಒಬ್ಬನಿಗೆ ಏನನ್ನಿಸಿತೋ "ನೋಡು, ಓ ದೂರದಲ್ಲಿ ಒಬ್ಬ ಏಕಾಂಗಿಯಾಗಿ ಕುಳಿತಿದ್ದಾನಲ್ಲ, ಅವನ ಬಳಿಗೆ ಹೋಗು. ಅವನು ಖಂಡಿತವಾಗಿಯೂ ನಿನ್ನ ಹಣವನ್ನು ಅಬೂಜಹಲ್‌ನಿಂದ ವಸೂಲಿ ಮಾಡಿ ಕೊಡುತ್ತಾನೆ" ಎಂದು ಹೇಳಿದ. ಕೂಲಿ ಕಾರ್ಮಿಕ ಅದನ್ನು ನಂಬಿ ಆ ವ್ಯಕ್ತಿಯ ಕಡೆಗೆ ನಡೆದ. ಅಲ್ಲಿ ಮುಹಮ್ಮದರು ಏಕಾಂಗಿಯಾಗಿ ಕೂತಿದ್ದರು. ಕಾರ್ಮಿಕನನ್ನು ಮತ್ತು ಮಹಮ್ಮದರನ್ನು ಏಕಕಾಲದಲ್ಲಿ ತಮಾಷೆ ಮಾಡುವುದು ಅಲ್ಲಿ ಗುಂಪು ಕೂಡಿದ್ದವರ ಉದ್ದೇಶವಾಗಿತ್ತು. ಕಾರ್ಮಿಕ ಇವರ ಮಾತನ್ನು ನಂಬಿ ಮಹಮ್ಮದರ ಬಳಿಗೆ ಸಾರಿ, ತನ್ನ ಅಳಲನ್ನು ಹೇಳಿದ. ಕಾರ್ಮಿಕನ ಅಳಲನ್ನು ವಿವರವಾಗಿ ಆಲಿಸಿದ ಮುಹಮ್ಮದರು, ಎಲ್ಲರೂ ನೋಡುನೋಡುತ್ತಿದ್ದಂತೆಯೇ ಆತನ ಕೈ ಹಿಡಿದು ನೇರವಾಗಿ ಅಬೂಜಹಲನ ಮನೆಯ ಕಡೆಗೆ ನಡೆದರು. ಹೋದವರೇ ಅಬೂಜಹಲರ ಮನೆ ಬಾಗಿಲನ್ನು ತಟ್ಟಿದರು. ಆತ ಬಾಗಿಲು ತೆರೆದರೆ, ತನ್ನ ಮುಂದೆ ತಾನು ಹುಡುಕುತ್ತಿರುವ ಮುಹಮ್ಮದ್! ಜೊತೆಗೆ ತಾನು ಹಣ ನೀಡುವುದಕ್ಕೆ ಬಾಕಿಯಿಟ್ಟಿರುವ ಕಾರ್ಮಿಕ! ಮಹಮ್ಮದರು ಕಾರ್ಮಿಕನನ್ನು ತೋರಿಸಿ ಒಂದೇ ವಾಕ್ಯ ಹೇಳಿದರು "ಈತನಿಗೆ ನೀಡಬೇಕಾಗಿರುವ ಹಣವನ್ನು ಕೊಟ್ಟು ಬಿಡಿ". ಅಬೂಜಹಲ್ ಯಾವುದೋ ವಿಸ್ಮೃತಿಗೆ ತಳ್ಳಲ್ಪಟ್ಟವನಂತೆ ನೇರ ಒಳಹೋದವನೇ ಹಣವನ್ನು ತಂದು ಕಾರ್ಮಿಕನಿಗೆ ಒಪ್ಪಿಸಿದ. ಮಹಮ್ಮದ್ ಕಾರ್ಮಿಕನ ಜೊತೆಗೆ ಅಲ್ಲಿಂದ ವಾಪಸಾದರು. ಇವನ್ನೆಲ್ಲ ವಿಸ್ಮಿತರಾಗಿ ನೋಡುತ್ತಿದ್ದ ಮಕ್ಕಾ ನಗರದ ಪುಂಡರು ಅಬೂಜಹಲ್‌ನನ್ನು ತರಾಟೆಗೆ ತೆಗೆದುಕೊಂಡರು. ಆಗ ಅಬೂಜಹಲ್ ನುಡಿದನಂತೆ "ಮಹಮ್ಮದರ ಎರಡು ಭುಜಗಳಲ್ಲಿ ನಾನು ಎರಡು ಸಿಂಹಗಳು ಘರ್ಜಿಸುತ್ತಿರುವುದನ್ನು ನೋಡಿದೆ"

ಮಹಮ್ಮದರ ಭುಜಗಳಲ್ಲಿ ಎರಡು ಸಿಂಹಗಳು ಗರ್ಜಿಸುತ್ತಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಮಹಮ್ಮದರು ಒಬ್ಬ ಅನಕ್ಷರಸ್ಥರು. ಅನಾಥರು. ದೈಹಿಕವಾಗಿ ದುರ್ಬಲರು. ಬಡವರು. ಎಲ್ಲಕ್ಕಿಂತ ಮುಖ್ಯವಾಗಿ ಅವರು ಏಕಾಂಗಿ. ಆದರೆ ಮಹಮ್ಮದರ ಪ್ರಾಮಾಣಿಕತೆ, ನಿಷ್ಠುರತೆ,



ನ್ಯಾಯಪರತೆಗೆ ಅವನು ಹೆದರಿದ. ಒಬ್ಬ ಮನುಷ್ಯನೊಳಗಿರುವ ನೈತಿಕ ಶಕ್ತಿಯೇ ಆತನ ನಿಜವಾದ ಬಲ ಎನ್ನುವುದನ್ನು ಆ ಕತೆಯಿಂದ ಅರಿತುಕೊಳ್ಳುತ್ತಾ ಹೋದೆ. ಯಾವಾಗ ಗಾಂಧೀಜಿಯ ಬದುಕು ಮತ್ತು ಹೋರಾಟವನ್ನು ನಾನು ಓದತೊಡಗಿದೆನೋ, ಮೇಲಿನ ಕತೆ ತನ್ನ ಒಳ ತಿಳಿವನ್ನು ಇನ್ನಷ್ಟು ಇನ್ನಷ್ಟು ಬಿಟ್ಟುಕೊಡತೊಡಗಿತು. ತನ್ನೆಲ್ಲ ಸೋಗಲಾಡಿತನಗಳ ಮೂಲಕ ಬದುಕುವ ಮನುಷ್ಯ ತನ್ನ ದೌರ್ಬಲ್ಯಗಳನ್ನು ಖಾಕಿಯ ಮೂಲಕ, ಹಣದ ಮೂಲಕ, ದೈಹಿಕ ಬಲದ ಮೂಲಕ, ಹಿಂಬಾಲಕರ ಮೂಲಕ, ಪುರೋಹಿತಶಾಹಿ ವ್ಯವಸ್ಥೆಯ ಮೂಲಕ ರಕ್ಷಿಸಿಕೊಳ್ಳಲು ಯತ್ನಿಸುತ್ತಾನೆ. ಅನೇಕ ಸಂದರ್ಭಗಳಲ್ಲಿ ಆತ ತನ್ನ ಪಾಂಡಿತ್ಯ, ವಿದ್ವತ್ತುಗಳ ಮೂಲಕವೂ ಬಚ್ಚಿಟ್ಟುಕೊಳ್ಳಲು ಯತ್ನಿಸುತ್ತಾನೆ. ಆದರೆ ಮೂಲತಃ ಅವನು ಪ್ರಾಮಾಣಿಕ, ನ್ಯಾಯನಿಷ್ಠುರ ಮನುಷ್ಯನಿಗೆ ಒಳಗೊಳಗೆ ಅಂಜುತ್ತಾ ಬದುಕುತ್ತಾನೆ. ಇಲ್ಲವಾದರೆ, ಒಬ್ಬ ಫಕೀರ, ವೃದ್ಧ, ನಿಶ್ಶಸ್ತ್ರ ಮನುಷ್ಯನನ್ನು ಗೋಡ್ಸೆಯಂತಹ ವ್ಯಕ್ತಿಗೆ ಗುಂಡು ಹಾಕಿ ಕೊಲ್ಲುವ ಅಗತ್ಯವೇ ಬೀಳುತ್ತಿರಲಿಲ್ಲ. ಇದೇ ಸಂದರ್ಭದಲ್ಲಿ ನೆಹರೂನ ಮಾತಿನ ಲಾಲಿತ್ಯ ವಲ್ಲಭಬಾಯಿ ಪಟೇಲರ ಶಕ್ತಿ, ಬಾಲಗಂಗಾಧರ ತಿಲ[ಕ] ವಾಕ್‌ವೈಭವ ಎಲ್ಲವನ್ನೂ ಗಾಂಧಿ ಮೀರಿದ್ದು ತ[...] ನ್ಯಾಯನಿಷ್ಠುರವಾದ ವ್ಯಕ್ತಿತ್ವದ ಮೂಲಕ. ತನ್ನ ಸರಳತೆ[...] ಮೂಲಕ.

ರಾಜ್ಯದಲ್ಲಿ ಲಂಕೇಶರ ವಿದ್ವತ್‌ಭರಿತ ವ್ಯಕ್ತಿತ್ವವ[...] ಮೀರಿ ಗೌರಿ ಲಂಕೇಶ್ ಬೆಳೆದು, ನಾಡನ್ನು ಆವರಿಸಿ[...] ಇದೇ ನೈತಿಕಶಕ್ತಿಯಿಂದ ಎನ್ನುವುದನ್ನು ನಾವು ನೆನಪಿಸಿಕೊ[...] ಬೇಕಾಗಿದೆ. ಗೌರಿ ಆಳದಲ್ಲಿ ಒಂಟಿಯಾಗಿದ್ದವರು. ದೈಹಿ[...] ವಾಗಿ ದುರ್ಬಲರಾಗಿದ್ದರು. ಒಳ್ಳೆಯ ಭಾಷಣಕಾರ್ತಿಯಂತ[...] ಆಗಿರಲೇ ಇಲ್ಲ. ಹಾಗೆಯೇ ವಿದ್ವತ್‌ಪೂರ್ಣ[...] ಬರಹಗಾರ್ತಿಯೂ ಅವರಲ್ಲ. ಆದರೆ ನಡುಬೀದಿಯ[...] ಅಮಾಯಕನೊಬ್ಬ ಬರ್ಬರವಾಗಿ ಹಲ್ಲೆಗೀಡಾಗುತ್ತಿರುವ[...] ಅವನು ನಮ್ಮಿಂದ ನಿರೀಕ್ಷಿಸುವುದು ಪುಟಗಟ್ಟಲೆ ಭಾಷಣವನ್ನ[...] ವಿದ್ವತ್ತನ್ನಲ್ಲ ಎನ್ನುವುದು ಗೌರಿಗೆ ಗೊತ್ತಿತ್ತು. 'ನಿಲ್ಲಿಸಿ' ಎನ್ನು[...] ಒಂದೇ ಒಂದು ಶಬ್ದ ನಮ್ಮ ಬಾಯಿಯಿಂದ ಮೊಳಗಿ[...] ಅಥವಾ ನಮ್ಮ ಲೇಖನಿಯಿಂದ ಉದುರಿದರೆ ಅದು[...] ವರ್ತಮಾನ ಆಲಿಸುತ್ತದೆ. ತಿರಸ್ಕರಿಸುತ್ತದೆ ಅಥವಾ [...] ಪದವನ್ನು ಗಂಭೀರವಾಗಿ ಚರ್ಚಿಸುತ್ತದೆ. "ನಿಲ್ಲಿಸಿ" ಅಥ[...]

ವಜ್ರಕಠೋರ ಮೃದು ಕುಸುಮ

ಲೋಕದ ನಿಯಮ ಮತ್ತು ನಂಬಿಕೆಗಳ ಪ್ರಕಾರ ನಾವಿಬ್ಬರೂ ಗೆಳತಿಯರಾಗುವುದು ಕಷ್ಟವಿತ್ತು, ಅನೇಕ ವಿಷಯಗಳಲ್ಲಿ ನಮ್ಮಿಬ್ಬರಲ್ಲಿ ಭೂಮ್ಯಾಕಾಶಗಳ ವ್ಯತ್ಯಾಸವಿತ್ತು, ಆದರೂ ನಾವು ಅಂತರಂಗದ ಗೆಳತಿಯರಾದೆವು. ಪರಸ್ಪರರ ಬಗೆಗಿನ ಪ್ರೀತಿ ಮತ್ತು ಕಾಳಜಿಗಳು ನಮ್ಮ ದೃಷ್ಟಿ ಕೋನ ಮತ್ತು ಧೋರಣೆಗಳಾಚೆಗೆ ಬೆಳೆದು ಏನನ್ನು ಬೇಕಾದರೂ ಇವಳಲ್ಲಿ ಹೇಳಿಕೊಳ್ಳಬಹುದು ಎನ್ನುವ ನಂಬಿಕೆಯೊಂದು ನಮ್ಮಿಬ್ಬರನ್ನು ಬಂಧಿಸಿತ್ತು.

ಇಂಥದೊಂದು ಘಟಿಸಬಹುದು ಎನ್ನುವ ಅಸ್ಪಷ್ಟ ಭಯ ಅವಳ ಎಲ್ಲ ಗೆಳೆಯ-ಗೆಳತಿಯರಲ್ಲೂ ಇತ್ತು, ಆದರೆ ಭಯ ವಾಸ್ತವವಾಗುವುದು ಇಷ್ಟು ಭೀಕರವಾಗಿರಬಹುದು ಎನ್ನುವುದು ಮಾತ್ರ ನಮ್ಮೆಲ್ಲರ ಕಲ್ಪನೆಯ ಆಚೆಗಿನದಾಗಿತ್ತು, ಈಗಲೂ ಇಂಥದ್ದೊಂದು ಘಟಿಸಿರುವುದು ನಮ್ಮ ಭ್ರಮೆ ಮಾತ್ರವಾಗಿರಲಿ ಎಂದು ಅಸಹಾಯಕ ಮನಸ್ಸು ಆರ್ತವಾಗಿಬೇಡುತ್ತದೆ. ಅಭಿಪ್ರಾಯಭೇದ ಇಷ್ಟು ದುಬಾರಿಯಾಗಿ, ಜೀವ ಇಷ್ಟು ಅಗ್ಗವಾಗಿಬಿಟ್ಟದ್ದು ಯಾವಾಗಿನಿಂದ?

ಪ್ರಜ್ಞಾವಂತ ಸಮುದಾಯವೊಂದು ಇರಬೇಕಾದ ರೀತಿನೀತಿಗಳನ್ನು, ಅದು ಎದುರಿಸುತ್ತಿರುವ ಸವಾಲುಗಳನ್ನು, ಅದಕ್ಕಿರುವ ಅಡ್ಡಿಆತಂಕಗಳನ್ನು, ಅದರಿಂದಾಗಿ ಸೃಷ್ಟಿಯಾಗುತ್ತಿರುವ ತಲ್ಲಣಗಳನ್ನು 'ನಾಲ್ಕನೆಯಸ್ತಂಭ'ವೊಂದು ಚರ್ಚಿಸುವುದು ಜೀವ ತೆಗೆಯುವಂತಹ ಅಪರಾಧವೆ? ಯಾರು ಒಪ್ಪಿಯಾರು ಇದನ್ನು? ಅವಳ ಸೆಕ್ಯುಲರ್ ನಿಲುವುಗಳನ್ನು, ಜನಪರಕಾಳಜಿಗಳನ್ನು, ಸಾಮಾಜಿಕ ಬದ್ಧತೆಯನ್ನು ನೋಡಿದಾಗಲೆಲ್ಲ ಮನಸ್ಸು ಹೆಮ್ಮೆಯಿಂದ ಉಬ್ಬುತ್ತಿತ್ತು, ಕೃತಜ್ಞತೆಯಿಂದ ಮೂಕವಾಗುತ್ತಿತ್ತು, ಕೆಲವೊಮ್ಮೆ ನನ್ನ ಭಿನ್ನಾಭಿಪ್ರಾಯಗಳನ್ನು ಹೇಳಲು ಹೋದಕೂಡಲೇ, 'ಏ ಮಾರಾಗಿತ್ತಿ ನಿನಗೇನು ಗೊತ್ತು ಏನೇನಾಗ್ತಾ ಇದೆ ಅಂತ? ಇಂಥ ಭಾಷೆ, ಶೈಲಿಬೇಡ ಅಂತೀಯಾ ನೀನು, ನಿನ್ನ ಸಾಹಿತ್ಯದ ಭಾಷೆ ಇಲ್ಲಿ ನಡೆಯೋಲ್ಲ, ಅವರ ಭಾಷೆಯಲ್ಲೇ ನಾವು ಉತ್ತರಕೊಡಬೇಕು' ಎಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದಳು.

ಈ ಭಿನ್ನಾಭಿಪ್ರಾಯಗಳು ಏನೇ ಇರಲಿ, ಗೌರಿ ನಾನು



ನನ್ನ ಜೀವನದಲ್ಲಿ ನೋಡಿದ ಅತ್ಯಂತ ನಿಸ್ವಾರ್ಥ ವ್ಯಕ್ತಿಯಾಗಿದ್ದಳು. ಅವಳ ನಡೆಯನ್ನು ನಾವು ಒಪ್ಪದೇ ಇರಬಹುದಿತ್ತು, ಅವಳ ಪ್ರಾಮಾಣಿಕತೆ, ಬದ್ಧತೆಯನ್ನು ಯಾರೂ ಎಂದೂ ಪ್ರಶ್ನಿಸಲು ಸಾಧ್ಯವಿರಲಿಲ್ಲ ಎನ್ನುವುದೇ ನಾಡಿನಾದ್ಯಂತ ಅವಳಿಗೆ ಸಿಕ್ಕ ಬಹುದೊಡ್ಡ ವಿಶ್ವಾಸಾರ್ಹತೆಯಾಗಿತ್ತು. ಅವಳನ್ನು ಕಡೆಯ ಬಾರಿ ನೋಡಲೆಂದು ಜನ ಅದೆಲ್ಲಿಲ್ಲಿಂದ ಬಂದಿದ್ದರು? ಸಿಕ್ಕ ಲಾರಿ, ಬಸ್ಸುಗಳನ್ನು ಹತ್ತಿಕೊಂಡು, ಸುರಿಯುತ್ತಿರುವ ಮಳೆಯನ್ನೂ ಲೆಕ್ಕಿಸದೆ ಸರತಿಯಲ್ಲಿ ನಿಂತು ಅವಳಿಗೆ ಗೌರವ ಸಲ್ಲಿಸಿದ ಪರಿಯೇ ಇದಕ್ಕಿರುವ ಆಧಾರ. ಜನಪರವಾದ ಯಾವ ವಿಚಾರಗಳನ್ನು, ಸಮಸ್ಯೆಗಳನ್ನು ಚರ್ಚಿಸಲೂ ಅವಳು ಸದಾ ತೆರೆದ ಕಿವಿಯಾಗಿರುತ್ತಿದ್ದಳು. ತಕ್ಷಣವೇ ಕಾರ್ಯೋನ್ಮುಖಳೂ ಆಗುತ್ತಿದ್ದಳು. ಸಾಹಿತ್ಯ, ಲೇಖಕ ಲೇಖಕಿಯರ ವಿವಾದಗಳು ಎದುರಾದ ಕೂಡಲೇ ಬರುತ್ತಿತ್ತು ಫೋನ್, 'ಏನಮ್ಮ ಏನನ್ನುತ್ತೆ ನಿನ್ನ ಸಾಹಿತ್ಯಲೋಕ?' ಅವಳ ಇಂಗ್ಲಿಷ್ ಕಾಲಮ್ಮಿಗೆ ಬರೆಯುವಾಗ ಯಾವುದಾದರೂ ಕವಿತೆ, ಕಾದಂಬರಿಯನ್ನಿಟ್ಟು ಕೋಟ್ಮಾಡುವುದಿದ್ದರೆ, ಸರಿಯಾಗಿ ಹೇಳು ಒಂದ್ಸಲ ಅಂತ ಕೇಳಿ ಸ್ಪಷ್ಟಪಡಿಸಿಕೊಂಡೇ ಅವಳು ಮುಂದುವರಿಯುತ್ತಿದ್ದದ್ದು.

ಇಂದಿರಮ್ಮನವರ ಆತ್ಮಕಥೆಯ ಸಂದರ್ಭದಲ್ಲಿ, 'ಅಮ್ಮ ಹೇಳುತ್ತೆ, ಬರೆಯೋದಿದ್ರೆ ನೀನೆ ಬರೀಬೇಕಂತೆ ಮುನ್ನುಡೀನಾ' ಅಂತ ಹೇಳಿ ಬರೆದಾದ ಮೇಲೆ, ನಮ್ಮಮ್ಮನ್ನ ಅದೆಷ್ಟು ಚೆನ್ನಾಗಿ ಅರ್ಥಮಾಡ್ಕೊಂಡು ಬರೆದಿದ್ದೀಯಾ, **Now I declare you are a real feminist thinker** ಅಂತ ತಮಾಷೆ ಮಾಡಿದ್ದು ಇನ್ನೂ ನನ್ನ ಕಿವಿಯಲ್ಲಿದೆ.

ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿ ಆಯ್ಕೆಯಾಗಿತ್ತು, ಜಾತಿಯೊಂದರ ಅವಹೇಳನೆ ಅಲ್ಲಿದೆ ಎನ್ನುವ ಕಾರಣಕ್ಕೆ ಆ ಪಠ್ಯವನ್ನು ಹಿಂತೆಗೆಸಬೇಕು ಎನ್ನುವ ಹೋರಾಟಗಳು ಪ್ರಬಲವಾಗಹತ್ತಿದವು. ಗೌರಿಗೆ ಫೋನ್ಮಾಡಿದೆ. ಸರಿ, ಅದರ ಬಗ್ಗೆ ನೀನೂ ಬರಿ, ಬೇರೆಯವರ ಕೈಯಲ್ಲೂ ಬರೆಸು, ನಾನೂ ಒಂದು ವರದಿಕೊಡೋಕೆ ಅಲ್ಲಿನವರಿಗೆ ಹೇಳ್ತೀನಿ ಅಂದಳು. ನನ್ನ ನೆನಪು ಸರಿಯಾಗಿದ್ದರೆ, ಒಂದೇದಿನದಲ್ಲಿ ಎಲ್ಲ ವರದಿಗಳೂ ಸಿದ್ಧವಾಗಿ ಮುಂದಿನ ವಾರದಲ್ಲಿಯೇ ಅದೆಲ್ಲ ಪ್ರಕಟವಾಯಿತು.

ಅವಳಿಗೆ ಅಂತ ಅವಳು ಎಂದಾದರೂ ಏನ[...] ಬಯಸಿದ್ದೂ ನನಗೆ ನೆನಪಿಲ್ಲ, ಮನೆಯೆ? ಆಸ್ತಿಪಾಸ್ತಿಯ[...] ಒಡವೆಯೆ? ಇದುಯಾವುದೂ ಅವಳ ಆದ್ಯತೆಯಲ್ಲ, ಅ[...] ಪಟ್ಟಿಯಲ್ಲೇ ಇರಲಿಲ್ಲ.

ಗೌರಿಯನ್ನು ನೆನೆದಾಗಲೆಲ್ಲ ಕಠೋರಾನಿ ವಜ್ರಾದ[...] ಮೃದೂನಿ ಕುಸುಮಾದಪಿ ಎನ್ನುವ ಮಾತುನೆನಪಾಗುತ್ತ[...] (ಅವಳಿದ್ದರೆ ಹೇಳುತ್ತಿದ್ದಳು, ಅಮ್ಮಾ ತಾಯಿ, ಇದನ್ನ [...] ಕನ್ನಡದಲ್ಲಿ ಹೇಳು ಅಂತ) ಅವಳ ರಾಜಕೀಯ, ಸಾಮಾ[...] ಸಂದರ್ಭಗಳಲ್ಲಿ ಅವಳು ಎಷ್ಟು ಕಟುವಾ[...] ದೃಢವಾಗಿರುತ್ತಿದ್ದಳೋ ವ್ಯಕ್ತಿಗತವಾಗಿ ಅವಳು ಮೃದುವೆಂ[...] ಮೃದು.

ಒಂದು ದಿನ ಮೈಸೂರಿನಿಂದ ಅವಳ ಫೋನ್, 'ನಿ[...] ಯಾವ ಬಣ್ಣ ಇಷ್ಟ ಮಾರಾಗಿತ್ತಿ?' ಯಾಕೆ ಅಂದ[...] 'ನಾನೇನು ನಿನ್ನ ಥರ ಸೀರೆ ಎಕ್ಸ್‌ಪರ್ಟ್ ಅಲ್ಲ, [...] ಸಮಾವೇಶದಲ್ಲಿ ಇಳಕಲ್ ಸೀರೆ ಇದೆ, ನಿನಗೊಂ[...] ತೊಗೋಬೇಕು ಅದಕ್ಕೆ' ಅಂದಳು. ಸೀರೆ ತಂದ ಮೇ[...] ನೋಡಿದರೆ, ಅದು ಇಳಕಲ್ ಸೀರೆಯೇ ಅಲ್ಲ, ಯಾರ[...] ಅವಳಿಗೆ ಸರಿಯಾಗಿ ಟೋಪಿ ಹಾಕಿದ್ದರು. ನೋ[...] ಎಂತೆಂತಹವರಿರುತ್ತಾರೆ ಅಂದು ಜೋರಾಗಿ ನಕ್ಕ[...] ಹೋಗಲಿ ಬಿಡು, ನನ್ನಂತಹವರಿರೋದರಿಂದಲೇ ಅವರಿ[...] ವ್ಯಾಪಾರ ಅಲ್ವಾ ಅಂದು, ನಿನಗೆ ಇಷ್ಟವಾಗದಿ[...] ಯಾರಿಗಾದರೂ ಕೊಟ್ಟುಬಿಡೋಣ ಅಂದಾಗ, ಬೆ[...] ಗ್ರೇಟ್ ಗೌರಿ ಕೊಟ್ಟದ್ದು ಇರಲಿ ಎಂದಿದ್ದೆ. ಮತ್ತೊ[...] ಇಳಕಲ್‌ಗೇ ಹೋಗಿದ್ದಾಗ, ಮರೆಯದೇ ಒರಿಜಿನ[...] ಇಳಕಲ್ ತಂದುಕೊಟ್ಟು 'ಈಗ ಸಮಾಧಾನ ಆಯ[...] ನನಗೆ ಅಂದಿದ್ದಳು.

ನನ್ನ ಚಿಕ್ಕಮ್ಮನ ಮಗಳ ಮದುವೆ, ಅವಳ ಆಫೀ[...] ಹತ್ತಿರದಲ್ಲೇ. ಅವಳಿಗೆ ಹೇಳಿದೆ, ನಿನ್ನ ಆಫೀಸ್ನವರ[...] ಅಲ್ಲಿಗೇ ಊಟಕ್ಕೆ ಕರೆದುಕೊಂಡು ಬಂದುಬಿಡು. [...] ಸುಮ್ನಿರು ಮರಿ,' ಅಂದರೂ, ಸರಿಬಿಡು, ನಿನ್ನ ಮನೆ[...] ಎಲ್ಲರೂ ಧಾಳಿ ಮಾಡ್ತೀವಿ, ಎರಡು ಘಂಟೆಗೆ ಅಂದವ[...] ಎಲ್ಲರನ್ನೂ ಕರೆದುಕೊಂಡು ಬಂದಳು. ಬಂ[...] ಕೇಳಿದವರಿಗೆಲ್ಲ ಫ್ರೋಟೋಗೆ ಪೋಸು ಕೊಡುತ್ತಾ ತಮಾ[...] ಮಾಡುತ್ತಾ ಕಾಲಕಳೆದಳು. ನಾವೆಲ್ಲಾ ಮದುವೆಯಂ[...] ಪ್ರೋಗ್ರಾಮ್‌ಗಳಿಗೆ ಹೋಗುವುದೇ ಕಡಿಮೆ, ಎಲ್ಲ[...] ಹೊಟ್ಟೆ ತುಂಬಾ ಸಂಕೋಚ ಇಲ್ಲದೇ ಊಟ ಮಾಡ[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail...

"ಬೇಡ" ಎನ್ನುವುದು ಇಂದಿನ ದಿನಗಳಲ್ಲಿ ಒಂದು ಪದ ಅಥವಾ ಒಂದು ವಾಕ್ಯ ಮಾತ್ರವಲ್ಲ, ಅದೊಂದು ಪೂರ್ಣ ಲೇಖನವೂ ಕೂಡ. ಇಂಗ್ಲಿಷ್ ಪತ್ರಿಕೋದ್ಯಮದಿಂದ ಬಂದ ಗೌರಿಗೆ ಕನ್ನಡದಲ್ಲಿ ವಿದ್ವತ್‌ಪೂರ್ಣವಾಗಿ ಬರೆಯಲು ಸಾಧ್ಯವಿರಲಿಲ್ಲ. ಅವರು , ಕನ್ನಡದಲ್ಲಿ ತಡವರಿಸುತ್ತಾ ಮಾತನಾಡಿದರು. ಅಕ್ಷರಕ್ಷರಗಳನ್ನು ಕೂಡಿಸಿ ಬರೆದರು. 'ಕನ್ನಡವೇ ಸರಿಯಾಗಿ ತಿಳಿಯದ ಈಕೆ ಲಂಕೇಶರ ಪತ್ರಿಕೆಯನ್ನು ಹೇಗೆ ಮುಂದುವರಿಸಿಯಾಳು?' ಎಂಬ ಪ್ರಶ್ನೆಗಳಿಗೆ ತನ್ನ ಸರಳ ಆದರೆ ಅಷ್ಟೇ ನಿಷ್ಠುರವಾದ ವ್ಯಕ್ತಿತ್ವದ ಮೂಲಕ ಉತ್ತರಿಸಿದರು. ಅವರು ಸಾಹಿತ್ಯದ ಭಾಷೆಯಲ್ಲಿ ಮಾತನಾಡದೆ, ಜನಸಾಮಾನ್ಯರ ಸರಳ ಕನ್ನಡದಲ್ಲಿ ಮಾತನಾಡಿದರು. ಗೌರಿಯ ಸರಳ ಕನ್ನಡ ಕಾಲದ ಅಗತ್ಯವಾಗಿತ್ತು. ಹನ್ನೆರಡನೇ ಶತಮಾನದಲ್ಲಿ ವಚನಕಾರರು ಬಳಸಿದ ಪಾಂಡಿತ್ಯರಹಿತ ಸರಳ ಕನ್ನಡ ಅದು. ಇಂದಿನ ಕಾಲದ ಬೇಡಿಕೆಯೇ ಸರಳ, ಸ್ಪಷ್ಟ ಮಾತುಗಳಾಗಿರುವಾಗ, ಗೌರಿಯ ಸರಳ ಭಾಷೆ ಅವರ ದೌರ್ಬಲ್ಯವಾಗದೆ, ಸಾಮರ್ಥ್ಯವಾಗಿ ಪರಿವರ್ತನೆಯಾಯಿತು. ಆಕೆಯ ಸರಳ ಮಾತು ಕಾಲದ ಬೇಡಿಕೆಯಾಗಿತ್ತು. ಲಿಂಗಾಯತ ಸಮುದಾಯದಿಂದ ಬಂದಿದ್ದರೂ ಅವರು ಆ ಗುರುತನ್ನು ನಿರಾಕರಿಸಿದ್ದರು. ಆದರೆ ಬಸವಣ್ಣನ ಆಶಯ ಅವರ ಹೋರಾಟಗಳ ಅಡಿಗಲ್ಲಾಗಿತ್ತು. ಲಿಂಗಾಯತ ಧರ್ಮವನ್ನು ಇಂದಿನ ಕೆಲ ಸ್ವಾಮೀಜಿಗಳಿಗಿಂತ ಹೆಚ್ಚು ತನ್ನದಾಗಿಸಿಕೊಂಡಿದ್ದರು. ರಾಜ್ಯದಲ್ಲಿ ಹರಡುತ್ತಿರುವ ಲಿಂಗಾಯತ ಚಳವಳಿಯ ಮಹತ್ವವನ್ನು ಮನಗಂಡಿದ್ದರು. ಆಕೆ ಬದುಕಿದ ರೀತಿ, ಆಕೆಯ ಅಸೀಮ ಧೈರ್ಯ, ಹೋರಾಟ ಮತ್ತು ಅಂತ್ಯ ಒಬ್ಬ ಶ್ರೇಷ್ಠ ಶರಣೆಗೆ ತಕ್ಕುದಾಗಿತ್ತು.

'ಲಂಕೇಶರ ಪತ್ರಿಕೆ ಈಗ ಆಕೆಯ ಮಗಳಂತೆ ಸೊರಗಿದೆ' ಕೆಲವರು ತೆರೆ ಮರೆಯಲ್ಲಿ ವ್ಯಂಗ್ಯವಾಡುತ್ತಿದ್ದರು. ಆದರೆ ಆ ಮಾತುಗಳಿಗೆ ತನ್ನ ಬದುಕು ಮತ್ತು ಮರಣದ ಮೂಲಕವೇ ಅವರು ಉತ್ತರಿಸಿದರು. ಈ ನಾಡಿನ ಪ್ರಮುಖ ಟ್ಯಾಬ್ಲಾಯಿಡ್ ಪತ್ರಿಕೆಯ ಸಂಪಾದಕರು ಗನ್ ಇಟ್ಟು ಓಡಾಡುತ್ತಿರುವಾಗ, ಈಕೆ ಯಾವ ಶಸ್ತ್ರಗಳ ರಕ್ಷಣೆ ಇಲ್ಲದೆಯೇ ಓಡಾಡಿದರು. ಗಾಂಧೀಜಿಗೋ ಅವರ 'ಮಹಾತ್ಮ'ನೆಂಬ ಪ್ರಭಾವಳಿ ರಕ್ಷಣೆಗಿತ್ತು. ಆದರೆ ಗೌರಿಯೆನ್ನುವ ಈ ತಾಯಿಗೆ ಅದೂ ಇದ್ದಿರಲಿಲ್ಲ. ಆದರೆ ಆಕೆ ಎಷ್ಟು ಶಕ್ತಿವಂತೆ ಎನ್ನುವುದು ಆಕೆಯನ್ನು ಕೊಂದವರಿಗೆ ಗೊತ್ತಿತ್ತು. ಅದಕ್ಕಾಗಿಯೇ ಅವರನ್ನು ಕೊಲ್ಲುವುದಕ್ಕಾಗಿ ಏಳು ಗುಂಡುಗಳನ್ನು ಅವರು ಬಳಸಬೇಕಾಯಿತು. ಆದರೂ ಆಕೆಯನ್ನು ಕೊಲ್ಲಲು ಸಾಧ್ಯವಾಗಲಿಲ್ಲ ಎನ್ನುವ ಅಂಶ ಕೊಲೆಗಾರರಿಗೆ ತಡವಾಗಿಯಾದರೂ



ಮನವರಿಕೆಯಾಗಿರಬಹುದು. ಯಾಕೆಂದರೆ, ಗೌರಿ ಸಾಯುವ ಮೊದಲು ಕರ್ನಾಟಕಕ್ಕಷ್ಟೇ ಸೀಮಿತವಾಗಿದ್ದರು. ಈಗ ನೋಡಿದರೆ ದೇಶಾದ್ಯಂತ ತನ್ನ ವ್ಯಕ್ತಿತ್ವವನ್ನು ವಿಸ್ತರಿಸಿಕೊಂಡು ವಿಕ್ರಮ ರೂಪತಾಳಿದ್ದಾರೆ. ಈ ದೇಶದ ಸೌಹಾರ್ದವನ್ನು ನಾಶ ಮಾಡುವ ಶಕ್ತಿಗಳಿಗೆ ಇನ್ನಷ್ಟು ಸವಾಲಾಗಿ ನಿಂತಿದ್ದಾರೆ.

■ ಬಿ.ಎಂ. ಬಷೀರ್

ಅಂತ ತನ್ನ ತನ್ನ ಬಳಗಕ್ಕೆ ತಾನೇ ಉಪಚಾರಮಾಡಿದಳು. ಕೆ.ಸಿ.ದಾಸ್ ಸಿಹಿ ಅಂದ್ರೆ ಅದೆಷ್ಟು ಇಷ್ಟ ಅವಳಿಗೆ, ಅದಿಲ್ಲದೇ ಅವಳನ್ನು ನಾನು ಭೇಟಿಯಾದದ್ದು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಸಲ. ಅವಳೇನು ಕಡಿಮೆಯೆ? ಒಮ್ಮೆ ಕವಿತಾ ಯಾವುದೋ ಕತೆಯ ಚರ್ಚೆಗೆಂದು ನನ್ನನ್ನು ಭೇಟಿ ಮಾಡಲು ಬಂದಾಗ, ಅವಳಿಗೆ ಇಷ್ಟ ತೊಗೊಂಡು ಹೋಗು ಅಂತ ನನಗೂ ಅವಳ ಹತ್ತಿರ ಸಿಹಿ ಕಳಿಸಿದ್ದಳು. ಅವಳ ಸಾಮಾಜಿಕ, ರಾಜಕೀಯ ನಿಲುವುಗಳು ಎಷ್ಟು ಕಠೋರವೋ ಅವಳ ವ್ಯಕ್ತಿಗತ ಸಂಬಂಧಗಳು ಅಷ್ಟೇ ಆಪ್ತವಾಗಿ, ಆರ್ದ್ರವಾಗಿ ಇರುತ್ತಿದ್ದವು.

ರಾತ್ರಿ ನನ್ನ ಸಮಯವಾದ ಮೇಲೆ ಏನಾದರೂ ಹೇಳುವುದಿದ್ದರೆ, ಅವಳ ಮೇಲ್ ಅಥವಾ ಮೆಸೇಜ್ ಇರುತ್ತಿತ್ತು, ಅದು ಶುರುವಾಗುತ್ತಿದ್ದುದ್ದು ಹೀಗೆ, 'ಹಾಯ್ ಸ್ಲೀಪಿಂಗ್ ಬ್ಯೂಟಿ. ನನ್ನ ದಿನಚರಿಯ ಬಗ್ಗೆ ಲೋಕಕ್ಕೆಲ್ಲಾ ಗೊತ್ತಾದದ್ದೇ ಇವಳು ಮತ್ತು ರಹಮತ್‌ರಿಂದ. ಎಲ್ಲರಿಗೂ ಅದೊಂದು ನನ್ನನ್ನು ಪ್ರೀತಿಯಿಂದ ಗೇಲಿ ಮಾಡಲು ವಸ್ತುವಾಗಿದ್ದರ ಅದಕ್ಕೆ ಈ ಮಾರಾಯ್ತಿಯೇ ಕಾರಣ.

ಒಂದೆ? ಎರಡೆ? ನೂರಾರು ನೆನಪುಗಳು ನುಗ್ಗಿಬರುತ್ತಿವೆ. ಕೊನೆಯ ಬಾರಿ ಭೇಟಿಯಾದಾಗ, ಊಟ ಮಾಡುತ್ತಿದ್ದಳು, ಯಾರೋ ಕಾಕ್ರಾ ತಂದು ಕೊಟ್ಟಿದ್ದರು ಅವಳಿಗೆ. ಊಟ ಮುಗಿದದ್ದೇ ಕೆಲವನ್ನ ತೆಗೆದು, ತೊಗೋ ಚದುಗೆ ಕೊಡು ಅಂತ ಒಂದಷ್ಟನ್ನ ಕೊಟ್ಟಳು, 'ನಾವು ಶಿಸ್ತಾಗಿ ಊಟ ಮಾಡ್ತೀವಿ ಮೇಡಮ್ನೋರೆ, ತಾವಿಟ್ಟುಕೊಳ್ಳಿ ಅಂದ್ರೆ, ಏ ಅವನಿಗೆ ಇಷ್ಟ ತೊಗೊಂಡು ಹೋಗು' ಎಂದಳು.

ಅವಳ ತಾತ್ವಿಕ ನಿಲುವುಗಳ ಬಗ್ಗೆ, ಹೋರಾಟದ ಬಗ್ಗೆ ಬರೆಯಬಹುದಿತ್ತು. ಅದನ್ನು ಎಲ್ಲರೂ ಮಾಡಿರುತ್ತಾರೆ. ನನ್ನೊಳಗೆ ಸದಾ ಉಳಿಯುವ ಗೌರಿಯ ಪ್ರೀತಿಯ ಈ ನೆನಪುಗಳನ್ನು ಹಂಚಿಕೊಳ್ಳುವುದು ಅವಳ ವ್ಯಕ್ತಿತ್ವದ ಮೂಲಗುಣವನ್ನು ಹೇಳುತ್ತದೆ ಅನ್ನಿಸಿತು. ತೀರಾ ವೈಯಕ್ತಿಕ ಎನ್ನಿಸಿದರೆ ಕ್ಷಮಿಸಿ.

ಇನ್ನೊಂದು ಮಾತು, ನಾನು ಅವಳ ಎರಡು ಸಾಲಗಳನ್ನು ಬಾಕಿ ಉಳಿಸಿಕೊಂಡಿರುವೆ. ಒಂದನೆಯದು, 'ಲಂಕೇಶ್ - ಒಂದು ಸಾಂಸತಿಕ ಸಂಕಥನ' ಎಂಬ ಕೃತಿ ರೂಪಿಸಲು ನಾನು ಬೇರೆ ಬೇರೆಯವರಿಂದ ಲೇಖನಗಳನ್ನು ಬರೆಸಿ ಸಂಪಾದಿಸುವುದು. ಎರಡನೆಯದು, ಪಿ.ಲಂಕೇಶ್ ಅವರು ಸಂಪಾದಿಸುತ್ತಿದ್ದ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಿವಿಧ ಲೇಖಕರ, ಕಲಾವಿದರ ಸಂದರ್ಶನಗಳನ್ನು ಸಂಪಾದಿಸುವುದು. ಈಗಾಗಲೇ ಸ್ಪಷ್ಟಪಡಿಸಿರುವಂತೆ, ಇವೆರಡೂ ಸಾಲಗಳು, ತೀರಿಸಿಯೇ ತೀರುತ್ತೇನೆ.



■ ಎಂ.ಎಸ್. ಆಶಾದೇವಿ

ನಾನು-ನಿಮ್ಮವ್ವ...



ಕರ್ನಾಟಕದ ಈವರೆಗಿನ ಸಾಂಸ್ಕೃತಿಕ ಇತಿಹಾಸದಲ್ಲಿ ಗೌರಿಯಂತಹ ಹೆಣ್ಣುಮಗಳು ಬಂದುಹೋದ ದಾಖಲೆಯಿಲ್ಲ. ನನ್ನ ಈ ಅಭಿಪ್ರಾಯಕ್ಕೆ ಗೌರಿಯೊಡನೆ ಇದ್ದ ಈ ಹದಿನೆಂಟು ವರ್ಷದ ಒಡನಾಟವೇ ಕಾರಣ.



ಲಂಕೇಶ್‌ರ ಹಠಾತ್ ನಿರ್ಗಮನದ ನಂತರ ಮುಂದೇನು ಎಂಬ ಬೃಹದಾಕಾರದ ಪ್ರಶ್ನೆ ಒಂದೆರಡು ದಿನಗಳಲ್ಲೇ ಬಗೆಹರಿದಿತ್ತು. ದೆಹಲಿಯಿಂದ ಬಂದ ಗೌರಿ ಲಂಕೇಶರ ಜವಾಬ್ದಾರಿ ಹೊತ್ತುಕೊಂಡಳು. ಆಗ ಅವಳೊಡನೆ ಮಾತನಾಡಲು ಹಿಂಜರಿಯುತ್ತಿದ್ದ ನನಗೆ, ಲಂಕೇಶರ ಮಾತೊಂದು ನೆನಪಿಗೆ ಬಂದಿತ್ತು. ಅದು ನಮ್ಮ ಹಳ್ಳಿಯ ವರ್ತನೆ ಮತ್ತು ಮಾತು ಯಾವ ಸಂಕೋಚ ಕೀಳರಿಮೆಯಿಲ್ಲದೆ ನಮ್ಮ ಒಗರು ಭಾಷೆಯಲ್ಲಿ ಮಾತನಾಡಿದರೆ ಸಾಕು ಎಂದಿದ್ದರು.

ಅದಾಗಲೇ ಗೌರಿ ನನ್ನ ಕಾಲಂ ಓದಿದ್ದರೊ ಇಲ್ಲವೊ ಅಂತೂ ನನ್ನನ್ನು ವಿಶೇಷವಾಗಿ ಪರಿಗಣಿಸಿದ್ದಳು. ಜೊತೆಗೆ ಸಲುಗೆಯಿಂದ ಮಾತನಾಡಿಸುತ್ತಿದ್ದಳು. ಆದರೂ ಅಂದು ಪತ್ರಿಕೆಯ ನೆಲೆ ಹೇಗಿತ್ತೆಂದರೆ ಈಜು ಬರದವನು ಹೊಳೆಗೆ ಬಿದ್ದಂತಾಗಿತ್ತು. ಆದರೂ ತನ್ನ ಶಕ್ತಿ ಸಾಮರ್ಥ್ಯದಿಂದ ಕೈಕಾಲು ಆಡಿಸಿ ಬದುಕಿಕೊಂಡ ಜೀವಿಯಂತೆ ಗೌರಿ ಪತ್ರಿಕೆ ಮೇಲಿನ ಹಿಡಿತ ಸಾಧಿಸಿದಳು. ಆಕೆಯ ಮುಲಾಜಿಲ್ಲದ ಗುಣಕ್ಕೆ ಬೆಚ್ಚಿದ ಕೆಲವರು ಹಿಂದೆ ಸರಿದರು. ಲಂಕೇಶರು ಪತ್ರಿಕೆಗೆ ಹಾಕಿದ ಸಾಹಿತ್ಯ ಮತ್ತು ರಾಜಕಾರಣದ ಭಲವಾದ ಬುನಾದಿ ಕಿತ್ತು ಬಿಸಾಡಿದ ಗೌರಿ ತನ್ನದೇ ಮಾರ್ಗದ ಪತ್ರಿಕೆ ಮಾಡಿಕೊಂಡಳು. ಈ ಅವಧಿಯಲ್ಲೊಮ್ಮೆ ಫೋನ್ ಬಂತು. ಲ್ಯಾಂಡ್ ಫೋನಾದ್ದರಿಂದ, "ಯಾರು?", ಎಂದೆ. "ನಾನು ನಿಮ್ಮವ್ವ" ಎಂದಳು. ಈ ಹಕ್ಕಿನ ದನಿ ನನ್ನ ಅಂತರಾತ್ಮದಲ್ಲಿ ಬಲವಾಗಿ ನಿಂತ ಭಾವವಾಗಿ ಈ ಅವ್ವನನ್ನು ನನ್ನ ಎಲ್ಲಾ ಸಂಬಂಧಿಕರ ಮನೆಗೂ ಕರೆದುಕೊಂಡು ಹೋಗಿದ್ದೇನೆ.

ಗೌರಿಯನ್ನು ಮೊದಲು ಕರೆದುಕೊಂಡು ಹೋಗಿದ್ದು ಬೆಳ್ಳೂರು ಕ್ರಾಸಿನ ಸಮೀಪವಿರುವ ನನ್ನ ಹೆಂಡತಿ ತವರುಮನೆ ಚೋಳಸಂದ್ರಕ್ಕೆ. ಆ ದಿನ ಊರಹಬ್ಬ. ಹಾಗಾಗಿ ಮಟನ್, ಚಿಕನ್ ಮಾಡುವಂತಿಲ್ಲ ಮನೆಯೊಳಗೂ ತಿನ್ನುವಂತಿಲ್ಲ. ಆದ್ದರಿಂದ ಬೆಳ್ಳೂರಿನ ಸಯದ್‌ಗೌಸಣ್ಣ ತನ್ನ ಮನೆಯಲ್ಲಿ ಮಾಡಿಸಿಕೊಂಡು ಬಂದರು ಕೊಟ್ಟಿಗೆಯಲ್ಲಿ ಕುಳಿತು ಪಾರ್ಟಿ ಆರಂಭಿಸಿದೆವು. ಗೌರಿ ಸಿಗರೇಟ್ ಹಚ್ಚಿದ ಕೂಡಲೆ ಅಕ್ಕಪಕ್ಕದ ಮನೆಯವರು ಕಿಟಕಿಯಿಂದ ಬಗ್ಗಿ ನೋಡಿ ಹೌಹಾರಿ ಹೋದರು. ನಮ್ಮ ಚಿಗವ್ವನಂತೂ "ಇಂತ ಹೆಣ್ಣಮಕ್ಕಳಿದ್ರೆ ಗಂಡು ಮಕ್ಳ್ಯಾಕೆ ಬೇಕು" ಎಂದು ಉದ್ಘಾರ ತೆಗೆದಳು. ಗೌರಿ ತಾನು ತಂದಿದ್ದ ಶಾಲನ್ನು ಚಿಗವ್ವನಿಗೆ ಹೊದಿಸಿದಳು ಚಿಗವ್ವ ಅದನ್ನು ಯಾವಾಗಲೂ ಹೊಚ್ಚಿಕೊಂಡು "ಗೌರಿ ಕೊಟ್ಟವುಳಿ ಹೊಚ್ಚಿಗೂ ಅಂತ" ಎಂದು ಯಾರು ಕೇಳದೆಯಿದ್ದರೂ ಹೇಳುತ್ತಿದ್ದಳು.

ಆ ನಂತರ ಗೌರಿಯನ್ನು ನಮ್ಮೂರಿಗೆ ಕರೆದುಕೊಂಡು ಹೋಗಬೇಕಾದರೆ ಊರಮನೆಯಲ್ಲಿ ಶೌಚಾಲಯವಿರಲಿಲ್ಲ. ತರಾತುರಿಯಿಂದ ಕಟ್ಟಿಸಿ ಇಂತದೇ ಕಾಲದಲ್ಲಿ ಕರೆದುಕೊಂಡು ಹೋದೆ. ನಮ್ಮ ಮಾಜಿ ಮಂತ್ರಿಗಳು, ಸಜ್ಜನ ರಾಜಕಾರಣಿಯೂ ಆದ ಎಚ್.ಟಿ. ಕೃಷ್ಣಪ್ಪನವರೂ ಬಂದರು. ಆಗ ಗೌರಿಗೆ ಅರ್ಧ ಶತಮಾನದ ರಾಜಕಾರಣದ ಸಂಕ್ಷಿಪ್ತ ವಿವರ ಸಿಕ್ಕಿತು. ಅಷ್ಟರಲ್ಲಿ ಅರ್ಧ ರಾತ್ರಿ ಮೀರಿತ್ತು. ಗೌರಿ ತನ್ನ ಕಾರಿನಲ್ಲಿ ಕೃಷ್ಣಪ್ಪನವರನ್ನು ನಾಗಮಂಗಲದ ಅವರ ಮನೆಗೆ ಸಾಗಿಸಿ ಹೊರಡುವಾಗ ಕೃಷ್ಣಪ್ಪನವರು "ಚಂದ್ರೇಗೌಡ್ರೆ ಈ ಗೌರಮ್ಮ ಲಂಕೇಶರಿಗಿಂತ್ಲೂ ಸ್ಟ್ರಾಂಗು. ನಾನು ಏನೋ ಅನ್ನಕೊಂಡಿದ್ದೆ. ಅವರ ಶಕ್ತಿ ಸಾಮರ್ಥ್ಯ ಇವತ್ತು ಗೊತ್ತಾಯ್ತು" ಎಂದರು.

ಹೀಗೆ ಗೌರಿ ಏನೆಂಬುದು ನನ್ನ ಭಾಗಕ್ಕೆ ನಿಧಾನವಾಗಿ ತೆರೆದುಕೊಳ್ಳುತ್ತಾ ಹೋಯ್ತು. ನಾನು ಗ್ರಹಿಸುತ್ತಾ ಹೋದಂತೆ ಆಕೆಗೆ ಒಂದು ಚೂರಾದರೂ ಭಯವೆಂಬುದೇ ಇರಲಿಲ್ಲ. ಅಷ್ಟೇ ಅಲ್ಲ, ಜಾತಿಪಾತಿ ದೇವರುದಿಂಡಿರು ನಮ್ಮ ನಡುವಿನ ಯಾವ ಸಂಕೋಲೆಯೂ ಇಲ್ಲದೆ ಎಲ್ಲದರಿಂದ ಮುಕ್ತವಾದ ಮಗುವಿನಂತಿದ್ದಳು. ಆದ್ದರಿಂದ ಯಾರು ಕರೆದರೂ ಹಿಂದುಮುಂದು ನೋಡದೇ ಹೋಗಿಬರುತ್ತಿದ್ದಳು. ತನ್ನ ಅಪ್ಪನಿಂದ ಟೀಕಿಸಿಕೊಂಡು ಮುನಿಸಿಕೊಂಡವರ ಮನೆಗೂ ಹೋಗುತ್ತಿದ್ದಳು. ಅವರನ್ನ ಪತ್ರಿಕೆ ಆಫೀಸಿಗೆ ಕರೆದು ಪಾರ್ಟಿ ಕೊಡುತ್ತಿದ್ದಳು. ತುಂಬಾ ನೊಂದುಕೊಂಡು ಕೊರಗುತ್ತಿದ್ದ ತೇಜಸ್ವಿಯವರ ಮನ ಒಲಿಸಿ ಪ್ರಶ್ನೆಗಳಿಗೆ ಉತ್ತರ ಪಡೆದಿದ್ದಳು. ತನ್ನನ್ನೇ ಹೀನಾಮಾನ ಬೈದವರನ್ನು ಮಾತನಾಡಿಸಿ ಯೋಗಕ್ಷೇಮ ಕೇಳುತ್ತಿದ್ದಳು. ಸಕಲ ಜೀವಾತ್ಮರಿಗೂ ಲೇಸಬಯಸುವವನೇ ಶರಣ ಎಂಬಂತೆ ಅವಳ ವರ್ತನೆಯಿತ್ತು.

ನಾನು ಬೆಂಗಳೂರಿಗೆ ಹೋದರೆ, ಅಲ್ಲಿ ಇಲ್ಲಿ ಉಳಿದುಕೊಂಡು ಪಡಿಪಾಟಲು ಪಡುತ್ತಿದ್ದೆ. ಆದರೆ ಗೌರಿ ಇನ್ನೆಲ್ಲೂ ಉಳಿಯುವುದು ಬೇಡ ನನ್ನ ಮನೆಗೆ ಬನ್ನಿ ಮೇಲೆ ರೂಮಿದೆ ಎಂದಳು. ಆವತ್ತಿನಿಂದ ಅವಳ ಮನೆಯಲ್ಲೇ ಉಳಿದುಬರುತ್ತಿದ್ದೆ. ನಾನು ಮಲಗುವ ರೂಮಿಗೆ ಬಂದು ಬೆಡ್‌ಶೀಟ್ ಬದಲಿಸಿ, ಬೇರೆ ರಗ್ಗು ಒದಗಿಸಿ ಮಗನನ್ನು ಮಲಗಿಸಿ ಹೋದಂತೆ ಬೈ ಹೇಳಿ ಹೋಗುತ್ತಿದ್ದ ಆ ತಾಯಿ ನಾನು ಜನ್ಮಾಪಿ ನೆನೆಯುವಂತೆ ಮಾಡಿಹೋಗಿದ್ದಾಳೆ.

ಸಾವಿನ ಭಯವನ್ನು ಗೆದ್ದವನು ತುಂಬು ಲವಲವಿಕೆಯ ಜೀವನೋತ್ಸಾಯಿಯಾಗಿರುತ್ತಾನಂತೆ. ಗೌರಿ ಹಾಗಿದ್ದಳು. ನಾವು ಭೇಟಿಯಾದ ಯಾವ ಘಳಿಗೆಯೂ ಗಂಭೀರವಾಗಿ ಮಾತನಾಡಿದ್ದಿಲ್ಲ. ಬರೀ ಹಾಸ್ಯ ಮಾಡಿಕೊಂಡು ನಗುತ್ತಿದ್ದೆವು. ನನಗೆ ಗೊತ್ತಿರುವ ತಮಾಷೆಯನ್ನೆಲ್ಲಾ ಹೇಳಿ ನಗಿಸುತ್ತಿದ್ದೆ. ಹಾಗಾಗಿ ನಾನು ಕಂಡಕೂಡಲೇ ಹಗುರಗೊಂಡು ಹಸನ್ಮುಖಿಯಾಗುತ್ತಿದ್ದಳು. ನಾನು ಈಚೆಗೆ ಗೌರಿಯನ್ನು ನಗಿಸಿದ ಕೊನೆಯ ಸಂಗತಿ ಎಂದರೆ, ಗೌರಿ ಕನ್ನಯ್ಯ ವೇಮುಲ ಇವರನ್ನೆಲ್ಲಾ ನನ್ನ ಮಕ್ಕಳೆಂದು ಬರೆದುಕೊಂಡಿದ್ದಳು. ಆಕೆಯ ಛೇಂಬರಿಗೆ ಹೋದಕೂಡಲೇ "ಅಲ್ಲವ್ವ ಆ ಹುಡುಗರನ್ನೆಲ್ಲಾ ಮಕ್ಕಳು ಅಂದಿದ್ದಿಯಲ್ಲಾ, ಇಲ್ಲಿ ನಿನ್ನ ಕಣ್ಣಿಗೆ ಯಾರೂ ಕಾಣಲಿಲ್ವೆ. ನನ್ನನ್ನು ಕನಿಷ್ಠ ಭಾವ ಅಂತಲಾದ್ರು ಕರದು ಫೋಟೋ ಹಾಕಬವುದಿತ್ತು" ಎಂದು ನಗಿಸಿದೆ.

ಆಕೆಯನ್ನು ನಗಿಸಲೆಂದೇ ತಮಾಷಿ ಸಂಗ್ರಹಿಸಿಕೊಂಡು ಹೋಗುತ್ತಿದ್ದೆ.




ಅದಕ್ಕೂ ಮೊದಲು ಲಂಕೇಶರನ್ನು ನಗಿಸಲು ತಯಾರಾಗಿ ಹೋಗುತ್ತಿದ್ದೆ. ಈಗ ಇಬ್ಬರೂ ನೆನಪಾಗಿ ಹೋದರು.

ಬೆಂಗಳೂರು ನಾಯಂಡಳ್ಳಿ ಏರಿಯಾದಲ್ಲಿ ಪುಟ್ಟ ಮನೆ ಮಾಡಿಕೊಂಡು ಏನೇನೋ ಕೆಲಸ ಮಾಡಿಕೊಂಡು ಜೀವನ ಸಾಗಿಸುವ ನನ್ನ ಸಂಬಂಧಿ ಹೆಣ್ಣುಮಕ್ಕಳಿದ್ದಾರೆ. ಅವರೆಲ್ಲಾ ಒಂದೆಡೆ ಸೇರಿ, ತಮ್ಮ ಬದುಕು ಬವಣೆ ಹಂಚಿಕೊಂಡು ನಿರ್ಗಮಿಸುತ್ತಾರೆ. ಅಲ್ಲಿಗೆ ಒಮ್ಮೆ ಗೌರಿ ಕರೆದುಕೊಂಡು ಹೋದಾಗ ಗಂಡ ಸತ್ತವರು ಮತ್ತು ಗಂಡ ಬಿಟ್ಟವರು ಇವರೆಲ್ಲರ ಬದುಕಿನ ಉತ್ಸಾಹ ನೋಡಿ ಗೌರಿ ಅಲ್ಲಿಗೆ ಎರಡು ಮೂರು ಬಾರಿ ಬಂದರು. ಆ ಜೀವನೋತ್ಸಾಹಿಗಳಿಗೆ ಸ್ವಂತ ಮನೆಯಿರಲಿಲ್ಲ, ಕಾಯಂ ಉದ್ಯೋಗವಿರಲಿಲ್ಲ. ಆದರೂ ಅವರ ಬದುಕಿನ ಉತ್ಸಾಹ ನೋಡಿದ ಗೌರಿ ಮತ್ತೆ ಬರುತ್ತೇನೆ ಎಂದು ಹೋಗಿದ್ದರು. ಆ ಲೆಕ್ಕದಲ್ಲಿ ನಾಳಿನ ಹದಿನಾಲ್ಕನೇ ತಾರೀಖು ನಾಯಂಡಳ್ಳಿ ಗಲ್ಲಿಗಳಲ್ಲಿ ವಾಸಿಸುವ ಹೆಣ್ಣುಮಕ್ಕಳ ಸಭೆಯ ಅಧ್ಯಕ್ಷತೆ ವಹಿಸಬೇಕಿತ್ತು. ಈಗ ಅವರೆಲ್ಲರೂ ಫೋನ್ ಮಾಡಿ ಅಳುವುದನ್ನೇ ಮಾಡುತ್ತಿದ್ದಾರೆ. ನನಗೂ ಅದೇ ಅನಿವಾರ್ಯವಾಗಿದೆ.



■ ಬಿ. ಚಂದ್ರೇಗೌಡ

ಆರ್ಥಿಕವಾಗಿ ಕಂಗೆಟ್ಟಿದ್ದರೂ ಅಡ್ಡದಾರಿ ಹಿಡಿಯದ ಛಲಗಾರ್ತಿ



ನಾನು ಮತ್ತು ಗೌರಿ ಲಂಕೇಶ್ 25 ವರ್ಷಗಳಿಂದ ಪರಿಚಿತರು. ಆದರೆ ಮಾತನಾಡಿದ್ದು ಕಡಿಮೆ. ತೀರಾ ಯಾವುದೋ ವಿಚಾರವಾಗಿ ಅಗತ್ಯವಿದ್ದಾಗ ಮಾತ್ರ ಕರೆ ಮಾಡಿ ಮಾತನಾಡುತ್ತಿದ್ದೆವು. ಅವರು ಸಾಮಾನ್ಯವಾಗಿ ತಡರಾತ್ರಿಗಳಲ್ಲಿ ಕರೆ ಮಾಡುತ್ತಿದ್ದರು. ಮಾತುಕತೆ ದೀರ್ಘಕಾಲ ಸಾಗುತ್ತಿತ್ತು.

ಹಾಗೆ ಮಾತಿಗೆ ಸಿಕ್ಕಾಗಲೆಲ್ಲ ಆ ಹೊತ್ತಲ್ಲಿ ಅವರನ್ನು ಕಾಡುತ್ತಿದ್ದ ಆಲೋಚನೆಗಳ ಬಗ್ಗೆ ಹಾಗೂ ಪತ್ರಿಕೆ ನಡೆಸುವಲ್ಲಿ ತಾನು ನಡೆಸುತ್ತಿದ್ದ ಹೋರಾಟದ ಬಗ್ಗೆ ಮಾತನಾಡುತ್ತಿದ್ದರು. ಪ್ರತಿಬಾರಿ ಅವರೊಂದಿಗೆ ಮಾತನಾಡಿದಾಗಲೂ, ಅವರು ಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದರು ಎಂಬುದು, ಆ ಕಾರಣಕ್ಕಾಗಿಯೇ ಅವರು ಜರ್ಜರಿತರಾಗಿದ್ದರು ಎನ್ನುವುದು ನನಗೆ ಗೊತ್ತಾಗುತ್ತಿತ್ತು.

ನಾನು ಈ ಘಟನೆಯನ್ನು ನಾನು ಮತ್ತು ಗೌರಿ ಎಷ್ಟು ಹತ್ತಿರದವರು ಎನ್ನುವುದನ್ನು ಹೇಳಲಿಕ್ಕೆಂದು ಇಲ್ಲಿ ನಿರೂಪಿಸಲಿಲ್ಲ, ಆದರೆ ಅವರ ಸಾವು? ಅಲ್ಲಲ್ಲ ಅವರ ಮನೆ ಎದುರೇ ನಡೆದ ಬರ್ಬರ ಹತ್ಯೆ? ಪರಿಣಾಮ ದೇಶಾದ್ಯಂತ, ಪ್ರಪಂಚಾದ್ಯಂತ ಬರೆಯಲಾದ ಸಹಸ್ರಾರು ಪದಗಳ ಮಧ್ಯೆ ಕಳೆದುಹೋಗಿರಬಹುದಾದ ನಾಲ್ಕು ಪ್ರಮುಖ ಅಂಶಗಳನ್ನು ನಿಮ್ಮ ಗಮನಕ್ಕೆ ತರಲೆಂದು ಈ ವಿಷಯ ಪ್ರಸ್ತಾಪಿಸಿದೆ.

ಮೊದಲನೆಯದು, ಗೌರಿ ಎಂಬ ಕೃಶ, ಒಂಟಿ ಹೆಣ್ಣು ತನ್ನ ಹೋರಾಟವನ್ನು ಹೊರಗಿನವರಿಗೆ ಗೊತ್ತಾಗದಂತೆ, ತಣ್ಣಗೆ ನಡೆಸಿದರು. ಸದ್ಯ ಆಕೆಗೆ ಸೈದ್ಧಾಂತಿಕ ಹೋರಾಟಗಾರ್ತಿ ಎಂಬ ಪಟ್ಟ ಸಿಕ್ಕಿದ್ದು, ಎಲ್ಲಾ ಕಷ್ಟಗಳನ್ನು ದಿಟ್ಟತನದಿಂದ ಎದುರಿಸಿದ್ದು ಚಂದಮಾಮ ಕತೆಯಂತೆ ಕಾಣಬಹುದು. ಆದರೆ ಹಾಗಿರಲಿಲ್ಲ, ಅದರಲ್ಲೂ ಕಡೆಯ ದಿನಗಳಂತೂ ಹಾಗಿರಲೇ ಇಲ್ಲ.

ಎರಡನೆಯದು, ಓದುಗ ಸಮೂಹ ಹಾಗೂ ಮುಖ್ಯವಾಹಿನಿ ಪತ್ರಿಕೆಗಳಲ್ಲಿ ಕೆಲಸ ಮಾಡುವ ಹಲವು ಮಂದಿ ಟ್ಯಾಬ್ಲಾಯ್ಡುಗಳೆಂದರೆ ಸಂಪಾದಕರು ಹಾಗೂ ಅವರ ಪತ್ರಕರ್ತರ ರೋಲ್‌ಕಾಲ್ ದಂಧೆಗೆಂದೇ ಇರುವ ಪತ್ರಿಕೆಗಳೆಂದೇ ತಿಳಿದಿದ್ದಾರೆ. ಹಣ ಕೊಡಿ ಇಲ್ಲ ಏಭವಿಸಿ. ಅದು ಕೆಲವು ಪತ್ರಿಕೆಗಳ ಏಚಾರದಲ್ಲಿ ನಿಜವಿರಬಹುದು. ಆದರೆ ಗೌರಿ ಪತ್ರಿಕೆಯ ವಿಷಯದಲ್ಲಿ ಅಲ್ಲ.

ಮೂರನೆಯದು, ನಕ್ಸಲರ ಬಗ್ಗೆ ಸಹಾನುಭೂತಿ ಇರುವ ಎಲ್ಲರಿಗೂ, ಎಲ್ಲಾ ಜೆಎನ್‌ಯು ಮಾದರಿಗಳಿಗೂ, ಎಲ್ಲಾ ಸಿಂದ್ಧವಿರೋಧಿಗಳಿಗೂ ಎಂದೂ ಏಗಿಯದ ಫಾರಿನ್ ಫಂಡ್‌ಗಳ ಪೂರೈಕೆ ಇರುವುದಿಲ್ಲ, ಆಕೆಯ ಬಳಿ ಇದ್ದದ್ದು ಇಂಡಿಯಾದಲ್ಲಿ ಟೊಯೋಟಾ ಕಂಪನಿ ಮಾರಾಟ ಮಾಡುತ್ತಿರುವ ಅತೀ ಸೋವಿಯ ಕಾರು. ಆಕೆಗೆ ಗುಂಡು ಹೊಡೆದಾಗ ಅದರ ಇಗ್ನಿಷನ್ ಇನ್ನೂ ಚಾಲ್ತಿಯಲ್ಲಿತ್ತು.

ನಾಲ್ಕನೆಯದು, ಸೆಪ್ಟೆಂಬರ್ 5ರಂದು ಕೊನೆ ಉಸಿರೆಳೆದಾಗ ಆಕೆಯ ಹಣಕಾಸಿನ ಹಣೆಬರಹ ಗೌರಿ ದೀರ್ಘ ಕಾಲ ವಿರೋಧಿಸಿದ, ಖಂಡಿಸಿದ ನರೇಂದ್ರ ಮೋದಿಯ ನಿರ್ಧಾರದೊಂದಿಗೆ ತಗಲುಹಾಕಿಕೊಂಡಿತ್ತು.

ರಾಜ್ಯ ರಾಜಕೀಯದಲ್ಲಿ ಗೌರಿಯ ಕುಟುಂಬ ಹೊಂದಿರುವ ಸಂಪರ್ಕಗಳು ಮುಖ್ಯವಾಗಿ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆಗಿನ ಬಾಂಧವ್ಯ ನೋಡಿದಾಗ, ತನ್ನ ಆರ್ಥಿಕ ಕಷ್ಟಗಳಿಂದ ಹೊರಬರುವುದು ಅಷ್ಟೇನು ಕಷ್ಟವಾಗಿರಲಿಲ್ಲ, ಆದರೆ ಗೌರಿ ನನ್ನನ್ನು ಸಂಪರ್ಕಿಸಿ ಸಲಹೆ ಕೇಳಿದ್ದನ್ನು ನೋಡಿದಾಗ, ಅವರು ಆ ಹಾದಿ ತುಳಿಯಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಗೌರಿ ಹಾಗೂ 'ಗೌರಿ ಲಂಕೇಶ್ ಪತ್ರಿಕೆ' ಎದುರಿಸಿದ ಸವಾಲುಗಳು ನೋಟು ರದ್ದತಿ ಪತ್ರಿಕೋದ್ಯಮದ ಮೇಲೆ ಮಾಡಿದ ಪರಿಣಾಮಗಳನ್ನು ಸ್ಪಷ್ಟವಾಗಿ ಹೇಳುತ್ತವೆ. ಅದರಲ್ಲೂ ಪ್ರಾದೇಶಿಕ ಭಾಷೆಯಲ್ಲಿರುವ ಸಣ್ಣ ಪತ್ರಿಕೆಗಳು ಅನುಭವಿಸಿದ ಹೊಡೆತ ಭಾರೀ ದೊಡ್ಡದು. ಅಂತಹ ಪತ್ರಿಕೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ, ಅವರ ಕುಟುಂಬದ ಸಮಸ್ಯೆಗಳು ಹೇಳತೀರದು.

ಆರ್.ಬಿ.ಐ ಕೂಡಾ ನೋಟು ರದ್ದು ಪ್ರಕ್ರಿಯೆಯಿಂದ ಏನೂ ಲಾಭವಾಗಲಿಲ್ಲ ಎಂದು ಅಧಿಕೃತವಾಗಿ ಹೇಳಿಕೆ ನೀಡಿದ ನಂತರ ಐದು ದಿನಗಳ ಕಾಲ ಗೌರಿ ಇದ್ದರು. ಆ ಹೇಳಿಕೆಯಿಂದ ಗೌರಿ ಸಂಭ್ರಮಪಡುವುದನ್ನಂತೂ ಈ ಗುಂಡು ದಾಳಿ ಮಾಡಿದವರು ತಡೆಯಲಾಗಲಿಲ್ಲ, ಅದೊಂದೇ ಸಮಾಧಾನ.

ಗೌರಿ ಈ ಭೂಮಿಗೆ ವಿದಾಯ ಹೇಳುವ ಮೂಲಕ ಭಾರತೀಯ ಮಾಧ್ಯಮದ ಇನ್ನೊಂದು ಮಗ್ಗುಲನ್ನು ತೋರಿಸಿ ಹೋಗಿದ್ದಾರೆ. ಬದಲಾವಣೆ ತರಲು ಪತ್ರಿಕೋದ್ಯಮಕ್ಕೆ ಸಾಧ್ಯ ಎಂದು ನಂಬಿರುವ ನಮ್ಮಂತಹವರಿಗೆ ಗೌರಿ ಕೊಟ್ಟ ಕೊನೇ ಬಳುವಳಿ ಅದೇನೆ.


ಹತ್ಯೆ ನಂತರ ಗೌರಿ ಬಗ್ಗೆ ಅಚ್ಚಾಗುತ್ತಿರುವ ಸುದ್ದಿ ಪುಟಗಳು, ನಡೆಯುತ್ತಿರುವ ರ್‍ಯಾಲಿಗಳು, ಸಭೆಗಳನ್ನು ನೋಡಿ ಯಾರೋ ಒಬ್ಬ ಸಾಮಾನ್ಯ ಓದುಗ ಅಚ್ಚರಿ ಪಡುತ್ತಿರಬಹುದು.

ಇನ್ನೊಂದೆಡೆ, ಗೌರಿ ಹಾಗೂ ಪತ್ರಿಕೆ ಇಷ್ಟೆಲ್ಲಾ ಕಷ್ಟ ಪಡುತ್ತಿದ್ದಾಗ, ಇಂಗ್ಲಿಷ್, ಹಿಂದಿ, ತಮಿಳು, ಕನ್ನಡ, ಬಂಗಾಳಿ, ಮಳಯಾಳಂ, ಮರಾಠಿ ಭಾಷೆಯ ದೊಡ್ಡ ದೊಡ್ಡ ಮಾಧ್ಯಮ ಸಂಸ್ಥೆಗಳು ಹೇಗೆ ಉಳಿದುಕೊಂಡು ಬಂದಿವೆ ಎಂದು ಹುಬ್ಬೇರಿಸಿರಬಹುದು.

ಅದೇ ಹೊತ್ತಲ್ಲಿ ದೊಡ್ಡ ದೊಡ್ಡ ಪತ್ರಿಕೆ, ಟಿವಿಗಳ ದೊಡ್ಡ ಜನರ ಮಾತುಗಳನ್ನು ಕೇಳುತ್ತಾ ಯುವ ಪತ್ರಕರ್ತರ ಗೌರಿ ಲಂಕೇಶ್ ಅವರನ್ನು, ಇವರು ಇಷ್ಟೆಲ್ಲಾ ಹೊಗಳುತ್ತಿರುವಾಗ, ನಾವೇಕೆ ಅಸಮಾನತೆ, ಅನ್ಯಾಯ ಅಸಹಿಷ್ಣುತೆ, ಭ್ರಷ್ಟಾಚಾರ, ತಾರತಮ್ಯ, ಕೋಮು ಆಧಾರ ಮೇಲೆ ಜನ ವಿಭಜನೆ ಕುರಿತು ಮುಕ್ತವಾಗಿ ಸು ಮಾಡುತ್ತಿಲ್ಲ ಎಂದು ಯೋಚಿಸುತ್ತಿರಬಹುದು.

ಅಮೆರಿಕ ಪತ್ರಕರ್ತ ಡೇವಿಡ್ ಹಾಲ್ಬರ್ಸ್ಟಾಮ್ ಒಮ್ಮೆ ಹೇಳಿದ್ದ: "ಪತ್ರಿಕೋದ್ಯಮ ಅಂದರೆ ಹೆಚ್ಚು ಜನ ಸ್ನೇಹಿತರ ಗಳಿಸುವುದಲ್ಲ, ಹೊಗಳಿಕೆಯನ್ನು ಎದುರು ನೋಡುವುದಲ್ಲ ನೀನೇನಾದರೂ ಹಾಗಂದುಕೊಂಡಿದ್ದರೆ, ಬೇರೆ ದಾ ನೋಡಿಕೊಳ್ಳುವುದು ಒಳ್ಳೆಯದು."


ವಿಚಿತ್ರ ನೋಡಿ. ನಮ್ಮ ಇಂಡಿಯಾ ಮಾಧ್ಯಮ ಹಲವು ಮಂದಿ ಕೋಮುವಾದದ ಜ್ವಾಲೆಗೆ, ಎಲ್ಲೆ ಹಬ್ಬುತ್ತಿರುವ ದ್ವೇಷದ ದಳ್ಳುರಿಗೆ ಕುರುಡಾಗಲು ಮರಳಿನ ತಮ್ಮ ತಲೆಗಳನ್ನು ಹೂತಿಡುತ್ತಿದ್ದಾರೆ. ಆದರೆ ಗೌರಿಯಂತಹ ಪತ್ರಕರ್ತೆ ಈಗ ಬೇರೆ ಎಲ್ಲಿಗೋ ಹೋಗಬೇಕಾಯಿತು. ಈಗ ಉಳಿದಿರುವ ನಾವು ಪ್ರಶ್ನೆ ಕೇಳಿಕೊಳ್ಳಬೇಕಿದೆ: ನಾವೆಷ್ಟು ಮಂದಿ ಶತ್ರುಗಳನ್ನು ಸಂಪಾದಿಸಿದ್ದೇವೆ?



ಆಧುನಿಕ ಆಣೆಬಡ್ಡಿ ರಂಗವ್ವ

ಮೂವತ್ತೈದು ವರ್ಷಗಳ ಕಾಲ ಕರ್ನಾಟಕದ ಅನೇಕ ಚಳವಳಿಗಳಿಗೆ ಕೊಟ್ಟುಕೊಂಡು, ಭ್ರಮೆ-ಉತ್ಸಾಹ-ನಿರಾಸೆಗಳನ್ನು ಅನುಭವಿಸುತ್ತಾ ಸಾಗುತ್ತಿದ್ದ ನನ್ನಂಥಹ ಅನೇಕ ಜನರ ಬದುಕಿನಲ್ಲಿ ಗೌರಿ ಅನಿರೀಕ್ಷಿತವಾಗಿ ಬಂದು ಕೀಟಲೆ-ಜಗಳ-ಪ್ರೀತಿಗಳ ಕಟ್ಟನಲ್ಲಿ ನಿತ್ಯ ಸಹಜವಾಗಿ ಆವರಿಸಿದವಳು; ಅವಳ 'ಹತ್ಯೆ' ಹಠಾತ್ತನೆ ಬದುಕಿನ ಸಮತೋಲನವನ್ನು ಕದಡಿದೆ. ಈ ಹೊತ್ತಲ್ಲಿ ಅವಳ ಜೊತೆಗಿನ ಬದುಕಿನ ಅರ್ಥವನ್ನು ಅಳೆದು ತೂಗುವ ಪೇಚಾಟದ ಸ್ಥಿತಿಯಲ್ಲಿ ನಾನಿದ್ದೇನೆ. ಅವಳ ಜೊತೆಗಿನ ನಂಟು ಬರೀ ಚಳವಳಿಯ ಸಾರ್ವಜನಿಕ ಸಾಂಗತ್ಯವಾಗಿದ್ದರೆ, ಬೌದ್ಧಿಕ ದೂರ ಇಟ್ಟುಕೊಂಡು ನಾನು ಕಂಡ ಅವಳನ್ನು ವಿವರಿಸಬಹುದಿತ್ತು; ಅವಳು ಬರೀ ವೈಯಕ್ತಿಕ ಗೆಳೆತನದ ಆಪ್ತ ಜೀವವಾಗಿದ್ದರೆ, ಭಾವದ ತೀವ್ರತೆಯಲ್ಲಿ ಅವಳನ್ನು ನೆನೆಯಬಹುದಿತ್ತು; ಆದರೆ ಅವಳು ಸಾರ್ವಜನಿಕ-ವೈಯಕ್ತಿಕ, ಬುದ್ಧಿ-ಭಾವಗಳು ಕಲಿಸಿ ಹೋದಂತಹ ಮನುಷ್ಯ ಸಂಬಂಧದಲ್ಲಿ ನನ್ನಂತಹವರನ್ನು ಆವರಿಸಿಕೊಂಡಿದ್ದಳು ಅನ್ನೋದು ಅವಳ 'ಸಾವಿನ' ನಂತರ ಅರ್ಥವಾಗುತ್ತಿದೆ; ಅವಳ 'ಹತ್ಯೆ'ಯ ಹಿಂದಿರುವ ಕ್ರೌರ್ಯದ ಸಾಮಾಜಿಕ ಭೀಭತ್ಸ ಕಾಣತೊಡಗಿದೆ. ಮತ್ತೂ ವೈಯಕ್ತಿಕ-ಸಾಮಾಜಿಕ ಜೀವನಗಳ ನಡುವೆ ಅನಾಯಾಸವಾಗಿ ಹರಿದಾಡುವಂತೆ ಕಾಣುತ್ತಿದ್ದ ಅವಳ ಬದುಕಿನ ಓಘ, ಒಡನಾಡುವ ಯೌವನಿಗರಿಗೆ ನೀಡಿದ ಹೊಸ ಸ್ಪರ್ಶವೂ ಅಚ್ಚರಿ ಮೂಡಿಸುತ್ತಿದೆ.

ಗೌರಿ 'ಲಂಕೇಶ್ ಪತ್ರಿಕೆ'ಯ ಸಂಪಾದಕಿಯಾಗುವುದಕ್ಕಿಂತ ಮೊದಲು, ನಮಗೆ ಅವಳ ಪರಿಚಯವಿದ್ದದ್ದು 'ಸಂಡೆ'ಯಲ್ಲಿ ಬರೆಯುತ್ತಿದ್ದ ಬರಹಗಳ ಮೂಲಕವಷ್ಟೆ. ಅವಳು ಲಂಕೇಶ್ ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡಾಗ, ಅವಳನ್ನು ಒಬ್ಬ ಸುಶಿಕ್ಷಿತ ಇಂಗ್ಲಿಷ್ ಪತ್ರಕರ್ತೆ ಎಂಬ ಅನುಮಾನದ ಕಣ್ಣೋಟವೇ ನನ್ನದೂ ಆಗಿತ್ತು, ಆ ಹೊತ್ತಿನಲ್ಲಿ ಅವಳು ಯಾವ ಚಳವಳಿಯಲ್ಲೂ ಇಳಿದಿರಲಿಲ್ಲವಾದರೂ ಅವಳ ಜೊತೆ ಒಡನಾಟ ಶುರುವಾದ್ದೇ, ನಾನು ಕರಾವಳಿಯ ಹಿಂದುತ್ವವಾದಿ ಹಿಂಸೆಯ ಕುರಿತು ಪತ್ರಿಕೆಗೆ ವರದಿ ಮಾಡಲು ತೊಡಗಿದಂದಿನಿಂದ. 2004ರ ಬಾಬಾಬುಡನ್‌ಗಿರಿ ಹೋರಾಟದಲ್ಲಿ ಎದೆಗಾರಿಕೆಯಿಂದ ಅವಳು ಮುನ್ನುಗ್ಗಿ ಜೈಲು ಸೇರಿದ ಸಂಕಲ್ಪ ಕಂಡು ನಾನು ದಂಗಾಗಿ, ಅವಳ ವ್ಯಕ್ತಿತ್ವ ಎಂಥದ್ದು ಎಂದು ಯೋಚನೆ ಮಾಡಿದೆ. ಅವಳು ತನಗೆ ಅನ್ಯಾಯ ಅನಿಸಿದ ಸಾಮಾಜಿಕ ವಿದ್ಯಮಾನಗಳನ್ನು ವಸ್ತುವಾಗಿಟ್ಟುಕೊಂಡ ಚಳವಳಿಗಳಲ್ಲಿ ನಿರ್ಭಿಡೆಯಿಂದ ಭಾಗವಹಿಸತೊಡಗಿದಳು; ಆದರೆ, ಯಾವ



ಸಂಘಟನೆಯ ಅಧಿಕೃತ ಸದಸ್ಯೆಯಾಗಲು ನಿರಾಕರಿಸುತ್ತಿದ್ದಳು. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಜೊತೆ ಅವಳು ಅಧಿಕೃತವಾಗಿ ಗುರುತಿಸಿಕೊಳ್ಳುವುದಕ್ಕೆ ಒಂದೇ ಕಾರಣವೆಂದರೆ, ವೇದಿಕೆಯು ಹಲವು ಸಂಘಟನೆ ಹಾಗು ವ್ಯಕ್ತಿಗಳ ವೈಚಾರಿಕ ಸಹಮತದ ವೇದಿಕೆಯಾಗಿದ್ದು ಸಂಘಟನಾ ರಚನೆ ಮುಕ್ತವಾಗಿ ಇದ್ದದ್ದು ಎನಿಸುತ್ತದೆ. ಚಳವಳಿಗಳ ಉದ್ದೇಶಕ್ಕೆ ಬದ್ಧತೆ ಹಾಗು ಸಂಘಟನೆಗಳ ಭಾಗವಾಗಲು ನಿರಾಕರಣೆ–ಇದು ಅವಳ ಧೋರಣೆಯಾಗಿತ್ತು, ಚಳವಳಿಗಳು ತೀರಾ ಪ್ರಣಾಳಿಕೆಯ ಕಟುತ್ವದ ದಾರಿ ಹಿಡಿದರೆ, ಅವಳು ಅವುಗಳಿಂದ ದೂರ ಇದ್ದುಬಿಡುವ ಕೆಲವು ಪ್ರಸಂಗಗಳೂ ಇವೆ. ಇಷ್ಟಾದರೂ, ತನ್ನ ಪತ್ರಿಕೆ ಈ ಚಳವಳಿಗಳ ದನಿಗೆ ವೇದಿಕೆಯಾಗುವುದನ್ನು ಅವಳು ತಡೆಯುತ್ತಿರಲಿಲ್ಲ, ಚಳವಳಿಗಳಲ್ಲಿ ಭಾಗವಹಿಸುವುದರಿಂದ ಅನ್ಯಾಯಗಳ ಕುರಿತ ತನ್ನ ಕಣ್ಣೋಟ ವಿಸ್ತಾರವಾಗುತ್ತಿರುವುದು ಹಾಗು ತನ್ನ ಸಮಾಜ ಬಂಧುತ್ವ ಹರವಾಗುತ್ತಿರುವುದನ್ನು ಅವಳು ಒಪ್ಪುತ್ತಿದ್ದಳು, ಆದರೆ ಸಂಘಟನೆಗಳ ಕಟ್ಟಿನೊಳಗೆ ಸಿಲುಕಲು ಇಚ್ಛಿಸದಷ್ಟು ಸರ್ವತಂತ್ರ ಸ್ವತಂತ್ರ ಪ್ರವೃತ್ತಿ ಅವಳದ್ದು. ಅವಳ ಜೊತೆಗಿನ ನಮ್ಮಂತಹವರ ಆಪ್ತ ನಂಟಿನ ಸ್ವಾರಸ್ಯ ಇದ್ದದ್ದು ಇಲ್ಲೇ, ಮಧ್ಯಮ ವರ್ಗದ ಜೀವನಶೈಲಿಯಲ್ಲಿ ಬದುಕಿದ ಅವಳಿಗೆ ಈ ವರ್ಗದ ಎಲ್ಲರಂತೆ ಹಲವು ವಿಷಯಾಸಕ್ತಿಗಳೂ, ಹವ್ಯಾಸಗಳೂ ಇದ್ದವು; ಅವಳ ಸ್ವತಂತ್ರ ಮನೋಭಾವದಿಂದ ಬೆಳೆಸಿಕೊಂಡ ಕೆಲವು ಸೂಕ್ಷ್ಮ ಸಂವೇದನೆಗಳೂ ಇದ್ದವು; ಅವುಗಳು ಹೊಂದಿಕೆಯಾಗುವವರ ಜೊತೆ ಅಥವ ತನ್ನ ಸ್ವಾತಂತ್ರ್ಯವನ್ನು ಗೌರವಿಸಿ ಒಡನಾಡುವವರ ಜೊತೆ ಅವಳು ಬಹು ಬೇಗ ಆಪ್ತತೆ ಬೆಳೆಸಿಕೊಂಡುಬಿಡುತ್ತಿದ್ದಳು. ಎಷ್ಟೇ ಕಟು ಭಿನ್ನಮತ ಜಗಳಗಳ ನಂತರವೂ, ಈ ಆಪ್ತತೆ ಕರಗಲು ಸಾಧ್ಯವಿಲ್ಲ ಎನ್ನುವುದನ್ನು ನಮಗೆ ಕಲಿಸಿದವಳು ಗೌರಿ. ತನಗೆ ಆಪ್ತರಾದ ಇಬ್ಬರ ನಡುವೆ ವೈಮನಸ್ಯ ಬಂತೆಂದರೆ, ಮೊದಲು ರಾಜಿ ಮಾಡಿಸಲು ಮೂಗು ತೂರಿಸುತ್ತಿದ್ದವಳು ಅವಳೇ. 'ನಾನು ಸರಿ ಮಾಡ್ತೀನಿ ಇರು' ಎನ್ನುವಾಗ ಅವಳ ಮಾತಿನ ಅಪಾರ ವಿಶ್ವಾಸ ಇರುತ್ತಿತ್ತು, ಅದಕ್ಕೆ ಎದುರಾಡಿದರೆ ಅವಳಿ ಅಷ್ಟೇ ಸಿಟ್ಟೂ ಬರುತ್ತಿತ್ತು. ವ್ಯಕ್ತಿಗಳ ನಡುವೆ ಸಂಬಂ ಕಡಿದುಹೋಗಬಾರದು ಎಂಬ ತಹತಹಿಕೆ ಅವಳ ಸ್ವತಂತ್ರ ಪ್ರವೃತ್ತಿಯವಳಿಗೆ ಏಕಿತ್ತು ಎಂಬ ಅಚ್ಚರಿ ನನಗಿನ್ನೂ ಉಳಿದಿದೆ.

ಅವಳು ನಮ್ಮ ವೈಯಕ್ತಿಕ ಬದುಕಿನ ಬಗ್ಗೆ ಕೆದಕು ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ, ತನ್ನದರ ಬಗ್ಗೆಯೂ ಮುದ್ದಾಮಾ ಹೇಳಿಕೊಳ್ಳುತ್ತಿರಲಿಲ್ಲ. ಆಪ್ತ ಒಡನಾಟದಲ್ಲಿ ಕೊಂ ಕೊಂಚವಾಗಿ ಗೊತ್ತಾಗುವಷ್ಟು ಗೊತ್ತಾದರೆ ಸಾಕು ಎನ್ನುವುದ ಅವಳ ಜಾಯಮಾನ. ತನ್ನ ಸ್ವಾತಂತ್ರ್ಯಕ್ಕೆ ಅಡ್ಡಿಬರದಂ ಒಂಟಿ ಬದುಕಿನ ಆಯ್ಕೆ ಮಾಡಿಕೊಂಡ ಗೌರಿ, ತ ಕುಟುಂಬದ ಜೊತೆ ಕರುಳುಬಳ್ಳಿಯ ನಂಟನ್ನು ಜತನದ ಕಾಪಾಡಿಕೊಂಡಿದ್ದಳು; ಅವಳು ಸ್ವಂತದ ಆಯ್ಕೆಯ ಮದುವೆಯಾಗಿ, ನಂತರ ಮನೆಯವರಿಗೆ ತಿಳಿಸಿದವಳು ಘನತೆಯಲ್ಲಿ ವಿಚ್ಛೇದನ ಪಡೆದವಳು, ನಂತರವೂ ಮಾ ಪತಿ ಹಾಗು ಅವರ ಹೊಸ ಸಂಸಾರದೊಂದಿಗೆ ಅ ಪ್ರೀತಿ ಉಳಿಸಿಕೊಂಡಿದ್ದವಳು. ಅವಳ ಈ ಬಗೆಯ ಬಂಧು ಆಕಾಂಕ್ಷೆ ಚಳವಳಿಗಳ ಸಖ್ಯದಲ್ಲಿ ವಿಸ್ತಾರಗೊಂಡಂತೆ ಅವಳಿ ಅನಿಸಿರಬೇಕು. ಅವಳು ಹಲವರನ್ನು ತನ್ನ ಮಕ್ಕಳ ತಮ್ಮಂದಿರು ಎಂದು ಹಚ್ಚಿಕೊಳ್ಳುವಾಗ ಚೂರು ತೋರಿ ಇರುತ್ತಿರಲಿಲ್ಲ; ಆದರೆ, ಈ ಸಮಾಜ ರೂಢಿಸಿಕೊಳ್ಳಲ ಸೋತಿರುವ ಇಂತಹ ಸಹಬಂಧುತ್ವಗಳ ಬಗ್ಗೆ ಅವ ಸಂಭ್ರಮ ಅಪರಿಮಿತವಾಗಿತ್ತು, ಅವಳ ಈ ತೆರನಾ ಬದುಕು, ಆಧುನಿಕ ಸರ್ವ ಸ್ವತಂತ್ರ ಮಹಿಳೆಯ ಬ ನಮ್ಮ ಸಮಾಜ ರೂಢಿಸಿಕೊಂಡಿರುವ ಕಣ್ಣೋಟವ ಬುಡಮೇಲು ಮಾಡುವಂತಿತ್ತು, ತನಗೆ ಸರಿ ಎನಿಸಿ ನಿರ್ಧಾರ ತೆಗೆದುಕೊಂಡರೆ, ಅದನ್ನು ಅವಳ ಬದಲಿಸುತ್ತಿರಲಿಲ್ಲ, ಅದರ ಬಗ್ಗೆ ಚರ್ಚಿಸುವುದು ಅವಳಿ ಇಷ್ಟವಾಗುತ್ತಿರಲಿಲ್ಲ. "ಐ ಯಾಮ್ ಡೆಮೋಕ್ರಾಟಿಕ್ ಯಾ ಲಾಂಗ್ ಯಾಸ್ ಮೈ ಒಪಿನಿಯನ್ ಇಸ್ ಅಕ್ಸೆಪ್ಟೆಡ್ ಎಂದು ತಮಾಷೆ ಮಾಡೋ ಇವಳು ಬಡ ಪೆಟ್ಟ ಬಗ್ಗದ್ದರಿಂದ ಅವಳನ್ನು ನಾನು (ಲಂಕೇಶರ 'ಮುಸ್ಸಂ ಕಥಾಪ್ರಸಂಗ'ದ ನಾಯಕಿ) ಆಣೆ ಬಡ್ಡಿ ರಂಗವ್ವ ಅನ್ನುತ್ತಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail

1984ರ ನವೆಂಬರ್‌ನಲ್ಲಿ ಇಂಗ್ಲೆಂಡ್‌ನ ಕ್ರಿಕೆಟ್ ತಂಡ ಟೆಸ್ಟ್ ಸರಣಿಗೆಂದು ಭಾರತಕ್ಕೆ ಬಂದಿತ್ತು. ಇಂದಿರಾ ಗಾಂಧಿ ತನ್ನ ಅಂಗರಕ್ಷಕರಿಂದಲೇ 'ಹತ್ಯೆ'ಗೀಡಾಗಿ ಕೆಲವೇ ದಿನಗಳಾಗಿದ್ದವು (ಅಕ್ಟೋಬರ್ 31). ಕ್ರಿಕೆಟ್ ತಂಡವನ್ನು ಸ್ವಾಗತಿಸಿದ್ದ ಬ್ರಿಟಿಷ್ ಹೈಕಮಿಷನರ್ ಪರ್ಸಿ ನಾರಿಸ್ ಅವರನ್ನು ಟೆಸ್ಟ್‌ನ ಮೊದಲ ದಿನದ ಆಟದಂದೇ ಗುಂಡಿಟ್ಟು ಕೊಲ್ಲಲಾಗಿತ್ತು.

ಇಂಗ್ಲೆಂಡ್‌ನ ಆರಂಭ ಆಟಗಾರ ಗ್ರೇಮ್ ಫ್ರೋಲರ್ ತನ್ನ ಪುಸ್ತಕ 'ಫಾಕ್ಸ್'ಯಲ್ಲಿ ಆ ದಿನಗಳನ್ನು ನೆನಪಿಸಿಕೊಳ್ಳುತ್ತಾನೆ. ಅಂತಹ ಸನ್ನಿವೇಶದದಲ್ಲಿ ಮುಂಬೈನಲ್ಲಿ ವಾಂಖೆಡೆ ಕ್ರೀಡಾಂಗಣಕ್ಕೆ ಹೋಗುವಾಗ ತನಗನ್ನಿಸಿದ್ದನ್ನು ಹೀಗೆ ಹೇಳುತ್ತಾನೆ: "ಅಲ್ಲಿ 55,000 ಜನರಿದ್ದರು. ಅವರಲ್ಲಿ ಯಾರೋ ಒಬ್ಬನಾದರೂ ತನ್ನ ಕಿಸೆಯಲ್ಲಿ ರಿವಾಲ್ವರ್ ಇಟ್ಟುಕೊಂಡು ಬಂದಿರಬಹುದು...'

ಇಂದಿನ ನವ-ಭಾರತದಲ್ಲಿ ಮಾಧ್ಯಮವೂ ಅದೇ ಸ್ಥಿತಿಯಲ್ಲಿದೆ.

ಪ್ರಭುತ್ವಕ್ಕೆ ನೇರವಾಗಿ ಪ್ರಶ್ನೆ ಕೇಳುವ, ಜಾತಿ/ಕೋಮು ವಿಷಬೀಜ ಬಿತ್ತುವ ದುಷ್ಟನನ್ನು ಎದುರಿಸುವ, ದ್ವೇಷಕಾರುವವನನ್ನು ಸವಾಲೆಸೆಯುವ ಹಾಗೂ ಭ್ರಷ್ಟನನ್ನು ಬಯಲುರಂಗಗೊಳಿಸುವ ಪತ್ರಕರ್ತ ಇಂದು ಇಂತಹದ್ದೇ ಸ್ಥಿತಿಯಲ್ಲಿದ್ದಾನೆ. ನೀನು ಮನೆ ಬಾಗಿಲು ತೆಗೆಯುತ್ತಿರುವಾಗಲೇ ಯಾರೋ ಬಂದು ಒಂದು ಬುಲೆಟ್ ಹಾರಿಸಬಹುದು.

ಅಂದು ಕ್ರಿಕೆಟಿಗ ಫೌಲರ್ ತನ್ನ 28 ರ ಹರೆಯ ದಾಟಲು ಸಾಧ್ಯವಾಯಿತು. ಗೌರಿ 55 ರ ತನಕ ಬದುಕಿದ್ದರು.

ಕಳೆದ ನವೆಂಬರ್‌ನಲ್ಲಿ ಗೌರಿ ನನಗೊಂದು ಮೆಸೇಜ್ ಕಳುಹಿಸಿದ್ದರು. "ಬೆಂಗಳೂರು ಮಿರರ್‌ನ ಸಂಪಾದಕ ನನ್ನ ಅಂಕಣ ನಿಲ್ಲಿಸಿದ್ದಾರೆ. ಇಂದಿನಿಂದ ನಾನು ನಿನ್ನ ಗುಂಪು ಸೇರಿದಂತಾಯ್ತು" ಎಂದಿತ್ತು ಮೆಸೇಜ್. ಹೀಗಾಗಬಾರದಿತ್ತು ಎಂಬ ಉತ್ತರ ನಾನು ಕಳುಹಿಸಿದೆ.

" 'ಅಯ್ಯೋ ಅದಕ್ಕೇನೀಗ' ಕೋಮುವಾದಿಗಳನ್ನು ಕೋಲಿಸಲಿಕ್ಕಾದರೂ ನಾವು ಬದುಕಿರುತ್ತೇವೆ" ಎಂದು ಉತ್ತರಿಸಿದ್ದರು ಗೌರಿ.

ಆಗುತ್ತಾ ಗೌರಿ?

ನಿಜವಾಗಿಯೂ??



● ಕೃಷ್ಣ ಪ್ರಸಾದ್

ಔಟ್‌ಲುಕ್ ಪತ್ರಿಕೆಯ ಮಾಜಿ ಸಂಪಾದಕ. ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಸದಸ್ಯ

ಅವಳ ಸ್ವಂತಿಕೆಯ ಹಟ ಹಾಗು ಕಕ್ಕುಲಾತಿ ತುಂಬಿದ ಬಂಧುತ್ವಗಳನ್ನು ಕಟ್ಟಿಕೊಂಡು ನಿಭಾಯಿಸುವ ಛಲದಲ್ಲಿ ಅವಳು ರಂಗವ್ವನ ಹಾಗೆ ಇದ್ದಳು. ಸ್ವಸ್ವಾತಂತ್ರ್ಯ ಹಾಗು ಚಳವಳಿಗಳ ಸುಖ ಅವಳಿಗೆ ಒಂದನ್ನೊಂದು ಪೊರೆಯುವಂತೆ ಇರುತ್ತಿರಬೇಕು. ಜೀವನ ಸ್ವಲೋಲುಪ್ತವಾಗದ ಹಾಗೆ ಚಳವಳಿಗಳಲ್ಲಿ ತೊಡಗುವುದು, ಚಳವಳಿಗಳು ಸ್ವಾತಂತ್ರ್ಯ ಕಟ್ಟಾಗದ ಹಾಗೆ ಸ್ವಂತಿಕೆ ಕಾಪಾಡಿಕೊಳ್ಳುವುದು ಅವಳ ನಿರಂತರ ಮಾನವ ಬಂಧುತ್ವ ಯೋಜನೆಯಾಗಿತ್ತು ಎಂದು ಅನ್ನಿಸುತ್ತಿದೆ. ಅವಳ ಈ ಮನೋಭಾವವೇ, ಸಾಮಾಜಿಕ ಜಾಲತಾಣಗಳ ಮೂಲಕ ನವಯುಗದ ಯೌವನಿಗರ ಎದೆ ತಟ್ಟಿರಲೂ ಸಾಕು. ಮಹಿಳೆಯರು, ದಲಿತರು ಹಾಗು ಸಮಾಜದ ಇತರ ಅಧಿಕಾರಹೀನರು ತಮ್ಮ ಸ್ವಾಭಿಮಾನದ ಬದುಕಿನ ಇರುವಿಕೆಯ ಮೂಲಕವೇ ಸಾಮಾಜಿಕ ಯಜಮಾನಿಕೆಗೆ ಸವಾಲಾಗುತ್ತಾರೆ. ಇದನ್ನೂ ಗೌರಿ ಕರ್ನಾಟಕದಲ್ಲಿಯ ತನ್ನ 17 ವರ್ಷಗಳ ಬದುಕಿನ ಮೂಲಕ ಸಾಬೀತು ಮಾಡಿಹೋಗಿದ್ದು ಮಾತ್ರವಲ್ಲ, ಒಂದು ಪ್ರತಿರೋಧದ ಮಾದರಿಯನ್ನೂ ಕೊಟ್ಟುಹೋಗಿದ್ದಾಳೆ.

ಅವಳ ಜೊತೆ ಒಡನಾಡಿದ ಅನೇಕ ಸಾಮಾನ್ಯ ಮಹಿಳೆಯರಿಗೆ ಅವಳು ತಕ್ಷಣವೇ 'ಗೌರಿ ಮೇಡಂ' ಆಗಿಬಿಡುತ್ತಿದ್ದಳು! ಅವಳ 'ಹತ್ಯೆ'ಯ ಮರುದಿನ ಶಿವಮೊಗ್ಗ ಜಿಲ್ಲೆಯ ತಾಳಗುಪ್ಪದ ಹುಡುಗಿ ಪೂರ್ಣಿಮ, ಒಬ್ಬಳೆ ಹತ್ಯೆಯನ್ನು ವಿರೋಧಿಸುವ ಪ್ಲಕಾರ್ಡ್ ಹಿಡಿದುಕೊಂಡು 30 ಮೈಲಿ ದೂರದ ಸಾಗರಕ್ಕೆ ಒಂಟಿಯಾಗಿ ಮೆರವಣಿಗೆ ಹೊರಟದ್ದು ಗೌರಿಯ ಬದುಕಿನ ಧೀಮಂತಿಕೆಗೆ ಒಂದು ಪ್ರತಿಮೆಯಾಗಿದೆ. 'ಹತ್ಯೆ'ಯ ಮೂಲಕ ಅವಳ ಜಿಗುಟು ಬದುಕನ್ನು ಕೊನೆಗೊಳಿಸಿದವರು ಯಾರಾದರೂ ಇರಲಿ, ಅವಳ ಬದುಕಿನ ಪ್ರತಿಮೆಯನ್ನು ನುಚ್ಚು ನೂರು ಮಾಡಲು ಶ್ರಮಿಸುತ್ತಿರುವವರು ಯಾರು ಎನ್ನುವುದು ನಿಚ್ಚಳವಾಗಿಯೇ ಕಾಣುತ್ತಿದೆ.



● ಕೆ.ಫಣಿರಾಜ್

'ನೀನೇ ಬರೆದುಕೊಂಡ ನಿನ್ನ ಅಪೂರ್ಣ ಸ್ಕ್ರಿಪ್ಟ್'




ನನ್ನ ಪ್ರೀತಿಯ ಗೌರಿ,

ಹೇಗಿದ್ದೀಯಾ? ನೀನು ಹೋದ ಬಳಿಕ ಇಲ್ಲಿ ನಾವೆಲ್ಲ ಸೇರಿಕೊಂಡು ನಡೆಸುತ್ತಿರುವ ಬೊಬ್ಬೆ, ಗಲಾಟೆ, ಪ್ರತಿಭಟನೆಗಳನ್ನೆಲ್ಲ ನೋಡಿ ನಗುತ್ತಿಲ್ಲ ತಾನೆ? ಇಲ್ಲಿ ನಮ್ಮ ಜೊತೆಗಿದ್ದಾಗ ನಿನ್ನ ಬದುಕಿನ 'ಸ್ಕ್ರಿಪ್ಟ್'ನ್ನು ನಿನ್ನಿಷ್ಟದಂತೆ ನೀನೇ ಬರೆದುಕೊಳ್ಳುತ್ತಿದ್ದೆ. ಅಲ್ಲಿ ಹೇಗೆ? ಅಲ್ಲಿ ಹೇಗೆ?

ನೀನೊಂದು ತಪ್ಪು ಮಾಡಿಬಿಟ್ಟೆ ಗೌರಿ. ಅದೇಕೆ ಮೊನ್ನೆ ಸೆಪ್ಟಂಬರ್ ಐದರಂದು ನಿನ್ನ ಬದುಕಿನ ಸ್ಕ್ರಿಪ್ಟ್'ನ ಕೊನೆಯ ದೃಶ್ಯವನ್ನು ಬರೆಯಲು ಬೇರೆಯವರಿಗೆ ಅವಕಾಶ ಕೊಟ್ಟೆ? ಅವನಿಗೆ ಪಾಪ ನಿನ್ನ ತೂಕವೇ ಅರ್ಥವಾಗಿರಲಾರದು. ಎಡಗೈಯಿಂದ ಮೆತ್ತಗೆ ತಳ್ಳಿದರೂ ಬಿದ್ದು ಸಾಯುವ ಗುಬ್ಬಚ್ಚಿಯನ್ನು ಕೊಲ್ಲಲು, ನಾಲ್ಕು ಗುಂಡುಗಳನ್ನು ಬಳಸಬೇಕು ಎಂದು ಬರೆದುಬಿಟ್ಟ. ಸುಪಾರಿ ಪಡೆದ ನಟರಾದರೂ ಏನು ಮಾಡಿಯಾರು? ಅವರು ಹಾಗೆಯೇ ಮಾಡಿಬಿಟ್ಟರು. ತಪ್ಪು ನಿನ್ನದೇ.

ನಿನ್ನನ್ನು ಗುಂಡಿಟ್ಟು ಕೊಂದಾಗ ನಾನು ಕಲಾಕ್ಷೇತ್ರದಲ್ಲಿ ಶ್ಯಾಂಪೇನಿನ ಕೊನೆಯ ಗುಟುಕು ಚಪ್ಪರಿಸಿಕೊಳ್ಳುತ್ತಿದ್ದೆ. ಪಕ್ಕದಲ್ಲಿ ವಿಶುಕುಮಾರ್, ಜೊತೆಯಲ್ಲಿ ವಿಜಯಮ್ಮ. 'ಚೆಕಾವ್ ಟು ಶಾಂಪೇನ್' ನಾಟಕದ ಕೊನೆಯ ದೃಶ್ಯದ ಅದು. ನಾಟಕದ 'ಸ್ಕ್ರಿಪ್ಟ್'ನಲ್ಲಿ ಬರೆದಿಟ್ಟಂತೆ ಸಮರ್ಥ ನಟನೊಬ್ಬ 'ಚೆಕಾವ್'ನಂತೆ ನಟಿಸುತ್ತಾ ಶ್ಯಾಂಪೇನ್ ಗುಟುಕರಿಸುತ್ತಾ ಉಸಿರಾಟ ನಿಲ್ಲಿಸಿದ್ದ. ಅಷ್ಟರಲ್ಲಿ ನೀನು ಕೊಲೆಯಾಗಿದ್ದ ತುಣುಕು ಮಾಹಿತಿಯೊಂದು ಎದೆಗಂಟಿದ್ದ ಮೊಬೈಲ್ ನುಗ್ಗಿ ಬಂದಿತ್ತು. ರಂಗಮಂದಿರದಿಂದ ಹೊರಗೆ ಬಂದೆ. ಪತ್ರಿಕೆಯೊಂದಕ್ಕೆ ಫೋನ್ ಮಾಡಿದೆ. ಹೌದು. ನೀನು ಕೊಲೆಯಾದದ್ದು ನಿಜ! ಒಳಗೆ ಬಂದು ವಿಶುಕುಮಾರ್ ಮತ್ತು ವಿಜಯಮ್ಮ ಇಬ್ಬರಿಗೂ ಹೇಳಿದೆ. ಅವರಿಬ್ಬರೂ ದಂಗಾದರು. ಎದೆಮೇಲೆ ಕೈಯಿಟ್ಟುಕೊಂಡರು; ಮುಂದಿನ ಸರದಿ ಯಾರದು ಎಂಬಂತೆ. ರಂಗದ ಮೇಲೆ 'ಚೆಕಾವ್'ನ ಹೆಣ ಆದಾಗಲೇ ಬಿಳಿ ವಸ್ತ್ರ ಹೊದಿಸಿಕೊಂಡು ಬೆಳ್ಳಗೆ ಹೊಳೆಯುತ್ತಿತ್ತು. ನಿನ್ನನ್ನೂ ಅದೇ ಜಾಗದಲ್ಲಿ ಕಲ್ಪಿಸಿಕೊಳ್ಳುತ್ತಿರುವಾಗ ಮೈ ಜುಂ ಎಂದಿತು. ನನ್ನಿಬ್ಬರು ಹೆಣ್ಣುಮಕ್ಕಳ ನೆನಪಾಯಿತು. ನೀನು ನನಗೆ ಇಷ್ಟವಾಗಲು ಕಾರಣವೂ ಅದೇ ಮಕ್ಕಳು ಮತ್ತು ನಿನ್ನಪ್ಪ.



ಸುಮಾರು ಮೂವತ್ತೈದು ವರ್ಷಗಳೇ ಆಗಿಹೋದವು ಗೌರಿ. ಉಡುಪಿಯ ನನ್ನ ಮನೆಗೆ ಬೆಳ್ಳಂಬೆಳಗ್ಗೆ ಬಂದಿದ್ದ ನಿನ್ನಪ್ಪ ಸಂಜೆಯವರೆಗೂ ನನ್ನಿಬ್ಬರು ಮಕ್ಕಳ ಜೊತೆಗೆ ಆಟವಾಡುತ್ತಾ ಮಗುವೇ ಆಗಿಬಿಟ್ಟಿದ್ದರು. ನಾನವರಲ್ಲಿ ಅಂದೂ ಮಾತನಾಡಿದ್ದು ಕಮ್ಮಿ; ಮುಂದೆಯೂ ಅಷ್ಟೆ; ಎಷ್ಟು ಬೇಕೋ ಅಷ್ಟೆ. 'ಕತೆ ಬರೆದುಕೊಡು' ಎಂದಿದ್ದಾಗಲೂ 'ಹೂಂ' ಅಂದಿದ್ದೆನಾದರೂ ಪತ್ರಿಕೆಗೆ ಒಂದಕ್ಷರವನ್ನೂ ಬರೆದಿರಲಿಲ್ಲ. ಆದರೂ, ಅಪರೂಪಕ್ಕೊಮ್ಮೆ ಎಲ್ಲಾದರೂ ಕಂಡಾಗ ನನ್ನನ್ನು ಹೇಗಿದ್ದಿ ಎಂದು ಕೇಳದಿದ್ದರೂ, 'ಮಕ್ಕಳು ಏನು ಮಾಡುತ್ತಿದ್ದಾರೆ' ಎಂದು ವಿಚಾರಿಸದೆ ಸುಮ್ಮನಿದ್ದವರಲ್ಲ. ಅಂತಹ ಮಗು ಮನಸ್ಸಿನ ಅಪ್ಪನ ಮಗಳೆಂಬ ಕಾರಣಕ್ಕೆ ನೀನೂ ಇಷ್ಟವಾಗಿದ್ದೆ. ಅದಾದ ಸುಮಾರು ಇಪ್ಪತ್ತೈದು ವರ್ಷಗಳ ಆನಂತರ ಒಂದು ದಿನ ನೀನು ಬೆಂಗಳೂರಿನ ನನ್ನ ಮನೆಗೆ ಇದ್ದಕ್ಕಿದ್ದಂತೆ ಬಂದೆ. 'ಸ್ವಾತಂತ್ರ್ಯದ ಓಟ'ವೊಂದು ನಿನಗೆ ನೆವನ. ನಮ್ಮ ಮನೆಗೆ ಬಂದವರಲ್ಲಿ ಯಾರೂ, ನೀರು ದೋಸೆ ಮತ್ತು ಬಿರಿಯಾನಿ ತಿನ್ನದೆ ಮರಳಿದ್ದಿಲ್ಲ. ಅಪವಾದವಿದ್ದರೆ ಅವರ ದುರದೃಷ್ಟ. ಸಂಜೆಯವರೆಗೂ ಮನೆಯಲ್ಲಿದ್ದ ನೀನು ಮರಳಲು 'ಲಿಫ್ಟ್'ನೊಳಗೆ ನುಗ್ಗುವಾಗ ಗುಬ್ಬಚ್ಚಿ ಮರಿಯಂತೆ ಕಾಣಿಸಿದ್ದೆ.

ನಿನ್ನನ್ನು ಕೊಲ್ಲಿಸಿದವರೂ, ನಿನ್ನ ಕೊಲೆಗೆ ಕಂಗಾಲಾದವರೂ, ಕೊಲ್ಲಿಸಿದವರು ಯಾರೆಂಬ ಬೇರೆ ಬೇರೆ ಬಗೆಯ ಸ್ಕ್ರಿಪ್ಟ್'ಗಳನ್ನು ಬರೆಸುತ್ತಿರುವುದನ್ನು, ಬರೆಯುತ್ತಿರುವುದನ್ನು ನೀನೂ ಗಮನಿಸುತ್ತಿರಬಹುದು. ಕೊಲ್ಲಿಸಿದವರು ಯಾರೆಂಬುದು ನಿನಗಿಂತ ಹೆಚ್ಚು ಅವರಿಗೆ ತಿಳಿದಂತಿದೆ. ಆದರೆ, ಕೊಲ್ಲಿಸಿದವರು ನಿನ್ನ ವಿರೋಧಿಗಳೆಂಬುದರಲ್ಲಿ ಅವರೊಳಗೇನೂ ಭಿನ್ನಾಭಿಪ್ರಾಯಗಳಿಲ್ಲ. ನೀನು ವಿರೋಧಿಸಿದ್ದು ನಮ್ಮ ಸಂವಿಧಾನದ ವಿರೋಧಿಗಳನ್ನು, ನೀನು ವಿರೋಧಿಸಿದ್ದು ಪ್ರಜಾಪ್ರಭುತ್ವದ ವಿರೋಧಿಗಳನ್ನು. ನೀನು ವಿರೋಧಿಸಿದ್ದು ಕೋಮುವಾದವನ್ನು. ನೀನು ವಿರೋಧಿಸಿದ್ದು ಕೋಮುವಾದಿಗಳನ್ನು. ನೀನು ವಿರೋಧಿಸಿದ್ದು ದೇಶಪ್ರೇಮದ ನಟನೆಯನ್ನು ಮತ್ತು ಹಾಗೆ ನಟಿಸುವವರನ್ನು. ನಾವೆಲ್ಲ ನಂಬಿರುವಂತೆ, ಗಾಂಧೀಜಿಯ ವರನ್ನು ವಿರೋಧಿಸುವವರು ಗಾಂಧೀಜಿಯವರನ್ನು ಕೊಲ್ಲಿಸಿದರು. ಪನ್ಸಾರೆಯವರನ್ನು ವಿರೋಧಿಸಿದವರು ಪನ್ಸಾರೆಯವರನ್ನು ಕೊಲ್ಲಿಸಿದರು, ದಾಭೋಲ್ಕರನ್ನು ವಿರೋಧಿಸಿದವರು ದಾಭೋಲ್ಕರನ್ನು ಕೊಲ್ಲಿಸಿದರು, ಕಲಬುರ್ಗಿಯವರನ್ನು ವಿರೋಧಿಸಿದವರು ಕಲಬುರ್ಗಿಯ ವರನ್ನು ಕೊಲ್ಲಿಸಿದರು. ಆದ್ದರಿಂದ, ನಿನ್ನನ್ನು ಬೇರೆಯವರು ಯಾಕೆ ಕೊಲ್ಲಿಸುತ್ತಾರೆ?

ಈ ನಡುವೆ ಒಂದೆರಡು ತಮಾಷೆಗಳೂ ಪ್ರಕಟವಾಗುತ್ತಿರುವುದನ್ನು ನೀನು ಖಂಡಿತವಾಗಿ ಗಮನಿಸಿರುತ್ತಿ; ನಗಬೇಡ. ಕೊಂದವರ ಖಚಿತ ಸುಳಿವು ಕೊಟ್ಟವರಿಗೆ ಹತ್ತು ಲಕ್ಷ ರೂಪಾಯಿ ಬಹುಮಾನವಿದೆಯಂತೆ. ಹತ್ತು ಲಕ್ಷವೆಂದರೆ ಯಾರಿಗಾದರೂ ಆಸೆಯಾಗುತ್ತದೆ. ನೀನು ಪತ್ರಿಕೆಗಾಗಿ ಮಾಡಿರುವ ಸಾಲವನ್ನಾದರೂ ಮರುಪಾವತಿ ಮಾಡಬಹುದಾಗಿತ್ತು. ನಗಬೇಡ. ಪೊಲೀಸರನ್ನು ಹೊರತುಪಡಿಸಿ ಅದು ಬೇರೆ ಯಾರಿಗೂ ದಕ್ಕುವುದಿಲ್ಲ. ಸಾವನ್ನು ಬೇರೆ ಯಾರಾದರೂ ಬೇಡಿ ಪಡೆಯುತ್ತಾರೆಯೆ? ಪ್ರಚಲಿತ ಕಾನೂನಿನಂತೆ ನಗದಾಗಿ ಹಣ ಕೊಡುವುದು ಅಪರಾಧ. 'ಚೆಕ್' ಮೂಲಕ ಕೊಡುತ್ತಾರೆಯೆ? ಬರೆದ 'ಚೆಕ್' ಹರಿಯುವ ಮುನ್ನವೇ ಕೊಲ್ಲಿಸಿದವರಿಗೆ ಸುದ್ದಿ ತಲುಪುವುದಿಲ್ಲವೆ? 'ಚೆಕ್' ಪಡೆದು ಮೆಟ್ಟಿಲಿಳಿಯುವ ಮುನ್ನವೇ ಆ ರಹಸ್ಯ ಫಲಾನುಭವಿ ನಿನ್ನ ಜೊತೆಗೆ ಸರದಿ ಸಾಲಲ್ಲಿ ನಿಲ್ಲುವುದಿಲ್ಲವೆ?

ನಿನ್ನಿಂದಾಗಿ ಇಲ್ಲಿ ಕೆಲವರಿಗೆ ಪೊಲೀಸ್ ಭದ್ರತೆ ಸಿಕ್ಕಿದೆ. ಮುಂದೊಬ್ಬರು, ಹಿಂದೊಬ್ಬರು; ಮೇಲೊಬ್ಬ ಗನ್‌ಮೆನ್. ಮನಬಂದಂತೆ ವಾಕಿಂಗ್ ಹೋಗುತ್ತಿರುವವರು, ಪೊಲೀಸರ ಜೊತೆಗೆ ನಡೆದಾಡಲು ನಾಚಿಕೆಯಿಂದ ಮನೆ ಬಿಟ್ಟು ಹೊರಗೆಯೇ ಬರುತ್ತಿಲ್ಲ. ಮನೆ ಬಾಗಿಲಲ್ಲಿ ಪೊಲೀಸರು ಕಾಣಿಸಲಾರಂಭಿಸಿದ ಬಳಿಕ ಬಂಧುಗಳೂ ಅವರ ಮನೆಯತ್ತ ಸುಳಿಯುತ್ತಿಲ್ಲ. ಬಯಸಿ ಅನುಭವಿಸುವ ಗೃಹಬಂಧನ ಅದು. ನಗಬೇಡ.

ನೀನೆಷ್ಟು ದಡ್ಡಿಯೆಂದರೆ ಈ ಕಾಲದಲ್ಲೂ ನೀನು ಪೂರ್ಣಸತ್ಯದ ಬೆನ್ನುಬಿದ್ದೆ. ನಿಜವೆಂದು ಅನ್ನಿಸಿದ್ದನ್ನೆಲ್ಲ ನಿಜವೆಂದೇ ಮತ್ತೆ ಮತ್ತೆ ಬರೆದೆ. ಸುಳ್ಳು ಜಾಹೀರಾತುಗಳನ್ನು ನಿನ್ನಪ್ಪನಂತೆ ನಿರಾಕರಿಸಿ ಪತ್ರಿಕೆ ನಡೆಸಲು ಯತ್ನಿಸಿದೆ. ಆದರೆ, ನಿನ್ನನ್ನು ಇಷ್ಟಪಡುವವರು ನಿನ್ನ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದಷ್ಟು ಆಸಕ್ತಿಯಿಂದ ನಾವು ನಿನ್ನ ಪತ್ರಿಕೆ ಕೊಂಡು ಓದಲಿಲ್ಲ. ಹೀಗೆಲ್ಲ ಮಾಡಿರುವ, ಮಾಡುತ್ತಿರುವ ನಾವೆಲ್ಲ ಇನ್ನೆರಡು ದಿನಗಳಲ್ಲಿ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ಸಭೆ ಸೇರಿ 'ನ್ಯಾಯ'ಕ್ಕಾಗಿ ಒತ್ತಾಯಿಸಲಿದ್ದೇವೆ.

ನ್ಯಾಯವೆಂದರೆ ಏನು ಗೌರಿ? ಅದರಿಂದ ನಿನಗೆ ನಯಾಪೈಸೆಯಷ್ಟು ಲಾಭವಿದೆಯೆ? ಎಲ್ಲೋ ಓದಿದಂತೆ, ಗೆಳೆಯರಿಗೆ ಒಳಿತನ್ನೂ ಶತ್ರುಗಳಿಗೆ ಕೆಡುಕನ್ನೂ ನೀಡುವುದು ನ್ಯಾಯವಂತೆ. ಯಾಕೋ ಆ ಹೇಳಿಕೆ ನನಗಿಷ್ಟವಾಗುತ್ತಿಲ್ಲ. ಗೆಳೆಯರ ಜೊತೆಗೆ ಶತ್ರುಗಳಿಗೂ ಒಳಿತನ್ನು ಬಯಸುವುದು ನ್ಯಾಯವಲ್ಲವೆ? ಅಲ್ಲಿ ನಿನ್ನ ಬಳಿ ಇರುವವರೆಲ್ಲ ಹೀಗೆಯೇ ಯೋಚಿಸುತ್ತಾರಂತೆ. ನೀನು ಇಲ್ಲಿರುವಾಗಲೂ ಹಾಗೆಯೇ ಯೋಚಿಸುತ್ತಿದ್ದೆ. ನಿನ್ನನ್ನು ಸಾಮಾಜಿಕ ಜಾಲತಾಣಗಳಲ್ಲಿ ಅತಿ ಅಸಹ್ಯವಾಗಿ ಮೂದಲಿಸಿದ್ದವರನ್ನೂ ನೀನು ಪ್ರೀತಿಯಿಂದ ಕರೆದು ಮಾತನಾಡಿಸುತ್ತಿದ್ದೆ.

ಮತ್ತೊಂದು ಸುದ್ದಿಯೆಂದರೆ, ಕೊಂದವರ ಬಗೆಗಿನ ಮಹತ್ವದ ಸುಳಿವು ಸಿಕ್ಕಿದೆಯೆಂದು ನಮ್ಮ ಗೃಹ ಮಂತ್ರಿಗಳು ಪ್ರಕಟಿಸಿದ್ದು. ಎಂತೆಂತಹ ಪ್ರಕರಣಗಳನ್ನೂ ಬೇಧಿಸಿರುವ ನಮ್ಮ ಕನ್ನಡದ ಪೋಲೀಸರು ಮನಸ್ಸು ಮಾಡಿದರೆ, ಕೊಂದವರೇನೋ ಸಿಗಬಹುದು; ಆದರೆ ಕೊಲ್ಲಿಸಿದವರು?

ಕ್ಷಮಿಸು ಗೌರಿ.


ನಾನು ಬರೆಯುತ್ತಿರುವ ಈ ಸ್ಕ್ರಿಪ್ಟ್ ಕೂಡಾ ಅಪೂರ್ಣ; ಅನ್ನಿಸಿದ್ದನ್ನೆಲ್ಲ ಹೇಳಲಾಗುತ್ತಿಲ್ಲ. ಉದಾಹರಣೆಗೆ, ಕಲಬುರ್ಗಿ ಯವರ ಕೊಲೆಗಾರರ ಬಗ್ಗೆಯೂ ಮಹತ್ವದ ಸುಳಿವು ಸಿಕ್ಕಿ ವರ್ಷವೆರಡು ಕಳೆದದ್ದು, ಕೊಲ್ಲಿಸಿದವರನ್ನು ಬಲುಬೇಗ ಕಟಕಟೆಗೆ ಏರಿಸದಿದ್ದರೆ ಸಾವು ಸಂಭ್ರಮಿಸುವವರ ಹುಸಿವಾದಗಳೇ ನಿಜದ ಪಟ್ಟವೇರಬಹುದು ಇತ್ಯಾದಿಗಳು. ನಗಬೇಡ. ನಿನಗೂ ಗೊತ್ತು; ಸರಕಾರ ನಡೆಸುವುದೆಂದರೆ ಸುಲಭದ ಕೆಲಸವಲ್ಲ.

ಈ ಬರಹಕ್ಕೆ ಐನೂರು ಪದಗಳ ಮಿತಿ ವಿಧಿಸಿದ್ದಾರೆ. ಆದರೂ ಪದಮಿತಿಯನ್ನು ಸ್ವಲ್ಪ ಮೀರಿದ್ದೇನೆ. ಈ ಮಾತುಗಳು ಮುದ್ರಣವಾಗುವ ಮುನ್ನವೇ ನಿನ್ನನ್ನು ಕೊಲ್ಲಿಸಿದವರು ಯಾರೆಂಬುದು ಎಲ್ಲರಿಗೂ ತಿಳಿದುಬಿಡುತ್ತದೆ ಎಂದು ನಂಬಿರುವೆ.

ಅಪ್ಪನಿಗೆ ವಂದಿಸಿದ್ದೇನೆಂದು ಹೇಳಿಬಿಡು.

ಹಾಂ.., ಇನ್ನೊಂದು ಮಾತು. ತಪ್ಪಿಯೂ ಈ ಭೂಮಿಯ ಮೇಲೆ ಮತ್ತೊಮ್ಮೆ ಕಾಲಿಡಬೇಡ.


ನಾನೇ ಅಲ್ಲಿಗೆ ಬಂದಾಗ ವಿವರವಾಗಿ ಹೇಳುವೆ.



● ಬೊಳುವಾರು

ಗೌರಿಯ ಬದುಕಿನ ಉದ್ದೇಶವಾದರೂ ಏನು?

ಪತ್ರಕರ್ತೆ, ಹೋರಾಟಗಾರ್ತಿ ಗೌರಿ ಲಂಕೇಶ್‌ರ ಬರ್ಬರ ಹತ್ಯೆ ನಡೆದ ಬಳಿಕ ಆಕ್ರೋಶ ಮತ್ತು ಪ್ರತಿಭಟನೆಗಳು ಭುಗಿಲೆದ್ದಿವೆ. ಘನತೆ, ಬದ್ಧತೆ, ತಮಾಷೆ, ಹುರುಪು ಹೀಗೆ ಒಂದು ಸಾರ್ಥಕ ಮತ್ತು ಪರಿಪೂರ್ಣ ಬದುಕನ್ನು ಬದುಕಿದ ಜೀವವೊಂದನ್ನು ಸ್ಮರಿಸುವ, ಅವರ ಸಾವಿಗೆ ಶೋಕಿಸುವ, ಬದುಕಿಗೆ ಸಂಭ್ರಮಿಸುವ ಈ ಹೊತ್ತು ನಾವು ಕೇಳಬೇಕಾದುದು ಒಂದೇಒಂದು ಪ್ರಶ್ನೆ- ಗೌರಿಯ ಬದುಕಿನ ಉದ್ದೇಶವಾದರೂ ಏನು?



ಹಿಂದೂ ರಾಷ್ಟ್ರಕ್ಕೆ ವಿರೋಧ

"... ಸಮಸಮಾಜವೊಂದನ್ನು ಸ್ಥಾಪಿಸುವ ದಿಕ್ಕಿನಲ್ಲಿ ಬಸವಣ್ಣ ಮತ್ತು ಅಂಬೇಡ್ಕರ್ ಅವರ ಹೋರಾಟವನ್ನು ನನ್ನದೇ ಆದ ಒಂದು ಪುಟ್ಟ ರೀತಿಯಲ್ಲಿ ಮುಂದುವರಿಸುವುದು ನನ್ನ ಸಾಂವಿಧಾನಿಕ ಕರ್ತವ್ಯ ಎಂದು ನಾನು ಭಾವಿಸುತ್ತೇನೆ" ಎಂದು ಗೌರಿ ಲಂಕೇಶ್ ಗಾಢವಾಗಿ ನಂಬಿದ್ದರು, ನಂಬಿದಂತೇ ಬದುಕಿದರು.

ಗೌರಿಯ ಪಾಲಿಗೆ ವೈಯಕ್ತಿಕ ಎಂಬುದು ಪ್ರತ್ಯೇಕವಾಗಿರಲಿಲ್ಲ; ವೈಯಕ್ತಿಕವೇ ಸಾಮಾಜಿಕ ಬದುಕು. ಆಕೆಯನ್ನು ಚಾಮರಾಜಪೇಟೆಯ ಲಿಂಗಾಯತ ಸ್ಮಶಾನದಲ್ಲಿ ಸಮಾಧಿ ಮಾಡಲಾಗಿದೆ. ಆಕೆ ಯಾವತ್ತೂ ಮನದ ಮಾತನ್ನು ಸ್ಪಷ್ಟವಾಗಿ ಹೇಳುವ ಒಬ್ಬ ಹೆಮ್ಮೆಯ ಲಿಂಗಾಯತಳಾಗಿದ್ದಳು. ಆಕೆಯ ಇತ್ತೀಚಿನ ಒಂದು ಬರಹವು ಲಿಂಗಾಯತರು ಪ್ರತ್ಯೇಕ ಧರ್ಮ ಎಂಬ ಸ್ಥಾನಮಾನ ಪಡೆಯುವುದನ್ನು ಬಲವಾಗಿ ಪ್ರತಿಪಾದಿಸಿತ್ತು. ಬಸವಣ್ಣನ ಅನೇಕ ಅನುಯಾಯಿಗಳು ಪ್ರತಿಪಾದಿಸುವ ಹಾಗೆಯೇ ಲಿಂಗಾಯತರು ಹಿಂದೂಗಳಾಗಿರಲಿಲ್ಲ, ಈಗಲೂ ಆಗಿಲ್ಲ ಎಂದು ಆಕೆ ಪ್ರತಿಪಾದಿಸಿದ್ದಳು. ಖಂಡಿತವಾಗಿಯೂ ಇದು ಪ್ರಬಲವಾಗಿರುವ ಮತ್ತು ಆಕ್ರಮಣಕಾರಿ ಬಹುಸಂಖ್ಯಾತ ಬಲಪಂಥೀಯ ಗುಂಪಿಗೆ ಪಥ್ಯವಾಗುವ ಸಂಗತಿಯಲ್ಲ.

ಆಕೆಯನ್ನು ಗುಂಡಿಕ್ಕಿ ಸಾಯಿಸುವ ಕೆಲವೇ ಗಂಟೆಗಳ ಮೊದಲು ತನ್ನ ತಂದೆ ದಿವಂಗತ ಪತ್ರಕರ್ತ ಲಂಕೇಶ್ ಅವರೊಂದಿಗಿನ ಒಂದು ಛಾಯಾಚಿತ್ರವನ್ನು ಗೌರಿ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಳು. 'ಬಹುವಾಗಿ ನಮಗೆ ಸಿಗದಿರುತ್ತಿದ್ದ ತಂದೆ, ಆದರೆ ನನ್ನ ಬದುಕಿನ ಅದ್ಭುತ ಗುರು - ನನ್ನ ಅಪ್ಪ!! ಶಿಕ್ಷಕರ ದಿನದ ಶುಭಾಶಯಗಳು' ಎಂದು ಆಕೆ ಬರೆದಿದ್ದಳು. ಇದು ಆಕೆ ಕೊಲ್ಲಲ್ಪಡುವ ಕೆಲವೇ ಗಂಟೆಗಳ ಮೊದಲು. ಗೌರಿಯು ತನ್ನ ತಂದೆಯ ಮಗಳು ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಾಗಿದ್ದಳು.

ಪ್ರತಿರೋಧದ ವೇದಿಕೆಗಳ ನಿರ್ಮಾಣ

'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಓರ್ವ ಸ್ಥಾಪಕ ಸದಸ್ಯಳಾಗಿ ಆಕೆ ಮತ್ತು ಹೋರಾಟಗಾರರು, ಲೇಖಕರು, ರಂಗಕಲಾವಿದರು ಮತ್ತು ಸಂಗೀತಗಾರರು ಹೀಗೆ ಸುಮಾರು 10,000 ಕನ್ನಡಿಗರು ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿ ಪವಿತ್ರಸ್ಥಳವನ್ನು ದಕ್ಷಿಣದ ಅಯೋಧ್ಯೆಯಾಗಿ ಪರಿವರ್ತಿಸುವ ಪ್ರಯತ್ನ ಸಫಲವಾಗದಂತೆ ಬಲಿಷ್ಠ ತಡೆಗೋಡೆಯಾಗಿ ನಿಂತರು. ಈ ವಿಷಯದಲ್ಲಿ 'ಕರ್ನಾಟಕ ಕೋಮುಸೌಹಾರ್ದ ವೇದಿಕೆ' ಮತ್ತು 'ಸಿಟಿಜನ್ಸ್ ಫಾರ್ ಜಸ್ಟಿಸ್ ಅಂಡ್ ಪೀಸ್' (ನ್ಯಾಯ ಮತ್ತು ಶಾಂತಿಗಾಗಿ ನಾಗರಿಕರು) ಸಂಘಟನೆಗಳು ಜಂಟಿಯಾಗಿ ಸುಪ್ರೀಂಕೋರ್ಟಿನಲ್ಲಿ ದಾವೆ ಹೂಡಿದವು.



ವಿದ್ಯಾರ್ಥಿ ರಾಜಕೀಯ ಮತ್ತು ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ಇವು ಗೌರಿಯ ಹೃದಯಕ್ಕೆ ಹತ್ತಿರದ ಸಂಗತಿಗಳಾಗಿದ್ದವು. ಕನ್ಹಯ್ಯಾ ಕುಮಾರ್ ಮತ್ತು ಉಮರ್ ಖಾಲಿದ್ ಅವರೊಂದಿಗಿನ ಗೌರಿಯ ವಿಶಿಷ್ಟ ಸಂಬಂಧಕ್ಕೆ ಇದೇ ಹಿನ್ನೆಲೆ. ಜಾತಿವ್ಯವಸ್ಥೆಯ ಮೂಲಕ ನಡೆಯುವ ತುಳಿತದ ವಿರುದ್ಧದ ಸಂಘರ್ಷದ ಬಗೆಗಿನ ಆಕೆಯ ಆಳ ಬದ್ಧತೆಯನ್ನು ಜಿಗ್ನೇಶ್ ಮೇವಾನಿಯೊಂದಿಗಿನ ತಣ್ಣಗಿನ ಒಡನಾಟದಲ್ಲಿ ಕಾಣಬಹುದು. ಆಕೆಯ ಫೇಸ್‌ಬುಕ್ ಪುಟದಲ್ಲಿ ರೋಹಿತ್ ವೇಮುಲನ ಚಿತ್ರವಿದೆ. ದಲಿತ ವಿದ್ಯಾರ್ಥಿನಿ ಡೆಲ್ಟಾ ಮೇಘವಾಲ್ ಮೇಲಿನ ಅತ್ಯಾಚಾರದ ವಿರುದ್ಧ ಬೆಂಗಳೂರಿನಲ್ಲಿ ಹೋರಾಟದ ನೇತೃತ್ವ ವಹಿಸಿದ್ದವರಲ್ಲಿ ಗೌರಿಯೂ ಸೇರಿದ್ದಳು. ರಾಷ್ಟ್ರೀಯ ಮೀನುಗಾರರ ವೇದಿಕೆಯಿಂದ ಹಿಡಿದು, ಭಾರತದ ಬೃಹತ್ ಅಸಂಘಟಿತ ವಲಯವನ್ನು ಸಂಘಟಿಸಲು ದುಡಿದ ಹೊಸ ಕಾರ್ಮಿಕ ಸಂಘದ ಉಪಕ್ರಮದವರೆಗೆ, ಇತರ ನವಉದಾರೀಕೃತ ಅಭಿವೃದ್ಧಿಯ (ದೊಡ್ಡ ಅಣೆಕಟ್ಟುಗಳು) ವಿರುದ್ಧದ ರಾಷ್ಟ್ರೀಯ ವೇದಿಕೆಗಳವರೆಗೆ ಮತ್ತು ಶಿಕ್ಷಣದ ಹಕ್ಕಿನ (ಎಐಎಫ್‌ಆರ್‌ಟಿಇ) ವರೆಗೆ, ಎಲ್ಲಾ ಜನಪರ ಸಂಘಟನೆಗಳೊಂದಿಗಿನ ಆಕೆಯ ಸಹಭಾಗಿತ್ವ, ಜನಪರ ಹೋರಾಟಗಳಲ್ಲಿನ ಪಾಲ್ಗೊಳ್ಳುವಿಕೆ ವಾಸ್ತವದಲ್ಲಿ ಒಂದು ಒಗ್ಗಟ್ಟಿನ ಪ್ರತಿರೋಧ ರೂಪಿಸುವ ಅಗತ್ಯವನ್ನು ಎತ್ತಿ ತೋರಿಸುತ್ತವೆ.

ಶಾಂತಿ ಮತ್ತು ಸೌಹಾರ್ದ ಸ್ಥಾಪನೆಯ ಯತ್ನಗಳು

2013ರಲ್ಲಿ ಕರ್ನಾಟಕದಲ್ಲಿ ಗೌರಿ ಲಂಕೇಶ್ ಅವರು ಕರ್ನಾಟಕದ ಕೆಲ ಧೀಮಂತ ಹಿರಿಯರೊಂದಿಗೆ ಸೇರಿಕೊಂಡು 'ಸಿಟಿಜನ್ಸ್ ಇನಿಶಿಯೇಟಿವ್ ಫಾರ್ ಪೀಸ್' (ಶಾಂತಿಗಾಗಿ ನಾಗರಿಕ ಉಪಕ್ರಮ) ಸಂಘಟನೆಯನ್ನು ರಚಿಸಿದರು. ತೀವ್ರವಾದಿ ಹಿಂಸಾಚಾರಕ್ಕೆ ಇಳಿದಿರುವವರ ಪುನರ್ವಸತಿಗಾಗಿ ಇರುವ ಕೇಂದ್ರ ಸರಕಾರದ 2009ರ ಕಾರ್ಯನೀತಿಯು ಅನುಷ್ಠಾನವಾಗುವಂತೆ ನೋಡಿಕೊಳ್ಳುವುದು ಇದರ ಉದ್ದೇಶ. ಎ.ಕೆ. ಸುಬ್ಬಯ್ಯ ಎಚ್.ಎಸ್. ದೊರೆಸ್ವಾಮಿ ಮತ್ತು ಗೌರಿ ಲಂಕೇಶ್ ಸರಕಾರದ ಸಮಿತಿಯ ಭಾಗವಾಗಿದ್ದರು. ಈ ಹೆಜ್ಜೆಯ ಫಲವಾಗಿ ಇದುವರೆಗೆ ಒಂಬತ್ತು ಮಂದಿ ನಕ್ಸಲೀಯರು ಶರಣಾಗಿ ಮುಖ್ಯವಾಹಿನಿಗೆ ಮರಳಿದ್ದಾರೆ.

ಯಾವುದೇ ಒಂದು ಪ್ರಬುದ್ಧ ಸಮಾಜದಲ್ಲಿ ಶಾ[illegible] ಮತ್ತು ಅಹಿಂಸೆಯನ್ನು ಖಾತರಿಪಡಿಸಲು ನಾಗರಿಕ[illegible] ಮಾಡುವ ಯತ್ನಗಳನ್ನು ಉದಾರವಾಗಿ ಸ್ವಾಗತಿಸಬೇ[illegible] ಆದರೆ ಕೇಂದ್ರ ಮಾಹಿತಿ ತಂತ್ರಜ್ಞಾನ ಮಂತ್ರಿ ರವಿಶಂ[illegible] ಪ್ರಸಾದರಂಥವರು, ಕೆಟ್ಟ ಅಭಿರುಚಿಯ ಮತ್ತು ನಿಂದನಾ[illegible] ಸಾಮಾಜಿಕ ಮಾಧ್ಯಮ ಟ್ರಾಲ್‌ಗಳನ್ನು ಟೀಕಿಸುತ್ತಾರೆ ಪ[illegible] ಹೀಗೆ ಟೀಕಿಸಿದ ಎರಡೇ ದಿನಗಳಲ್ಲಿ 'ಗೌರಿಯ ನಕ್ಸ[illegible] ಸಂಬಂಧ'ದ ಬಗ್ಗೆ ತಪ್ಪು ಮಾಹಿತಿ ಹರಡುವ ಘನತೆ-ಹೀ[illegible] ಕೆಲಸ ಮಾಡುತ್ತಾರೆ! ಗೌರಿಯ ಹತ್ಯೆಯ ನಂತರದ ಕದನ[illegible] ಕೇವಲ ಗೌರಿ ಮೈಗೂಡಿಸಿಕೊಂಡಿದ್ದ ಘನತೆ ಮ[illegible] ವಿನಯಕ್ಕಾಗಿನ ಕದನ ಮಾತ್ರವಲ್ಲ, ಬದಲಿಗೆ, ಕೆಚ್ಚು ಮ[illegible] ನೇರನಡೆ ನಿಲುವು ಹಾಗೂ ಹೇಡಿತನ ಮತ್ತು ಮಿಥ್ಯಾರೋ[illegible] ನಡೆಗಳ ನಡುವಣ ಕದನವೂ ಹೌದು.

ಹತ್ಯೆ ಮಾಡಿದ್ದಾದರೂ ಯಾರು?

ಈ ಪ್ರಶ್ನೆಯನ್ನು ಉತ್ತರಿಸಬೇಕಿರುವುದು ಪೊಲೀಸ[illegible] ಹೌದಾದರೂ (ಅವರು ನಿರ್ಭೀತಿಯಿಂದ ಅಥ[illegible] ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತಾರೆ ಎಂದು ಆಶಿಸೋ[illegible] ಕೆಲವೊಂದು ಸೂಚಕಗಳು ಇಲ್ಲಿ ಗಂಭೀರ ಪ್ರಶ್ನೆಗಳ[illegible] ಎತ್ತುತ್ತವೆ ಮತ್ತು ಕಳವಳಕಾರಿ ಸಂಗತಿಗಳನ್ನು ಮುಂದಿಡುತ್ತ[illegible]


ಕಳೆದ ವರ್ಷದ ಕೊನೆಯ ಭಾಗದಲ್ಲಿ, 2008[illegible] ಪ್ರಕಟಿಸಲಾದ ವರದಿಯೊಂದರ ಸಂಬಂಧ ಕ್ರಿಮಿನ[illegible] ಮಾನನಷ್ಟದ ಎರಡು ಪ್ರಕರಣಗಳಲ್ಲಿ ಗೌರಿಯನ್ನು ದೋ[illegible] ಎಂದು ಘೋಷಿಸಲಾಯಿತು. ಮಾನನಷ್ಟ ಮೊಕದ್ದಮೆಯ[illegible] ಹೂಡಿದ್ದು ಬಿಜೆಪಿ ನಾಯಕ, ಧಾರವಾಡದ ಸಂಸದ ಪ್ರ[illegible] ಜೋಷಿ ಮತ್ತು ಇನ್ನೋರ್ವ ಬಿಜೆಪಿ ನಾಯಕ ಉಮೇ[illegible] ಜೋಷಿ. ಆಕೆಯ ಸಾವಿನ ಬೆನ್ನಿಗೇ "ಆರ್‌ಎಸ್‌ಎಸ್ ವಿ[illegible] 'ಅಂತಹ' ಲೇಖನಗಳನ್ನು ಪ್ರಕಟಿಸದಿರುತ್ತಿದ್ದರೆ ಬದುಕಿಕೊಳ್ಳುತ್ತಿದ್ದಳು" ಎಂದು ಬಿಜೆಪಿ ಶಾಸಕ, ಮ[illegible] ಮಂತ್ರಿ ಜೀವರಾಜ ಹೇಳುತ್ತಾನೆ. ಇಲ್ಲಿ ಅವರು 'ಅಂ[illegible] ವರದಿ' ಎಂದು ಹೇಳಿದ್ದು 'ಚಡ್ಡಿಗಳ ಮಾರಣಹೋ[illegible] ಎಂಬ ಶೀರ್ಷಿಕೆಯನ್ನು ಹೊಂದಿದ್ದ ಗೌರಿ[illegible] ಸತ್ಯನಿಷ್ಠುರವಾದ ವರದಿಯ ಬಗ್ಗೆಯೆ.

ಗೌರಿಯ ನ್ಯಾಯವಾದಿ ಬಿ.ಟಿ.ವೆಂಕಟೇಶ್ ಪ್ರ[illegible] ಇದು ಹಿಂದೂ ಭಯೋತ್ಪಾದಕ ಸಂಘಟನೆಗಳ ಕು[illegible] ಮತ್ತು ವ್ಯವಸ್ಥಿತ ಕೃತ್ಯ. ಹಿಂದುತ್ವ ಶಕ್ತಿಗಳು ನ್ಯಾಯಾಲಯ[illegible] ದಾವೆ ಹೂಡುವುದರ ಸಹಿತ ಬಹುತೇಕ ಎಲ್ಲ ತೆರನ[illegible] ತಂತ್ರಗಳನ್ನೂ ಬಳಸುತ್ತವೆ. ಅನೇಕ ಕೇಸುಗಳ[illegible] ನಿಭಾಯಿಸುವಾಗ ಹೈರಾಣಾಗಿ ಹೋಗಿ ಇತರ ಕೆಲಸಗ[illegible] ತೊಡಗುವುದು ಸಾಧ್ಯವಾಗುವುದಿಲ್ಲ ಎಂಬುದು ಅವ[illegible]

ನೀನು ಬರಿ ರಂಜಿಸಿದ್ದಿದ್ದರೆ...

ಟ್ಯಾಬ್ಲಾಯ್ಡ್ ಪತ್ರಿಕೋದ್ಯಮದ ಕುರಿತಂತೆ ನನ್ನ ಹತ್ತು ವರ್ಷಗಳ ಸಂಶೋಧನೆಯಲ್ಲಿ ಕಂಡುಕೊಂಡ ಸಂಗತಿಯೆಂದರೆ, ಭಾರತದ ಬೇರ್ಯಾವ ಭಾಷೆಯಲ್ಲೂ ಕನ್ನಡದಲ್ಲಿರುವಷ್ಟು ಟ್ಯಾಬ್ಲಾಯಿಡ್‌ಗಳಿಲ್ಲ. ಇವುಗಳಲ್ಲಿ ಪೊಲಿಟಿಕಲ್ ಟ್ಯಾಬ್ಲಾಯಿಡ್ಸ್ ಇವೆ, ಪೋರ್ನೋಗ್ರಫಿಕ್ ಟ್ಯಾಬ್ಲಾಯಿಡ್ಸ್ ಇವೆ ಮತ್ತು ಕಮರ್ಷಿಯಲ್, ಬ್ಲ್ಯಾಕ್‌ಮೇಲ್‌ಗೆ ಸೀಮಿತವಾದ ಟ್ಯಾಬ್ಲಾಯಿಡ್ಸ್ ಕೂಡ ಇವೆ. ಆದರೆ, ಬರಿ ಪುರುಷ ಸಂಪಾದಕರಷ್ಟೆ ಹೊಂದಿದ್ದ ಈ ಕನ್ನಡ ಟ್ಯಾಬ್ಲಾಯಿಡ್ ಪತ್ರಿಕಾಲೋಕಕ್ಕೆ ಒಂದು ದಿಟ್ಟ ದನಿಯಾಗಿ ನಿಂತು, ಸ್ಟಿರಿಯೊಟೈಪ್ ಅನ್ನು ಮುರಿದ ಏಕೈಕ ಮಹಿಳಾ ಸಂಪಾದಕಿಯೆಂದರೆ ಅದು ಗೌರಿ ಲಂಕೇಶ್!

ಲಂಕೇಶ್‌ರ ನಿಧನದ ನಂತರ ಅವರ ಸಂಪಾದಕತ್ವದಲ್ಲಿ ಬರುತ್ತಿದ್ದ 'ಪತ್ರಿಕೆ'ಯ ದಿನಗಳಿಂದ ಅವರನ್ನು ನಾನು [illegible] ಗುರುವಿಟ್ಟೆನಾದರು; 'ಲಂಕೇಶ್ ಪತ್ರಿಕೆ' ಕುರಿತೇ ಸಂಶೋಧನೆಗೆ ತೊಡಗಿದಾಗಿನಿಂದ ಗೌರಿಯನ್ನು ಹಲವು ಬಾರಿ ಭೇಟಿಯಾಗುವ ಸಂದರ್ಭ ಒದಗಿಬಂತು. 2006ರ ಇಸವಿ. ನಾನು, ಹುಲಿಕುಂಟೆ ಮೂರ್ತಿ ಮತ್ತು ಮಹೇಶ್ ಮೂರು ಜನ ವಿದ್ಯಾವಂತ ನಿರುದ್ಯೋಗ ಯುವಕರಾಗಿದ್ದ ಆ ಕಾಲದಲ್ಲಿ, 'ಗೌರಿ ಲಂಕೇಶ್' ಕಚೇರಿಯಿಂದಲೇ ಪ್ರಕಟವಾಗುತ್ತಿದ್ದ 'ಗೈಡ್' ಪತ್ರಿಕೆಗೆ ಇಂಗ್ಲಿಷ್‌ನಿಂದ ಕನ್ನಡಕ್ಕೆ ಸಾಮಾನ್ಯ ಜ್ಞಾನವನ್ನು ಅನುವಾದಿಸುವ ಅರೆಕಾಲಿಕ ಕೆಲಸದಲ್ಲಿ ತೊಡಗಿಕೊಂಡಿದ್ದೆವು. ಆಗ ಆ ಕಚೇರಿಯಲ್ಲಿ ಕೂತು, ಅದೇ ಕೋಣೆಯಿಂದಲೆ ಲಂಕೇಶ್‌ರು ತಮ್ಮ ಪತ್ರಿಕೆಯ ಮೂಲಕ ಇಡೀ ನಾಡಿಗೆ ಸ್ಪಂದಿಸಿ ಮೂಡಿಸುತ್ತಿದ್ದ ಸಂಚಲನಗಳನ್ನು ನೆನೆದು ಪುಳಕಿತಗೊಳ್ಳುತ್ತಿದ್ದೆವು. ದಿನಪತ್ರಿಕೆಗಳಲ್ಲಿ ಇಂಟರ್ನ್, ಟ್ರೇನಿ ಆಗಿ ಕೆಲಸ ಮಾಡಿದ್ದ ನನಗೆ, ಈ ಟ್ಯಾಬ್ಲಾಯಿಡ್ ಕಚೇರಿಯ ಇನ್‌ಫಾರ್ಮಲ್ ಆದ, ಕೆಲಸ ಮಾಡುತ್ತಲೇ ನಗೆ ಚಟಾಕಿ ಹಾರಿಸಬಹುದಾದ, ಮುಖ್ಯವಾಗಿ ನೇರವಾಗಿ ಸಂಪಾದಕರ ಚೇಂಬರ್‌ಗೆ ಹೋಗಿ ಮಾತನಾಡಬಹುದಾದ ವಾತಾವರಣ ತುಂಬಾ ಹಿಡಿಸಿತು. ಅಷ್ಟೇಬೇಗ ಗೌರಿ ಮೇಡಂರ ಹುಸಿಕೋಪ, ಸಿಡುಕುತನ ಮತ್ತು ತಾಯ್ತನದ ಪರಿಚಯವಾಗಿದು ಭಾನುವಾರದ



ಬಾಡೂಟ ಹೊತ್ತಲ್ಲಿ, ಅನುವಾದದ ಕೆಲಸ ಮುಗಿಸಿ ಅಲ್ಲಿಂದ ಹೊರಡಬೇಕಾದರೆ, ಲಂಕೇಶರ ಅಭಿನಂದನಾ ಪುಸ್ತಕ 'ತಲೆಮಾರಿನ ತಳಮಳ' ಕೈಯಲ್ಲಿಟ್ಟು, 'ಮರಿ, ಯಾವಾಗಾದ್ರು ಕೆಲಸ ಮಾಡ್ಬೇಕು ಅನಿಸಿದರೆ, ಆಫೀಸ್‌ಗೆ ಬಂದುಬಿಡು' ಅಂತ ಬೀಳ್ಕೊಟ್ಟರು.

ನಾನು 'ಲಂಕೇಶ್ ಪತ್ರಿಕೆ' ಕುರಿತು ಸಂಶೋಧನೆಗೆ ತೊಡಗಿಕೊಂಡಾಗ ಮತ್ತೆ ಮತ್ತೆ ಹಳೆಯ ಸಂಚಿಕೆಗಳ ಪರಿಶೀಲನೆಗೋಸ್ಕರ ಆಫೀಸ್‌ಗೆ ಹೋಗಬೇಕಾದ ಸಂದರ್ಭ ಬರುತ್ತಿತ್ತು, ಆಗೆಲ್ಲ ಗೌರಿ ಮೇಡಂ ನನ್ನನ್ನು ಕರೆದು, ಸಂಶೋಧನೆಯ ಪ್ರಗತಿ ಬಗ್ಗೆ ವಿಚಾರಿಸೋರು. ಹಳೆಯ ಸಂಚಿಕೆಗಳನ್ನ ಜೆರಾಕ್ಸ್ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತಿದ್ದರು. 'ಪತ್ರಿಕೆ'ಯ ಹಳೆಯ ಸಂಚಿಕೆಗಳನ್ನ ಓದುತ್ತಾ ಅಭಿರುಚಿಗಳನ್ನು ಪ್ರಕಟಣೆಯಾಗಿಸುವ ಕಲೆಯನ್ನು ಲಂಕೇಶರು ಹೇಗೆ ಯಶಸ್ವಿಯಾಗಿ ಬಳಸಿಕೊಂಡರು ಎಂಬುದನ್ನು ಅರಿಯುತ್ತಲೆ, ಅದರ ವಾರಸುದಾರಳಾಗಿದ್ದ ಗೌರಿ ಮೇಡಂರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೆ. ಈ ನಾಡಿನ ಜನಸಮೂಹಗಳ ಇತಿಹಾಸ, ಭಾಷೆ, ಜಾತಿ ಮತ್ತು ಪಕ್ಷ ರಾಜಕಾರಣ, ಸಾಹಿತ್ಯ ಧರ್ಮ, ಹೊರ ಜಗತ್ತಿನ ಅರಿವಿಲ್ಲದೆ ಹೋದರು ಕೇವಲ ಲಂಕೇಶರ 'ಪತ್ರಿಕೆ'ಯ ಯಶಸ್ಸಿನಿಂದ ಪ್ರೇರಣೆಗೊಂಡು ಅಂತಹ ಪತ್ರಿಕೆಗಳ ಆರ್ಥಿಕ ಜ್ಞಾನವಿಲ್ಲದ ಅನೇಕರು ಟ್ಯಾಬ್ಲಾಯಿಡ್ ಪತ್ರಿಕೆಗಳನ್ನು ಆರಂಭಿಸಿ ಹಣ ಕಳೆದುಕೊಂಡಿದ್ದು ನೆನಪಾಯಿತು.

ವರದಿಯಿಂದ ಹಿಡಿದು ಸಂಪಾದಕೀಯದವರೆಗೂ ಒಂದು ಟೋನ್ ಅಳವಡಿಸಿಕೊಂಡು, ಆದಷ್ಟು ಹೈಬ್ರಿಡ್ ಭಾಷೆಯಲ್ಲಿ ಸುದ್ದಿ ಬರೆದು, ಓದುಗನನ್ನು ಓಲೈಸುತ್ತ ಆತನ ಭಾವನೆಗಳನ್ನು ಕೆರಳಿಸುವ ಹೂರಣ ಪ್ರಕಟಿಸುವ ಅನೇಕ ಪ್ಲೆಜರ್‌ಶೀಟ್ಸ್ ನಮ್ಮಲ್ಲಿವೆ. ಏಕವ್ಯಕ್ತಿ ಸ್ಥಾಪಿತ ಪ್ರಕಟಣೆಗಳಾದ ಇವು ತಮ್ಮ ಶೂರತ್ವ ಕಳೆದುಕೊಂಡು ಯಾವುದೋ ಪಕ್ಷದ ಅಥವಾ ರಾಜಕಾರಣಿಯ ಹಣ ಬೆಂಬಲಕ್ಕಾಗಿ ಹಾತೊರೆಯುವ ಜಾಹೀರಾತು ಹಾಳೆಗಳ[illegible] ಕೊನೆಗೊಂಡಿವೆ. ನಗರ ಕೇಂದ್ರಿತ ಸೆಮಿ-ಲಿಟರೇಟ್ಸ್ ಮತ್ತ[illegible] ಎಮೋಷನ್ಸ್ ಬಳಸಿಕೊಂಡು, ಆಕರ್ಷಕ ಟ್ಯಾಗ್ ಲೈನ್‌ನೊಂ[illegible] ಬರುವ ಇವುಗಳು ಒಂದು ಸುದ್ದಿಯನ್ನು ಕೂಡ ಕಥೆಯ[illegible] ಹೇಳುವುದನ್ನು ರೂಢಿಸಿಕೊಂಡಿವೆ. ಜಾಹೀರಾತು ಪ್ರಕಟಿಸದಿದ್ದ[illegible] ಸಂಪಾದಕರ ಆತ್ಮರತಿಗಾಗಿ ಮೀಸಲಿರುವ ಸಂಪಾದಕೀ[illegible] ಪುಟ, ಸಿನಿಮಾ ಲೋಕದ ಗಾಸಿಪ್‌ಗಳು, ಕೊಲೆ, ಲೈ[illegible] ಅಪರಾಧದ ವಿಜೃಂಭಣೆಯ ವರದಿ, ಅರೆಬೆತ್ತಲೆ ಚಿತ್ರ[illegible] ಮಾನನಷ್ಟದ ಸುದ್ದಿಗಳಿಂದ ತುಂಬಿರುವ ಇಂತಹ ಹ[illegible] ಪತ್ರಿಕೆಗಳ ನಡುವೆ, 'ಗೌರಿ ಲಂಕೇಶ್' ಬರಿ ಓದುಗ[illegible] 'ರಂಜಿಸಲು', ಇಲ್ಲಾ ಅವರಿಗೆ ಗಹನವಾದುದ್ದೇನೊ 'ಬೋಧಿಸ[illegible] ಪತ್ರಿಕೆಯನ್ನು ಬಳಸಲಿಲ್ಲ. ಹಲವು ಸಲ ತಮ್ಮ ಸಂಪಾದಕೀಯ[illegible] ಅಭಿಪ್ರಾಯಶೂನ್ಯತೆ ವ್ಯಕ್ತಪಡಿಸಿದ್ದರೂ; ಆಕೆಯ ಓದಿನ ವ[illegible] ಸಮುದಾಯಗಳ ಜೊತೆಗಿನ ಒಡನಾಟ ಮತ್ತು ಕಾಳಜಿಗೆ ತೊಡಗಿಸಿಕೊಂಡ ಇತ್ತೀಚಿನ ಹಲವು ಸಾಮಾಜಿಕ ಧಾರಿ[illegible] ನಿದರ್ಶನ.

ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿ ಮಾತನಾಡಬ[illegible] ಬರೆಯಬಲ್ಲ ಆಕೆ, ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂ[illegible] ಆಫ್ ಮಾಸ್ ಕಮ್ಯುನಿಕೇಷನ್‌ನಲ್ಲಿ ಓದುವ ದಿನಗಳಿಂದಲ[illegible] ಜೆ.ಎನ್.ಯುನ ಒಡನಾಟ, ಓದಿನಿಂದ ಪ[illegible] ಆಲೋಚನಾಕ್ರಮ ಒಂದು ಹಂತಕ್ಕೆ ನಾಡಿನ ನಕ್ಸ[illegible] ಚಳವಳಿಯನ್ನು ಸಹಾನುಭೂತಿಯಿಂದ ಕಾಣುವ[illegible] ಮಾಡಿದರೂ, ಅನಂತರ ಅದರ ಬಗ್ಗೆ ಭಿನ್ನ ನಿಲ[illegible] ತಾಳಿದ್ದು ಇದೆ. ಆಕೆ ಅಂಬೇಡ್ಕರರನ್ನು ತಡವಾಗಿ ಓದು[illegible] ವುದಕ್ಕೆ ಮರುಗಿದ್ದಾಗಿ ಸ್ನೇಹಿತರು ನೆನೆಯುತ್ತಾರೆ. ಪತ್ರಿ[illegible] ದ್ಯೋಮ ಅನ್ನೋದೆ ಗಂಡಸರು ಮಾಡಬಹುದಾದ ಸಾ[illegible] ಕೆಲಸ ಎಂಬ ಅನಿಸಿಕೆಯನ್ನು ಮರುಪರಿಶೀಲಿಸು[illegible] ಕನ್ನಡದಲ್ಲಿ ಟ್ಯಾಬ್ಲಾಯಿಡ್ ಒಂದರ ಸಂಪಾದಕಿಯಾಗ[illegible] ಆಕೆಯ ನಿರ್ಭಯತೆಗೆ ಸಾಕ್ಷಿ. ಇತರೆ ಟ್ಯಾಬ್ಲಾಯಿ[illegible] ಸಂಪಾದಕರಂತೆ ಆತ್ಮರಕ್ಷಣೆಗೆಂದು ಆಯುಧ ಇಟ್ಟುಕೊ[illegible] ಲಿಲ್ಲ, ತನ್ನದೆ ರಕ್ಷಣಾಪಡೆಗಳನ್ನು ಕಟ್ಟಿಕೊಳ್ಳಲಿಲ್ಲ. ತ[illegible] ತಾನು ಹಲವು ಸಮಾಜಮುಖಿ ಚಟುವಟಿಕೆಗಳಲ್ಲಿ ತೊ[illegible]

ಚೆನ್ನಾಗಿ ಗೊತ್ತು, ಅವರಲ್ಲಿ ಎಲ್ಲೆಲ್ಲೂ ನ್ಯಾಯವಾದಿಗಳಿದ್ದಾರೆ. ಪ್ರತೀ ತಾಲೂಕಿನಲ್ಲಿಯೂ ಕನಿಷ್ಠಪಕ್ಷ ಐದು ನ್ಯಾಯವಾದಿಗಳಿದ್ದು ಅವರು ಉಚಿತವಾಗಿ ಸೇವೆ ಒದಗಿಸುತ್ತಾರೆ. ಕುತೂಹಲಕರ ಸಂಗತಿಯೆಂದರೆ, ತನ್ನ ಕೋರ್ಟು ಕೇಸುಗಳಿಗಾಗಿ ರಾಜ್ಯದ ಉದ್ದಗಲ ಓಡಾಡುತ್ತಿದ್ದ ಗೌರಿ ಕೋರ್ಟು ಕಲಾಪಗಳಿಂದಾಗುತ್ತಿದ್ದ ಈ ಕಿರುಕುಳವನ್ನು ಒಂದು ಅವಕಾಶವಾಗಿಯೇ ಪರಿವರ್ತಿಸಿಕೊಳ್ಳುತ್ತಿದ್ದಳು. ಪ್ರತಿಯೊಂದು ವಿಚಾರಣೆಯೂ ಆಕೆಗೆ ಕೋರ್ಟಿನ ಹೊರಗೆ ಒಂದು ಸಭೆಯನ್ನು ನಡೆಸಲು ಅವಕಾಶವಾಗುತ್ತಿತ್ತು. ತನ್ನ ಅಭಿಪ್ರಾಯಗಳನ್ನು ಗಟ್ಟಿಯಾಗಿ ಮತ್ತು ಸ್ಪಷ್ಟವಾಗಿ ಹೇಳುತ್ತಾ ಆಕೆ ಅದನ್ನು ಗರಿಷ್ಠವಾಗಿ ಬಳಸಿಕೊಳ್ಳುತ್ತಿದ್ದಳು. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಆಕೆ ಪರಿಣಾಮಕಾರಿಯಾಗಿ ಬರೆದಳು, ಮಾತನಾಡಿದಳು.


ಇಷ್ಟೇ ಅಲ್ಲ... ದ್ವೇಷ ಹರಡುವವರೂ ಇದ್ದಾರೆ

ಸಾಮಾಜಿಕ ಮಾಧ್ಯಮಗಳಲ್ಲಿ ನಿಂದನೆಯ ಕೆಲಸವನ್ನು ಮಾಡುವ (ಟ್ರಾಲ್) ಅನೇಕ ಮಂದಿ ಆಕೆಯ ಸಾವನ್ನು ಸಂಭ್ರಮಿಸಿದರು. ವಿಪರ್ಯಾಸವೆಂದರೆ, ದ್ವೇಷ ಹರಡುವ ಇಂತಹ ನಾಲ್ವರ ಟ್ವಿಟ್ಟರ್‌ಗಳನ್ನು ನಮ್ಮ ಭಾರತದ ಪ್ರಧಾನಮಂತ್ರಿಗಳು ಹಿಂಬಾಲಿಸುತ್ತಿದ್ದಾರೆ!!

ಕೊನೆಯದಾಗಿ...

ವಿಧಿವಿಜ್ಞಾನ ತನಿಖಾ ವರದಿಗಳು ಹೇಳುವ ಪ್ರಕಾರ, ಸದರಿ ಪತ್ರಕರ್ತೆಯನ್ನು ಹತ್ಯೆಗೈಯಲು 7.65 ಎಂಎಂ ನಾಡ ಪಿಸ್ತೂಲನ್ನು ಬಳಸಲಾಗಿದೆ. ಇದೇ ತೆರನಾದ ಆಯುಧವನ್ನು 2015ರ ಆಗಸ್ಟ್ 30ರಂದು ಧಾರವಾಡದಲ್ಲಿ ವಿಚಾರವಾದಿ ಮತ್ತು ಕನ್ನಡ ವಿದ್ವಾಂಸ ಎಂ.ಎಂ. ಕಲಬುರ್ಗಿಯವರನ್ನು (77), ಕೊಲ್ಹಾಪುರದಲ್ಲಿ 2015ರ ಫೆಬ್ರವರಿ 16ರಂದು ಮಹಾರಾಷ್ಟ್ರದ ವಿಚಾರವಾದಿ ಗೋವಿಂದ ಪಾನ್ಸರೆಯವರನ್ನು (81), ಮತ್ತು 2013ರ ಆಗಸ್ಟ್ 20ರಂದು ಪುಣೆಯಲ್ಲಿ ನರೇಂದ್ರ ದಾಬೋಲ್ಕರ್ (68) ಅವರನ್ನು ಕೊಲ್ಲಲು ಬಳಸಲಾಗಿತ್ತು.

ಇಂದು 2017ರ ಸೆಪ್ಟಂಬರ್ 10. ಗೌರಿ ಹತ್ಯೆಯ ಐದು ದಿನಗಳ ಬಳಿಕವೂ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಆದರೆ, ಅತ್ಯುನ್ನತ ಅಧಿಕಾರ ಸ್ಥಾನದಲ್ಲಿರುವ ಮತ್ತು ಸಾಮಾಜಿಕ ಮಾಧ್ಯಮಗಳೊಂದಿಗಿನ ತಮ್ಮ ಸಂಬಂಧಕ್ಕಾಗಿ, ಕ್ರಿಯಾಶೀಲತೆಗಾಗಿ ಭಾರೀ ಮೆಚ್ಚುಗೆ ಗಳಿಸಿರುವ ನರೇಂದ್ರ ಮೋದಿಯವರು ಮಾತ್ರ ಈಗಲೂ ಮೌನ ಮುರಿದಿಲ್ಲ!




ಪ್ರೀತಿಯ ಗೆಳತಿ ಗೌರಿ, ನಿನಗಿದೋ ವಿದಾಯ...

● ತೀಸ್ತಾ ಸೆಟ್ಲ್‌ವಾಡ್

ಕೊಳ್ಳುತ್ತ, ಓದುತ್ತಾ, ಕನ್ನಡವನ್ನೂ ಹೃದ್ಯ ಮಾಡಿಕೊಳ್ಳುತ್ತ ಸರಳವಾಗಿ ಬರೆಯತೊಡಗಿದಳು. ಮುಖ್ಯವಾಗಿ ನಾಡಿನ ಬಹುತ್ವವನ್ನು ತಿರಸ್ಕರಿಸುವ ಕೋಮುವಾದಿ ರಾಜಕಾರಣಕ್ಕೆ "ಇಟ್ಟಿಗೆ ಪವಿತ್ರವಲ್ಲ; ಜೀವ ಪವಿತ್ರ" ಎಂದ ಲಂಕೇಶರ ಮಾದರಿಯಲ್ಲಿ 'ಆ್ಯಂಟಿ ವೈರಸ್' ನಂತೆ ಕೆಲಸ ಮಾಡಿದಳು.

ನಾಡಿನ ಸಣ್ಣ ತಾಲೂಕಿನ ಹೊಸ ಹುಡುಗರ ಬರಹಗಳನ್ನು ಪ್ರೋತ್ಸಾಹಿಸಿ ಪ್ರಕಟಿಸುತ್ತ ಆಗಾಗ ಅವುಗಳಿಗೆ ಸ್ವಲ್ಪ ಸಂಭಾವನೆಯನ್ನೂ ಕೊಡುತ್ತ ತನ್ನನ್ನು ತಾನು ವಿಸ್ತರಿಸಿಕೊಳ್ಳುತ್ತಿದ್ದಳು. ಹೀಗೊಂದು ವರ್ಷದಿಂದ ನಾನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿರುವ ಗುಡಿಪಾಟಿ ವೆಂಕಟಾಚಲಂ ಅವರ 'ಮೈದಾನಂ' ಕಾದಂಬರಿಯನ್ನು ಪ್ರಕಟಿಸಲು ಒಪ್ಪಿ, ಅದರ ಲೇಔಟ್ ತಯಾರಿಸಿ, ಅಕ್ಷರ ದೋಷ ತಿದ್ದಿ, ಪ್ರೂಫ್‌ಗಾಗಿ ಕಳಿಸಿದ್ದರು. ಹಾಗಾಗಿ ಮತ್ತೆಮತ್ತೆ ಅವರ ಜೊತೆ ಮಾತಾಡೊ ಸಂದರ್ಭ ಬರುತಿತ್ತು. ಕಳೆದ ಮಾರ್ಚ್ ಕೊನೆಯ ವಾರದಲ್ಲಿ ದೆಹಲಿಗೆ ಬಂದಿದ್ದರು. ಜೆ.ಎನ್.ಯು.ನ ತಮ್ಮ ನೆನಪನ್ನು ಮೆಲುಕು ಹಾಕುತ್ತ ಹಲವು ವಿಷಯಗಳನ್ನು ಹಂಚಿಕೊಂಡಿದ್ದರು. ಈ ಕೋಮುವಾದಿಗಳು ನನ್ನ ವಿರುದ್ಧ ಏನೆಲ್ಲ ಪಿತೂರಿ ಮಾಡ್ತಿದ್ದಾರೆ. ನನ್ನನ್ನ ಹೇಗಾದರೂ ಮಾಡಿ ಜೈಲಿಗೆ ಕಳಿಸ್ಬೇಕೂಂತ ನೋಡ್ತಿದ್ದಾರೆ. I am really tired now ಇಷ್ಟು ಅವರು ಅವತ್ತು ಹೇಳಿದ್ದು. ಕಳೆದ ತಿಂಗಳು 'ಮೈದಾನಂ' ಪ್ರಕಟಣೆಯ ಕುರಿತು ವಿಚಾರಿಸಲು ಫೋನ್ ಮಾಡಿದಾಗ "ಮರಿ ನಾನೀಗ ಬ್ಯುಸಿ ಇದ್ದೀನಿ, I will talk to you later" ಅಂದಿದ್ದರು.

ಅಕ್ಷರಗಳನ್ನು ಅಫೀಮಿನಂತೆ ಬಳಸುವವರ ನಡುವೆ, ಅವುಗಳನ್ನು ಆಲೋಚನೆ, ಅರಿವಿಗೆ ಸೀಸಲಿಟ್ಟಿದ್ದ ಒಬ್ಬ ದಿಟ್ಟೆ, ಭೌತಿಕ ವಾಗಿ ದೂರವಾದರು ವೈಚಾರಿಕ ವಾಗಿ ಇನ್ನೂ ಜೀವಂತವಾಗಿದ್ದಾಳೆ.



● ರಮೇಶ ಅರೋಲಿ, ನವದೆಹಲಿ


ಗೌರಿ ಲಂಕೇಶ್ ಹತ್ಯೆ-ಮಾನ್ಯತೆ ಪಡೆದುಕೊಂಡ ಹಿಂಸೆ

> ಪ್ರತಿಯೊಂದು ಶಬ್ದವೂ ಮೌನ ಮತ್ತು ಇಲ್ಲದಿರುವಿಕೆಯ ಮೇಲಿನ ಕಲೆ, ಗುರುತು
>
> –ಸಾಮ್ಯುಯಲ್ ಬೆಕೆಟ್


ಅದು ಬಹುಶಃ ಎಪ್ಪತ್ತರ ದಶಕದ ಕಡೆಯ ವರ್ಷಗಳಿರ ಬಹುದು. ತಮ್ಮ ಮನೆಗೆ ಬಂದ ಬಿ.ವಿ.ಕಾರಂತರಿಗೆ 'ನನ್ನ ಮಗಳು ಗೌರಿ' ಎಂದು ಲಂಕೇಶ್ ಪರಿಚಯಿಸುತ್ತಾರೆ. ಇದನ್ನು ಲಂಕೇಶ್ ಬರೆದಾಗ ನಮಗೆಲ್ಲಾ ಆ ಹೆಸರಿನ ಬಗ್ಗೆ ಅಚ್ಚರಿ. ಇನ್ನೂ ಹೈಸ್ಕೂಲ್/ಕಾಲೇಜ್‌ನಲ್ಲಿ ಓದುತ್ತಿದ್ದ ಸಾಹಿತಿ, ನಿರ್ದೇಶಕ ಪಿ.ಲಂಕೇಶ್‌ರ ಮಗಳು 'ಗೌರಿ'ಯ ನಲವತ್ತು ವರ್ಷಗಳ ಕಾಲ ನಡೆಸಿದ ಬದುಕಿನ ಪಯಣ ಮೊನ್ನೆ "ಗೌರಿ ಲಂಕೇಶ್" ಹಂತಕರ ಗುಂಡೇಟಿಗೆ ಬಲಿಯಾಗಿ ದುರಂತದಲ್ಲಿ ಕೊನೆಗೊಂಡಿದ್ದು ನಮ್ಮನ್ನೆಲ್ಲ ತಲ್ಲಣಗೊಳಿಸಿದೆ. ಖ್ಯಾತ ಸಾಹಿತಿ, ಪತ್ರಕರ್ತ, ತಲೆಮಾರು ಗಳನ್ನು ರೂಪಿಸಿದ ಲೇಖಕರ ಮಗಳಾಗಿ ಒಂದು ಪಿತೃಪ್ರಧಾನ ನೆರಳಲ್ಲಿ ಬೆಳೆದ ಗೌರಿ ಕ್ರಮೇಣ ಆ ಪ್ರಭಾವದಿಂದ ಕಳಚಿಕೊಂಡು ಹದಿಹರೆಯದಲ್ಲಿಯೇ ಸ್ವತಂತ್ರವಾಗಿ ತನ್ನ ವ್ಯಕ್ತಿತ್ವ ರೂಪಿಸಿಕೊಂಡಿದ್ದು ನಮಗೆಲ್ಲಾ ಅಚ್ಚರಿಯಾಗಿದ್ದು ನಿಜ. ಆದರೆ ತಾನು ಪ್ರೀತಿಸಿ ಮದುವೆಯಾದ ಚಿದಾನಂದ ರಾಜಘಟ್ಟರೊಂದಿಗೆ ಕೇವಲ 5 ವರ್ಷ ವೈವಾಹಿಕ ಜೀವನ ನಡೆಸಿ ತನ್ನ 29ರ ವಯಸ್ಸಿನಲ್ಲಿ ಡೈವೋರ್ಸ್ ಪಡೆದರೆಂದು ನಮಗೆಲ್ಲಾ ತಡವಾಗಿ ಗೊತ್ತಾದಾಗ ಆಘಾತವಾಗಿದ್ದೂ ನಿಜ. ಆದರೆ ಆ ಸಣ್ಣ ವಯಸ್ಸಿನಲ್ಲೇ ಈ ಬಿಕ್ಕಟ್ಟನ್ನು ಅತ್ಯಂತ ಘನತೆಯಿಂದ ನಿಭಾಯಿಸಿದ್ದು ಸ್ನೇಹಿತರಿಂದ ಕೇಳಿ ತಿಳಿದಾಗ ನಮಗೆ ಗೌರಿಯ ಬಗ್ಗೆ ಮೂಡಿದ ಹೆಮ್ಮೆಯೂ ಅಷ್ಟೇ ನಿಜ. ಕಡೆಯವರೆಗೂ ಅದೇ ಘನತೆಯಿಂದ, ಆತ್ಮವಿಶ್ವಾಸದಿಂದ ತನ್ನ ವೈಯಕ್ತಿಕ ಬದುಕನ್ನು ಕಟ್ಟಿಕೊಂಡಿದ್ದ ಗೌರಿ ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡು ದೆಹಲಿ, ಅಮೆರಿಕ, ಹೈದರಾಬಾದ್ ಎಂದೆಲ್ಲ ಓಡಾಡುತ್ತ 'ಗೌರಿ ಲಂಕೇಶ್' ಎಂದು ಸಾರ್ವಜನಿಕವಾಗಿ ಪರಿಚಯಗೊಂಡಾಗ ಅದು ತೊಂಬತ್ತರ ದಶಕದ ಕಡೆಯ ವರ್ಷಗಳು. ಲಂಕೇಶ್ ಅವರ ಆರೋಗ್ಯ ಹದಗೆಡುತ್ತಿತ್ತು, ಆದರೆ ಲಂಕೇಶ್ ಪತ್ರಿಕೆಗೆ ಲಂಕೇಶ್ ಬಿಟ್ಟರೆ ಇನ್ನಾರು ಎನ್ನುವ ಪ್ರಶ್ನೆಯೇ ಲಂಕೇಶ್ ಬೇಗ ಗುಣಮುಖರಾಗುತ್ತಾರೆ ಎಂದು ಅನಿಸುತ್ತಿತ್ತು.



2000ರಲ್ಲಿ ಲಂಕೇಶ್ ಹಠಾತ್ ತೀರಿಕೊಂಡಾಗ ಎಲ್ಲರಲ್ಲೂ ಒಂದು ಬಗೆಯ ಹತಾಶೆ, ಶೂನ್ಯ ಇನ್ನೇನಿದೆ ಬಿಡಿ ಪತ್ರಿಕೆಯ ಕತೆ ಮುಗಿದಂತೆ ಎಂದು ಕೊರಗುತ್ತಿದ್ದ ಸಂದರ್ಭದಲ್ಲಿ "ಲಂಕೇಶ್ ಪತ್ರಿಕೆ"ಯ ಸಂಪಾದಕಿಯಾಗಿ ಕನ್ನಡ ಪತ್ರಿಕೋದ್ಯಮಕ್ಕೆ ಕಾಲಿಟ್ಟ 'ಗೌರಿ ಲಂಕೇಶ್' ನಂತರ ಸಂಪಾದಕಿ, ಪ್ರಕಾಶಕಿಯಾಗಿ 17 ವರ್ಷ ಸವೆಸಿದ್ದು ಇನ್ನೂ ನಿನ್ನೆ ಮೊನ್ನೆ ನಡೆದಂತಿದೆ. ಆರಂಭದಲ್ಲಿ ತೀರಾ ಕುಗ್ಗಿದಂತೆ, ಅಪಾರ ಹಿಂಜರಿಕೆಯಿಂದ ಪತ್ರಿಕೆಯನ್ನು ನಡೆಸಿದ ಗೌರಿಯವರ ಗೊಂದಲ, ದ್ವಂದ್ವ ಮತ್ತು ಕನ್ನಡ ಪತ್ರಿಕೋದ್ಯಮದಲ್ಲಿನ ಅನನುಭವ, ಅಪರಿಚಿತನ ಎಲ್ಲವೂ ಪತ್ರಿಕೆಯ ಆರಂಭದ ವರ್ಷಗಳಲ್ಲಿ ಪ್ರತಿಫಲವಾಗುತ್ತಿತ್ತು, ಲಂಕೇಶ್ ಕಾಲದ ರಂಜನೆ, ಬೋಧನೆ, ಪ್ರಚೋದನೆ ಕಣ್ಮರೆಯಾಗಿ ಹೊರಬರುತ್ತಿದ್ದ ಈ ಪತ್ರಿಕೆ ನಡೆದರೆಷ್ಟೂ ಬಿಟ್ಟರೆಷ್ಟೂ ಎಂದು ನಮಗೆಲ್ಲಾ ಅತ್ಯಂತ ಬೇಸರವಾಗಿತ್ತು, ಆದರೆ ನಂತರ ಗೌರಿ ಕನ್ನಡ ಕಲಿತದ್ದು, ಆತ್ಮವಿಶ್ವಾಸ ಬೆಳೆಸಿಕೊಂಡಿದ್ದು ಮತ್ತು ದಿಟ್ಟತೆಯಿಂದ ಪತ್ರಿಕೆಯನ್ನು ನಡೆಸಿದ್ದು ಮತ್ತು ಮುಖ್ಯವಾಗಿ ಲಂಕೇಶರ ಸೆಕ್ಯುಲರಿಸಂ ಮತ್ತು ಜಾತ್ಯತೀತ ಗುಣವನ್ನು ಕಡೆಯವರೆಗೂ ಉಳಿಸಿಕೊಂಡ ಗೌರಿ ಲಂಕೇಶ್ ಸಮಾಜದ ಸ್ವಾಸ್ಥ್ಯಕ್ಕಾಗಿ ಹಗಲಿರುಳೂ ಚಿಂತಿಸಿದ್ದು ಮರೆಯಲು ಸಾಧ್ಯವಿಲ್ಲ, ಲಂಕೇಶ್ ತೀರಿಕೊಂಡಾಗ ಅವರ ವೈಚಾರಿಕ ನಂಬಿಕೆಗೆ ವಿರುದ್ಧವಾಗಿ ಲಿಂಗಾಯತ ಸಂಪ್ರದಾಯದಂತೆ ದೇಹವನ್ನು ಮಣ್ಣು ಮಾಡಲು ಹೊರಟಾಗ ಅದನ್ನು ತಡೆದು ಅವಘಡ ತಪ್ಪಿಸಿದ್ದ ಗೌರಿಯವರ ಅಂದಿನ ಸಮಯಪ್ರಜ್ಞೆ, ಕಂಡದ್ದು ಕಂಡ ಹಾಗೆ ವರ್ತಿಸುವ ಗುಣ ಮತ್ತು ಆ ದಿಟ್ಟತೆ ಅಂದು ನಮಗೆಲ್ಲ ಮೊದಲ ಅನುಭವ.



ಸಂಘ ಪರಿವಾರದ ಕೋಮುವಾದಿಗಳ ವಿರುದ್ಧ ನಿರಂತರವಾಗಿ ಹೋರಾಡಿದ ಗೌರಿ ಎಲ್ಲಿಯೂ ರಾಜಿ ಮಾಡಿಕೊಳ್ಳದೇ ಬದುಕಿದರು. ಕೆಲವೊಮ್ಮೆ ಅತಿರೇಕ ಎನಿಸಿ ಇರಿಸುಮುರುಸಾಗುವಷ್ಟು ತನ್ನ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಿದ್ದ ಗೌರಿಯವರ ಚಿಂತನೆಗಳು ಹಲವಾರು ಸಂದರ್ಭಗಳಲ್ಲಿ ತನ್ನ ಜಡತ್ವದಿಂದ ಯಾರನ್ನೂ ತಲುಪದೇಹೋಗಿದ್ದು ನಿಜ. 2004ರವರೆಗೂ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದದ ಪರಿಚಯವೇ ಇಲ್ಲದ ಗೌರಿ ಲಂಕೇಶ್ ಕ್ರಮೇಣ ಒಬ್ಬ ಪಕ್ಕಾ ಎಡಪಂಥೀಯ ಪತ್ರಕರ್ತೆಯಾಗಿ ರೂಪುಗೊಂಡಿದ್ದು ಹದಿಹರೆಯದವರಿಗೆ ಪಾಠದಂತಿದೆ. ತನ್ನನ್ನು 'ಆಕ್ಟಿವಿಸ್ಟ್-ಜರ್ನಲಿಸ್ಟ್' ಎಂದೇ ಕರೆದುಕೊಳ್ಳುತ್ತಿದ್ದ ಗೌರಿ ಲಂಕೇಶ್ ಅವೆರಡನ್ನೂ ಒಂದು ಸ್ಥಿತಪ್ರಜ್ಞೆಯಲ್ಲಿ ನಿಭಾಯಿಸಲು ಕಷ್ಟಪಡುತ್ತಿದ್ದರು ಎಂದೇ ಅನಿಸುತಿತ್ತು. ಲಂಕೇಶರಿಂದ ಜಾತ್ಯತೀತ ಗುಣ, ಮಾನವೀಯತೆಯನ್ನು ಪಟ್ಟಾಗಿ ಕಲಿತ ಗೌರಿ ತನ್ನ ತನ್ನ ಅಪ್ಪನಿಂದ ಲೆಕ್ಕಾಚಾರ, ಹಣಕಾಸಿನ ನಿರ್ವಹಣೆಯನ್ನು ಕಲಿಯದೆ ಹೋದರು ಎನ್ನುವುದು ನನ್ನ ಖಚಿತವಾದ ನಂಬಿಕೆ. ಆದರೆ ಕಡೆಯವರೆಗೂ ಹೊಂದಾಣಿಕೆ ಮಾಡಿಕೊಳ್ಳದೆ ಬದುಕಿದ ಗೌರಿ ಲಂಕೇಶರ ನೈತಿಕತೆ, ಕಡು ಪ್ರಾಮಾಣಿಕತೆ ಮತ್ತು ಹೃದಯವಂತಿಕೆ, ತಾಯ್ತನ ತಲೆಮಾರುಗಳಿಗೆ ಮಾದರಿಯಾಗಿವೆ.



ಆದರೆ ಪಾರ್ಟಿ ಮಾಡುವ, ಡೋಂಟ್ ಕೇರ್ ವ್ಯಕ್ತಿತ್ವದ ಚೈತನ್ಯದ ಚಿಲುಮೆಯಾಗಿದ್ದ ಗೌರಿ ಕ್ರಮೇಣ ಫೈರ್‌ಬ್ರಾಂಡ್ ಪತ್ರಕರ್ತೆಯಾಗಿ ರೂಪುಗೊಂಡಿದ್ದು, ಇದು ನಮಗೆಲ್ಲ ದಿಗಿಲು ಹುಟ್ಟಿಸಿದೆ. ಚಿಂತನೆಗಳನ್ನು ಒಪ್ಪದೇ ಇರಬಹುದು, ಪ್ರಶ್ನಿಸಬಹುದು ಎನ್ನುವ ದಿನಗಳು ಕೊನೆಗೊಂಡು ಪ್ರಶ್ನಿಸಿದವರನ್ನು, ಪ್ರಜಾಪ್ರಭುತ್ವದಲ್ಲಿ ಸಹಜವಾಗಿದ್ದ ಬಂಡಾಯ ವ್ಯಕ್ತಿತ್ವದವರನ್ನು ನೇರಾನೇರ ಹತ್ಯೆ ಮಾಡುವುದರ ಮೂಲಕ ಸದ್ದಡಗಿಸುವ ಈ ಫ್ಯಾಸಿಸ್ಟ್ ದೌರ್ಜನ್ಯಕ್ಕೆ ಗೌರಿ ಲಂಕೇಶ್ ಬಲಿಯಾಗಿ ಹೋದರು. ಗೌರಿಯವರ ಕೊಲೆ ನಮ್ಮನ್ನು ಹತಾಶೆಗೆ ತಳ್ಳಿದೆ. ಈ ರೀತಿ ಕೊಲೆಯಾದವರಲ್ಲಿ ಗೌರಿ ಲಂಕೇಶ್ ಮೊದಲನೆಯವರಲ್ಲದಿರಬಹುದು, ಸಫ್ದರ್ ಹಶ್ಮಿ, ದಾಬೋಲ್ಕರ್, ಪನ್ಸಾರೆ, ಕಲ್ಬುರ್ಗಿಯವರಂತಹ ವೈಚಾರಿಕ ಹೋರಾಟಗಾರರು, ಚಿಂತಕರು ಸಹ ಗೌರಿಯ ರೀತಿಯಲ್ಲಿ ಮತೀಯವಾದಿಗಳ ಗುಂಡಿಗೆ ಬಲಿಯಾದರು. ಆದರೆ ಇಲ್ಲಿ ನಮ್ಮನ್ನು ಕಾಡುತ್ತಿರುವುದು ಗೌರಿ ಯಾಕೆ ಕೊಲೆಯಾದರು ಅನ್ನುದಕ್ಕಿಂತಲೂ ಯಾವುದಕ್ಕಾಗಿ ಕೊಲೆಯಾದರು ಎಂಬ ಸವಾಲು. ಇಂದಿನ ಭ್ರಷ್ಟ, ಮತೀಯವಾದಿ ಸಮಾಜವೇ ಗೌರಿಯ ಕೊಲೆಗಡುಕರನ್ನು ರೂಪಿಸಿದೆ. ಈ ಕೊಲೆಗಡುಕರು ಇದೇ ಸಮಾಜದಿಂದಲೇ ಮೂಡಿಬಂದವರು. ಇದು ನಮ್ಮಲ್ಲಿ ಹತಾಶೆ ಮತ್ತು ದಿಗಿಲನ್ನು ಹುಟ್ಟಿಸುತ್ತಿದೆ. ಕಳೆದ ಮೂವತ್ತು ವರ್ಷಗಳಿಂದ ಈ ಬಲಪಂಥೀಯ ಮತೀಯವಾದಿಗಳನ್ನು, ಲುಂಪೆನ್ ಗುಂಪನ್ನು ಅಂಚಿನಲ್ಲಿರುವ ಗುಂಪುಗಳು, ಸಂಘ ಪರಿವಾರದ ತುಣುಕುಗಳು ಎಂದೇ ಪರಿಗಣಿಸಿದ್ದ ನಮಗೆಲ್ಲ ಆಘಾತಗೊಳಿಸುವಂತೆ ಇಂದು ಕೇಂದ್ರಕ್ಕೆ ಬಂದು ರಕ್ತಪಾತ ಹರಿಸುತ್ತಿವೆ. ಇಂದು ಹಿಂಸೆ ವೈಭವೀಕರಣಗೊಂಡಿದೆ ಮಾತ್ರವಲ್ಲ ಮಾನ್ಯತೆಯನ್ನು ಪಡೆದುಕೊಂಡಿದೆ. ಗೌರಿ ಲಂಕೇಶ್ ಅವರ ಹತ್ಯೆ ಇದಕ್ಕೆ ಉದಾಹರಣೆ. ಲಿಂಗ, ಜಾತಿ, ಧರ್ಮದ ಆಧಾರದಲ್ಲಿ ತಾರತಮ್ಯ ಮತ್ತು ಹಲ್ಲೆಗಳು ಸಾಮಾನ್ಯ ಜ್ಞಾನವಾಗಿ ಮಾರ್ಪಟ್ಟಿದ್ದನ್ನು ನಾವು ಅಸಹಾಯಕರಾಗಿ, ಕಿಂಕರ್ತವ್ಯಮೂಢರಂತೆ ನೋಡುತ್ತ ಕೈಚೆಲ್ಲಿದರ ಪರಿಣಾಮವಾಗಿ ಗೌರಿಯವರ ಹತ್ಯೆಯಾಗಿದೆ. ಇಲ್ಲಿ ಭೌತಿಕವಾಗಿ ಗೌರಿ ಲಂಕೇಶ್ ಸೆಕ್ಯುರಿಟಿಯನ್ನು ಪಡೆದುಕೊಳ್ಳದೆ ನಿರ್ಲಕ್ಷ್ಯ ಮಾಡಿದ್ದು ಮೇಲ್ನೋಟಕ್ಕೆ ಈ ಕೊಲೆಗೆ ಕಾರಣವೆನ್ನಬಹುದಾದರೂ ಇದಕ್ಕಿಂತಲೂ ಮುಖ್ಯವಾಗಿ ಮತ್ತೊಂದು ಮಾನಸಿಕ ಕರಾಳತೆ ನಮ್ಮನ್ನು ದಿಗ್ಭ್ರಮೆಗೊಳಿಸಿದೆ. ಇಲ್ಲಿ ಗೌರಿಯಂತಹ ಮಾನವತಾವಾದಿಯ ಕೊಲೆಯಾಗುತ್ತದೆ, ವಿಕೃತ, ಸ್ಯಾಡಿಸ್ಟ್‌ಗಳು ಇದನ್ನು ಸಂಭ್ರಮಿಸುತ್ತಾರೆ, ಅವಕಾಶವಾದಿಗಳು ಆಕೆಗೆ ಇದೆಲ್ಲ ಬೇಡವಾಗಿತ್ತು ಎಂದು ಬೋಧಿಸುವ ನೀಚತನ ತೋರಿಸುತ್ತಾರೆ ಮತ್ತು ಮೋದಿಯಂತಹ ಫ್ಯಾಸಿಸ್ಟ್ ಪ್ರಧಾನಿ ನಿಗೂಢ ಮೌನವ್ರತ ಆಚರಿಸುತ್ತಾರೆ. ಈ ವ್ಯವಸ್ಥೆ ನಿಜಕ್ಕೂ ಭಯ ಹುಟ್ಟಿಸುತ್ತದೆ.

ಗಾಯಕ, ಚಿಂತಕ ಟಿ.ಎಂ.ಕೃಷ್ಣ ಅವರು ಹೇಳಿದಂತೆ 'ಆದರೆ ನಾವು ಎದೆಗುಂದುವುದಿಲ್ಲ, ಭಯಪಡುವುದಿಲ್ಲ, ಎದುರಿಸುತ್ತೇವೆ, ಮತೀಯವಾದಿಗಳನ್ನು ಹಿಮ್ಮೆಟ್ಟಿಸುತ್ತೇವೆ, ದಿಟ್ಟವಾಗಿ ಸತ್ಯದ ಪರವಾಗಿ ಮಾತನಾಡುತ್ತೇವೆ, ಬರೆಯುತ್ತೇವೆ, ಮಾನವೀಯತೆ, ಜೀವಪರ ಸಮಾಜ ಮರುಹುಟ್ಟು ಪಡೆಯುವವರೆಗೂ ವಿಶ್ರಮಿಸುವುದಿಲ್ಲ'

ಆದರೆ ಮತ್ತು ನಾವು 'ಸಾಮಾನ್ಯ ಜ್ಞಾನ'ವನ್ನು ಪುನರ್ರೂಪಿಸಬೇಕಾಗಿದೆ. ಹಿಂಸೆಯನ್ನು ತಿರಸ್ಕರಿಸುವ, ಮನುಷ್ಯರನ್ನು ಅಕಾರಣವಾಗಿ ಪ್ರೀತಿಸುವ ಮಾನವೀಯ ತಲೆಮಾರನ್ನು ರೂಪಿಸಬೇಕಾಗಿದೆ. ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ.

ನಾನು ಗೌರಿ, ನಾವೆಲ್ಲರೂ ಗೌರಿ..

"It is only for those without hope that hope is given."
-Walter Benjamin



● ಬಿ. ಶ್ರೀಪಾದ ಭಟ್


ಯಾರನ್ನೂ ನೋಯಿಸದ ಹೆಣ್ಣುಮಗಳನ್ನು ಕೊಲ್ಲುವ ಕ್ರೂರಿಗಳೂ ಇದ್ದಾರಲ್ಲ...



ಕರ್ನಾಟಕದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನನ್ನನ್ನು ಬರಮಾಡಿಕೊಂಡವರು ಶ್ರೀಯುತ ಪಿ. ಲಂಕೇಶ್ ಅವರಾಗಿದ್ದಾರೆ. ಅವರನ್ನಾಗಲಿ ಅವರ ಕುಟುಂಬವನ್ನಾಗಲಿ ನಾನೆಂದೂ ಮರೆಯಲು ಸಾಧ್ಯವಿಲ್ಲ. 1980 ರಲ್ಲಿ ಅವರು ಪತ್ರಿಕೆ ಪ್ರಾರಂಭಿಸಿದ ಸಂದರ್ಭದಲ್ಲಿ, 'ನನ್ನ ಈ ಜನ ಒಂದಾಗಬೇಕು' ಎಂದು ಅವರು ಬರೆದ ಲೇಖನವೇ ನನ್ನ ಸಾಹಿತ್ಯದ ಪ್ರಥಮ ಹೆಜ್ಜೆಯಾಗಿತ್ತು. 'ನಾವು ಯಾವಾಗಲೂ ಒಂದಾಗಿಯೇ ಇದ್ದೆವಲ್ಲ? ನಾವು ಬೇರೆಯಾಗಿದ್ದು ನಮ್ಮನ್ನು ಬೇರೆ ಮಾಡಿದ್ದು ಯಾರು? ಎಂಬುದು ಅವರ ಈ ಕರೆಗೆ ನನ್ನ ಉತ್ತರವಾಗಿತ್ತು.

ಇಂದಿನವರೆಗೂ ನನ್ನ ಗುರಿ ಅದೇ ಆಗಿದ್ದು ನಾವೆಲ್ಲರೂ ಒಂದೇ ದೇಶದ ಪ್ರಜೆಗಳಾಗಿದ್ದು ಒಂದೇ ಸಂವಿಧಾನದ ಅಡಿಯಲ್ಲಿ ಸಮಾನತೆಯಿಂದ ಬದುಕಬೇಕಾದವರು. ಆದರೆ ಎಲ್ಲರೂ ಒಂದಾಗಿಯೇ ಬದುಕಲು ಸಾಧ್ಯವಾಗದಂತಹ ಒಂದು ಪರಿಸ್ಥಿತಿ ಇಂದು ನಮ್ಮ ಸುತ್ತಲೂ ನಡೆಯುತ್ತಿದೆ. ಮೇಲು, ಕೀಳು; ಆ ಧರ್ಮ, ಈ ಧರ್ಮ; ಆ ಜಾತಿ, ಈ ಜಾತಿ ಎಂದು ನಮ್ಮ ನಡುವೆ ಕಂದಕ ತೋಡುವುದು, ಗೋಡೆ ಎಬ್ಬಿಸುವುದೇ ಇಂದು ಕೆಲವು ಜನರ ಗುರಿಯಾಗಿದೆ. ಗೌರಿ ಲಂಕೇಶ್ ಅವರು, ಅವರ ವಿಚಾರಧಾರೆ ಈ ಜನರ ಇಂತಹ ಧೋರಣೆಗೆ ದೊಡ್ಡ ತಡೆಗೋಡೆಯಾಗಿ ನಿಂತಿದ್ದರು.

ನಾನು ಗೌರಿಯನ್ನು ಕಂಡಾಗ ಆಕೆ ಕಾಲೇಜು ವಿದ್ಯಾರ್ಥಿನಿಯಾಗಿದ್ದಳೆಂದು ತೋರುತ್ತದೆ. ನನ್ನ ಕೊನೆಯ ಮಗನಿಗೂ ಒಂದೇ ಪ್ರಾಯ. ಇಬ್ಬರೂ 1962 ರಲ್ಲಿ ಹುಟ್ಟಿದವರು. ಗೌರಿ ನನಗೆ ಮಗಳಂತೆಯೇ ಆಗಿದ್ದರು. ತಂದೆ ಸ್ಥಾಪಿಸಿದ ಆ ಪತ್ರಿಕೆ, ತಂದೆಯ ಧ್ಯೇಯ, ಧೋರಣೆಗಳು ಜನರ ಮನದಾಳದಿಂದ ಎಂದಿಗೂ ನಾಶವಾಗಬಾರದು ಎಂಬ ಕಳಕಳಿಯಿಂದ ತಂದೆಯ ಮರಣವಾದೊಡನೆಯೇ ದೆಹಲಿಯ ಪತ್ರಿಕೆಯಲ್ಲಿ ಉತ್ತಮ ಉದ್ಯೋಗದಲ್ಲಿದ್ದ ಆಕೆ ಅದನ್ನು ಬಿಟ್ಟು ಬೆಂಗಳೂರಿಗೆ ಓಡಿಬಂದಳು. ಲಂಕೇಶ್ ಅವರು ತೀರಿ ಹೋದಾಗ, ಇನ್ನು ಪತ್ರಿಕೆಯ ಭವಿಷ್ಯವೇನು ಎಂಬ ಕಳವಳದಿಂದಿದ್ದ ನಾನು ಗೌರಿ ಪತ್ರಿಕೆಯ ಸಂಪಾದಕಿಯಾದೊಡನೆ ಆ ಬೇಸರದಿಂದ ಹೊರಬಂದೆ. ತಂದೆಯ ಅದೇ ಧೋರಣೆ, ಅದೇ ಮನಃಸ್ಥಿತಿಯನ್ನಿಟ್ಟುಕೊಂಡು ಗೌರಿ ಪತ್ರಿಕೆ ನಡೆಸತೊಡಗಿದಾಗ ನಾನು ಮನದಲ್ಲಿಯೇ ಗೌರಿಯನ್ನು ಅಭಿನಂದಿಸತೊಡಗಿದೆ. ಇಡೀ ಕರ್ನಾಟಕದಲ್ಲಿಯೇ ಈ ರೀತಿ ಜನಪರ ಚಿಂತನೆಗಳಿಂದ ...ರಬರುತ್ತಿರುವ ಪತ್ರಿಕೆ ಬೇರೊಂದಿಲ್ಲದ ...ಉನ್ನತೆಯನ್ನು ಈ ಪತ್ರಿಕೆ ತುಂಬಿಕೊಟ್ಟಿತು. ಜಾಹೀರಾತುಗಳಿಲ್ಲದೆಯೂ ಪತ್ರಿಕೆ ನಡೆಸಲು ಸಾಧ್ಯ ಎಂಬುದನ್ನು ತಂದೆ ಮತ್ತು ಮಗಳು ಜನರಿಗೆ ಮನವರಿಕೆ ಮಾಡಿಕೊಟ್ಟರು.




ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಮ್ಮ ...ಂವಿಧಾನ ಈ ದೇಶದ ಪ್ರಜೆಗಳಿಗೆ ...ೀಡಿದೆ. ಜನರ ನಿತ್ಯಬದುಕಿನಲ್ಲಿ ಕೈಹಾಕಿ ಅವರ ಬದುಕನ್ನು ಸಂಕಷ್ಟಕ್ಕೆ ನೂಕುವಂತಹ ಒಂದು ಸರ್ಕಾರ ಆಳತೊಡಗಿದರೆ ಆಗ ಜನಸಾಮಾನ್ಯರು ಸಹನೆ ಕಳೆದುಕೊಳ್ಳುವುದು ಸಹಜ ತಾನೇ? ಆ ಆಡಳಿತದ ಮೇಲೆ ಜನರು ಕೋಪಿಸಿಕೊಳ್ಳುವುದು, ಅವರನ್ನು ಟೀಕೆ ಮಾಡ... ಎಲ್ಲವೂ ನಡೆಯುತ್ತದೆ. ಹಾಗೆಯೇ ತಮ್ಮಂತ... ಮನುಷ್ಯರನ್ನೇ ಪ್ರಾಣಿಗಳಂತೆ ಕಾಣುವವರ ಮೇ... ಮಾನವೀಯ ಮನೋಭಾವವಿರುವ ಮನುಷ್ಯರ... ಸಹನೆಯಾಗುವುದಿಲ್ಲ. ಆಡಳಿತ ನಡೆಸುವವರು ಇವನ್ನೆಲ್ಲ ಸಹಿಸಿಕೊಂಡು ಪ್ರಜೆಗಳೊಡನೆ ಶಾಂ... ವರ್ತಿಸಬೇಕಷ್ಟೇ ಹೊರತು ತಮ್ಮ ತಪ್ಪುಗಳನ್ನು... ಟೀಕಿಸುವವರನ್ನು ಗುಂಡಿಟ್ಟು ಕೊಲೆ ಮಾಡು... ನಾವು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು... ಕೊಟ್ಟದ್ದನ್ನು ತಿನ್ನಬೇಕು, ನಮ್ಮನ್ನು ವಿರೋಧಿಸಿ... ನಿಮಗೆ ಉಳಿಗಾಲವಿಲ್ಲ ಎಂಬಂತಹ ಧೋರಣೆ... ಸರ್ಕಾರ ವರ್ತಿಸಿದರೆ ಆ ಸರ್ಕಾರ ಹೆಚ್ಚು ಕಾಲ ಬಾಳಿಕೆ ಬರಲಾರದು.

ಗೌರಿ ಏನು ಮಾಡಿದ್ದಾರೆ? ಕೆಳವರ್ಗದ ಮನುಷ್ಯರು ನಮ್ಮಂತೆಯೇ ಮಾನವಜೀವಿಗಳಾ... ಬದುಕಬೇಕು ಎಂಬ ಮಾನವೀಯ ಕಳಕಳಿಯಿ... ತಮಗೆ ಸಾಧ್ಯವಿರುವಂತೆ ಎಲ್ಲ ಅನ್ಯಾಯ, ಮೋ... ವಂಚನೆಯ ವಿರುದ್ಧ ಹೋರಾಡಿದರು. ಬರಹ... ಮೂಲಕ ಮಾತ್ರವಲ್ಲ, ಕಾಡಿನೊಳಹೊಕ್ಕು ನಕ್ಸಲೈಟ್‌ಗಳಾಗಿ ಸಮಾಜದಿಂದ ದೂರವಾಗಿದ್ದ... ಸಮಾಜದೊಳಗೆ ತಂದು ಅವರು ಸಾಮಾನ್ಯ ಮನುಷ್ಯರಂತೆ ಬದುಕಬೇಕೆಂದು ಆಶಿಸಿದರು. ಪ್ರಯತ್ನದಲ್ಲಿ ಯಶಸ್ವಿಯೂ ಆದರು. ಅವರು ಯಾರನ್ನೂ ಹಿಂಸಿಸಲಿಲ್ಲ, ಯಾರನ್ನೂ ಕೊಲೆ ಮಾಡಲಿಲ್ಲ, ಯಾರಿಗೂ ನೋವುಂಟು ಮಾಡ... ಇಂತಹ ಓರ್ವ ಹೆಣ್ಣುಮಗಳನ್ನು ಗುಂಡಿಟ್ಟು ... ಮಾಡುವ ಕ್ರೂರಿಗಳು ನಮ್ಮ ನಡುವೆ ಇದ್ದಾ...ರೆ ಇದನ್ನು ಸಹಿಸುವುದು ಹೇಗೆ?

ನಾನು ಬೆಂಗಳೂರಿಗೆ ಹೋದಾಗ ಕೆಲವೊ... ಗೌರಿಯವರ ಕಚೇರಿಗೆ ಹೋಗಿ ಅವರನ್ನು

'ದೊಡ್ಡ' ಶಕ್ತಿಯಾಗಿರುವ 'ಸಣ್ಣ' ಗೌರಿಗೆ ಸಲಾಂ...




ಗೌರಿ ಮೇಡಂರನ್ನು ಕೊಂದಿದ್ದಾರೆ.

ಗೌರಿ ಮೇಡಂರನ್ನು ಕೊಂದೇಬಿಟ್ಟಿದ್ದಾರೆ.

ಗೌರಿ ಮೇಡಂರನ್ನು ಶಾಶ್ವತವಾಗಿ ನಮ್ಮಿಂದ ಕಸಿದುಕೊಂಡಿದ್ದಾರೆ.

ಎಷ್ಟು ಸಾರಿ ಹೇಳಿಕೊಂಡರೂ ಈ ಸತ್ಯಕ್ಕೆ ಮನಸ್ಸು ಜಾಗ ಕೊಡುತ್ತಿಲ್ಲ. ಎಲ್ಲರೂ ಬೀದಿಯಲ್ಲಿದ್ದೇವೆ. ನಮಗೆ ತೋಚಿದ್ದನ್ನೆಲ್ಲಾ ಮಾಡುತ್ತಿದ್ದೇವೆ. ಒಕ್ಕೊರಲಿನಲ್ಲಿ ಕೂಗುತ್ತಿದ್ದೇವೆ. ಕಣ್ಣೀರು ಒರೆಸಿಕೊಳ್ಳುತ್ತಾ, ಆಕ್ರೋಶವನ್ನು ನುಂಗಿಕೊಳ್ಳುತ್ತಾ "ನಾನೂ ಗೌರಿ" ಎಂದು ಆರ್ಭಟಿಸುತ್ತಿದ್ದೇವೆ. 12ಕ್ಕೆ ಪ್ರತಿರೋಧ ಸಮಾವೇಶವನ್ನು ಸಂಘಟಿಸುತ್ತಿದ್ದೇವೆ. ಗೌರಿಯವರೂ ಇದೇ ಕೆಲಸದಲ್ಲಿ ಓಡಾಡುತ್ತಿದ್ದಾರೆ ಅನಿಸುತ್ತಿದೆ. ಕಳೆದ ಅನೇಕ ವರ್ಷಗಳಿಂದ ಅವರನ್ನು ಬಿಟ್ಟು ಯಾವ ಹೋರಾಟವನ್ನೂ ನಾನು ಕಲ್ಪಿಸಿಕೊಂಡಿಲ್ಲ. ಎಲ್ಲದರಲ್ಲೂ ಅವರಿದ್ದಾರೆ. ಮುನ್ನೆಲೆ ಪಾತ್ರವಿರಬಹುದು, ಹಿನ್ನೆಲೆ ಪಾತ್ರವಿರಬಹುದು, ಸಹ ಸಂಗಾತಿಯ ಪಾತ್ರವಿರಬಹುದು. ಒಟ್ಟನಲ್ಲಿ ಗೌರಿ ನಮ್ಮೆಲ್ಲರ ವಿಶ್ವಾಸದ ಸಂಗಾತಿ. ಅವರ ಜೊತೆ ಜಗಳವಾಡಬಹುದಿತ್ತು, ಜೋರು ಮಾಡಬಹುದಿತ್ತು, ಜಾಲಿಯಾಗಿರಬಹುದಿತ್ತು, ಭಿನ್ನಾಭಿಪ್ರಾಯದ ಜೊತೆಯೂ ಕೆಲಸ ಮಾಡಬಹುದಿತ್ತು.

ವಾಸ್ತವದಲ್ಲಿ ಗೌರಿ ಮಹಾನ್ ನಾಯಕಿಯೂ ಆಗಿರಲಿಲ್ಲ, ಮಹತ್ವಾಕಾಂಕ್ಷಿಯೂ ಆಗಿರಲಿಲ್ಲ, ಮಹಾನ್ ಚಿಂತಕಿಯೂ ಆಗಿರಲಿಲ್ಲ. ಪತ್ರಿಕೆಯ ಬಗ್ಗೆಯಾಗಲೀ, ಸಮಾಜದ ಬದಲಾವಣೆಯ ಬಗ್ಗೆಯಾಗಲೀ, ತನ್ನ ಭವಿಷ್ಯದ ಬಗ್ಗೆಯಾಗಲೀ, ತಮ್ಮ ಕುಟುಂಬದ ಬಗ್ಗೆಯಾಗಲೀ ಯಾವ ದೊಡ್ಡ ಕನಸುಗಳೂ, ನಿರೀಕ್ಷೆಗಳೂ, ಯೋಜನೆಗಳೂ ಅವರಿಗಿರಲಿಲ್ಲ. ಅಂದಂದಿಗೆ ಬದುಕುತ್ತಾ ಹೋದರು ಗೌರಿ. ಸರಿಯೆನಿಸಿದವರ ಜೊತೆ ಹೆಜ್ಜೆ ಹಾಕುತ್ತಾ ಸಾಗಿದರು. ಸರಿಯೆನಿಸಿದ್ದನ್ನು ಮಾಡುತ್ತಾ ಹೋದರು.



...ಂತಃಕರಣ ಅವರನ್ನು ಸರಿದಿಕ್ಕಿನಲ್ಲಿ ... ಕೆಲವರಿಗಿದು ಆಳವಲ್ಲದ ವ್ಯಕ್ತಿತ್ವವಾಗಿ, ...ಿದ್ದೂ ಉಂಟು. ...ದೆಂದರೆ ನಾವು ಹೇಗೆ ..., ಎಷ್ಟು ಮಾತಾಡುತ್ತೀವಿ ...ನು ಮಾಡುತ್ತೀವಿ ಎಂಬುದೇ ... ಗೌರಿ ಸರಳವಾಗಿ, ನಿರಂತರವಾಗಿ ...ಿಗೆ ಸ್ಪಂದಿಸುತ್ತಾ, ತನ್ನಿಂದಾಗುವುದನ್ನು ...ಿದರು. ಅವರನ್ನು ಬಹಳವಾಗಿ ... ವಿಚಾರವೆಂದರೆ ಸುತ್ತಮುತ್ತ ಬೆಳೆಯುತ್ತಿರುವ ದ್ವೇಷ. ಅವರೊಳಗಿನ ಪ್ರೀತಿ ಸುತ್ತಲ ಈ ದ್ವೇಷದ ಜೊತೆ ಸಹಬಾಳ್ವೆ ಮಾಡಲು ಸಿದ್ಧವಿರಲಿಲ್ಲ. ಹಾಗಾಗಿ ಅದರ ಬಗ್ಗೆಯೇ ಹೆಚ್ಚು ಬರೆದರು, ಪ್ರಕಟಿಸಿದರು, ಮಾತಾಡಿದರು, ಓಡಾಡಿದರು, ಹೋರಾಡಿದರು, ಕೊನೆಗೆ ಅದರಿಂದಲೇ ಕೊನೆಯಾದರು. ಈಗ ಅದರಿಂದಲೇ ಶಕ್ತಿಯಾಗಿದ್ದಾರೆ, ಸಂಕೇತವಾಗಿದ್ದಾರೆ, ಸ್ಫೂರ್ತಿಯಾಗಿದ್ದಾರೆ.

ಗೌರಿಗೆ ಬಹಳ ಬೇಗ ನಕ್ಸಲೈಟ್ ಎಂಬ ಪಟ್ಟಿಯನ್ನು ಸಂಘ ಪರಿವಾರ ಕೊಟ್ಟಿತು. ಒಂದು ರೀತಿಯಲ್ಲಿ ಗೌರಿ ಎಲ್ಲವೂ ಆಗಿದ್ದರು, ಮತ್ತೊಂದು ರೀತಿಯಲ್ಲಿ ಯಾವುದೂ ಆಗಿರಲಿಲ್ಲ. ಗೌರಿಗೆ ಕಮ್ಯುನಿಸ್ಟರ ಜೊತೆ ಒಡನಾಟವಿತ್ತು ಆದರೆ ಕಮ್ಯುನಿಸ್ಟರಾಗಿರಲಿಲ್ಲ. ಗೌರಿ ದಲಿತ ಚಳವಳಿಯನ್ನು ಅಭಿಮಾನಿಸುತ್ತಿದ್ದರು ಆದರೆ ಅಂಬೇಡ್ಕರ್‌ವಾದಿಯಾಗಿರಲಿಲ್ಲ. ಗೌರಿ ನಕ್ಸಲೈಟರ ಸಂಪರ್ಕದಲ್ಲೂ ಇದ್ದರು ನಕ್ಸಲೈಟರಾಗಿರಲಿಲ್ಲ. ಎಲ್ಲದರಲ್ಲಿರುವ ಒಳಿತಿನ ಜೊತೆ ಅವರಿದ್ದರು, ಎಲ್ಲದರಲ್ಲಿರುವ ದೋಷದಿಂದ ಅವರು ದೂರ...ರು. ಹಾಗಾಗಿ ಯಾವುದೇ ಒಂದನ್ನು ಅಂಟಿಸಿಕೊಳ್ಳ... ಯಾವುದನ್ನೂ ದೊಡ್ಡ ಮಾತುಗಳಲ್ಲಿ ಖಂಡಿಸಿ ಜಗಳವಾಡದೆ, ಎಲ್ಲರ ಜೊತೆ, ಎಲ್ಲದರ ಸರಿಯ... ಭಾವದ ಜೊತೆ ಸ್ಪಂದಿಸುತ್ತಾ ಸಾಗಿದರು. ದಲಿತ ಚಳವಳಿಯ ಜಿಗ್ನೇಶ್, ಕಮ್ಯುನಿಸ್ಟ್ ಹಿನ್ನೆಲೆಯ ...ಯ್ಯ ಮತ್ತು ನಕ್ಸಲೈಟ್ ಪ್ರಭಾವದ ಉಮರ್ - ಮೂವರನ್ನೂ ಅವರು ತಮ್ಮ ಮಕ್ಕಳೆಂದು ಕರೆಯುತ್ತಿದ್ದುದು ಅವರ ವ್ಯಕ್ತಿತ್ವದ ಅಪ್ರಜ್ಞಾಪೂ...ಕ ಅಭಿವ್ಯಕ್ತಿ ಎನ್ನಬಹುದು.

ಗೌರಿಗೆ ಸುತ್ತಮುತ್ತ ಬೆಳೆಯುತ್ತಿರುವ ದ್ವೇ... ರಾಜಕಾರಣ ಕಾಡಿದಂತೆ, ಕರ್ನಾಟಕದಲ್ಲಿ ಆರಂಭವಾಗತೊಡಗಿದ್ದ ಸಶಸ್ತ್ರ ಸಂಘರ್ಷವೂ ಅ... ಮೂಡಿಸಿತ್ತು. 2004ರಲ್ಲಿ ಪತ್ರಕರ್ತ ಮಿತ್ರರೊ... ಮಲೆನಾಡಿನ ಕಾಡುಗಳಲ್ಲಿ ಸಾಕೇತ್ ರಾಜನ್ ... ಸಂಗಾತಿಗಳನ್ನು ಕಂಡು ಬಂದಾಗಿನಿಂದ ಅವರ ...ಸ್ಸು ಎರಡೂ ವಿಚಾರಗಳಿಂದ ವಿಚಲಿತಗೊಂಡಿತ್ತು. ...ು ಸಮಾಜದ ಬದಲಾವಣೆಗಾಗಿ ಮನೆಗಳನ್ನು ತೊ... ಕಾಡಿಗೆ ಬಂದು, ಇಂಬಳ-ಉಣುಗುಗಳ ನಡು... ಚಳಿ-ಮಳೆಯಲ್ಲಿ ಬೆಟ್ಟಗುಡ್ಡಗಳನ್ನು ತುಳಿಯುತ್ತ... ಪ್ರಾಣಕೊಡಲೂ ಸಿದ್ಧವಾಗಿ ನಿಂತಿರುವ ಯುವಕಯುವತಿಯರ ಬಗ್ಗೆ ಅಪಾರ ಅಭಿಮಾ... ಮೂಡಿತ್ತು. ಅದೇ ಸಂದರ್ಭದಲ್ಲಿ ಮುಂದೆ ಹರಿಯಬಹುದಾದ ನೆತ್ತರು ಅವರನ್ನು ಅಲುಗಾ...ತ್ತು. ನೋಡನೋಡುತ್ತಿದ್ದಂತೆ ಎನ್ಕೌಂಟರುಗಳು ಆರಂಭವಾದವು. ಒಂದೊಂದು ಸಾವೂ ಅವರ... ಕಾಡಿತು. ಇದನ್ನು ನಿಲ್ಲಿಸಬೇಕೆಂದೇ ಸಹಮನಸ್ಕ... ಜೊತೆ ಸೇರಿ "ಶಾಂತಿಗಾಗಿ ನಾಗರಿಕರ ವೇದಿಕೆ"...ನ್ನು ಕಟ್ಟಿಕೊಂಡು ಕೆಲಸ ಮಾಡತೊಡಗಿದರು. ಸರ್ಕಾ...ಕ್ಕೂ ನಕ್ಸಲೈಟರಿಗೂ ಸಂಘರ್ಷ ಬೇಡ, ಮಾತುಕತೆ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳೋಣ... ಎಂದು ಮನವಿ ಮಾಡತೊಡಗಿದರು. ಆರಂಭ...


PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com

ಭೇಟಿಯಾಗಿ ಬರುತ್ತಿದ್ದೆ. ಅವರು ಮಂಗಳೂರಿನಲ್ಲಿ ಕೋಮು ಸೌಹಾರ್ದ ವೇದಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಾಗ ನಾನೂ ಭಾಗವಹಿಸುತ್ತಿದ್ದೆ. ಆಗೆಲ್ಲಾ ನಾನು ಗೌರಿಯವರನ್ನು ಭೇಟಿಯಾಗುತ್ತಿದ್ದೆ. ನಾನು ಯಾವಾಗ ಎಂತಹ ಲೇಖನ ಬರೆದು ಕಳುಹಿಸಿದರೂ ಗೌರಿಯವರು ಕೂಡಲೇ ಅದನ್ನು ಪ್ರಕಟಿಸುತ್ತಿದ್ದರು. ಇತರ ಪತ್ರಿಕೆಗಳಂತೆ ನಾನು ಬರೆದದ್ದರಲ್ಲಿ ಒಂದೇ ಒಂದು ಶಬ್ದವನ್ನೂ ಕಟ್ ಮಾಡುತ್ತಿರಲಿಲ್ಲ. ನಾನು ಎಂದೂ ಸಂಭಾವನೆಯ ಕುರಿತು ಯೋಚಿಸಿಯೇ ಇರಲಿಲ್ಲ. ಕಳೆದ ವರ್ಷ ಗೌರಿಯವರು ನನಗೆ ಒಂದು ಚೆಕ್ ಕಳುಹಿಸಿದಾಗ ನನಗೆ ಆಶ್ಚರ್ಯವಾಗಿ ಕೂಡಲೇ ಅವರಿಗೆ ಫೋನ್ ಮಾಡಿ ಕೃತಜ್ಞತೆ ಸಲ್ಲಿಸಿದ್ದೆ.

ಕಳೆದ ವರ್ಷದಿಂದೀಚೆಗೆ ನಾನು ಪತ್ರಿಕೆಗೆ ಲೇಖನ ಕಳುಹಿಸುವುದು ಕಮ್ಮಿಯಾಗಿತ್ತು. ಸಾಗರದಿಂದ ಬಂದಿದ್ದ ಮುಸ್ಲಿಂ ಪ್ರಾಧ್ಯಾಪಕರೊಬ್ಬರು ನನ್ನೊಡನೆ, "ನಮ್ಮೂರಿನಲ್ಲಿ ಲಂಕೇಶ್ ಪತ್ರಿಕೆ ದೊರೆಯುವುದೇ ಇಲ್ಲ. ನೀವು ಬೇರೆ ದಿನಪತ್ರಿಕೆಗಳಿಗೆ ಬರೆಯಿರಿ. ಮುಸ್ಲಿಮರು ನಿಮ್ಮ ಲೇಖನಗಳನ್ನು ಓದಬೇಕು" ಎಂದರು.

ತಲಾಖ್ ಕುರಿತ ನನ್ನ ಲೇಖನಗಳನ್ನು ಮುಸ್ಲಿಮರು ಓದಲಿ ಎಂಬ ಕಾರಣಕ್ಕಾಗಿ ನಾನು ಅವುಗಳನ್ನು ದಿನಪತ್ರಿಕೆಗೆ ಕಳುಹಿಸಿಕೊಟ್ಟೆ. ಲಂಕೇಶ್ ಪತ್ರಿಕೆಗಳನ್ನು ಕೋಮುವಾದಿಗಳು ಮಾರಾಟ ಮಾಡಲು ಬಿಡುವುದಿಲ್ಲ ಎಂಬುದೂ ಆಗಲೇ ನನಗೆ ಅರ್ಥವಾಯಿತು.

ಮಂಗಳೂರಿನಲ್ಲಿ ಕೂಡಾ ಗೌರಿ ಲಂಕೇಶ್ ಪತ್ರಿಕೆ ದೊರೆಯುವುದಿಲ್ಲ. ಕೋಮುವಾದಿಗಳು ಗೌರಿಯವರ ವೈಚಾರಿಕತೆ ಹರಡದಂತೆ ತಡೆಯಲು ಬಹಳ ಹಿಂದಿನಿಂದಲೇ ಪ್ರಯತ್ನಿಸುತ್ತಿದ್ದರು. ಅವರ ಆ ಶ್ರಮ ವ್ಯರ್ಥವಾದ ಕಾರಣ ಗೌರಿಯನ್ನೇ ಗುಂಡಿಟ್ಟು ಕೊಲೆ ಮಾಡಿದರು. ಆದರೆ ಅವರ ವೈಚಾರಿಕತೆಯನ್ನು ಕೊಲೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ.




ಗೌರಿಯವರ ತಾಯಿ ಇಂದಿರಾ ಲಂಕೇಶ್ ಹಾಗೂ ಸಹೋದರ ಮತ್ತು ಸಹೋದರಿಯ ಈ ನೋವು ಮತ್ತು ದುಃಖದಲ್ಲಿ ನಾವೆಲ್ಲರೂ ಪಾಲ್ಗೊಳ್ಳುತ್ತೇವೆ ಎಂದಷ್ಟೇ ಈ ಸಂದರ್ಭದಲ್ಲಿ ನಾನು ಹೇಳಬಲ್ಲೆ.

■ ಡಾ. ಸಾರಾ. ಅಬೂಬಕ್ಕರ್

ಇಬ್ಬರೂ ಸ್ಪಂದಿಸಿದರು. ಆದರೆ ಸರ್ಕಾರ ಮೊದಲು ಮಾತು ಮುರಿದು ಕೂಂಬಿಂಗ್ ಶುರು ಮಾಡಿಬಿಟ್ಟಿತು. ಗೌರಿ ಅಭಿಮಾನಿಸುತ್ತಿದ್ದ ಸಾಕೇತ್ ರಾಜನ್‌ರನ್ನೂ ಕೊಂದುಬಿಟ್ಟಿತು. ಗೌರಿ ಸರ್ಕಾರದ ಈ ನಿಲುವನ್ನು ತೀವ್ರವಾಗಿ ಖಂಡಿಸಿ ಬರೆದರು, ಬೀದಿಗಿಳಿದರು. ಸಂಘ ಪರಿವಾರ ಅವರನ್ನು ನಕ್ಸಲೈಟ್ ಎಂದು ಬಿಂಬಿಸಿತು. ಹೀಗೆ ನಿಷ್ಕಲ್ಮಶವಾಗಿ ಶಾಂತಿಗಾಗಿ ಮಿಡಿದ ಮನವನ್ನು ಸಶಸ್ತ್ರ ಹೋರಾಟಕ್ಕೆ ಇಂಬು ಕೊಟ್ಟವಳನ್ನಾಗಿ ಬಿಂಬಿಸಲು ಸಂಘಪರಿವಾರ ಹೆಣಗಾಡಿತು.

ನಿಜ ಹೇಳಬೇಕೆಂದರೆ ನಕ್ಸಲೈಟರ ಬಗ್ಗೆ ಗೌರಿಗಿದ್ದ ಅಭಿಮಾನಕ್ಕಿಂತ ನೂರುಪಟ್ಟು ಹೆಚ್ಚು ಅಭಿಮಾನ ಗೌರಿಯ ಬಗ್ಗೆ ನಕ್ಸಲೈಟ್ ಬಳಗದಲ್ಲಿದೆ. ನಕ್ಸಲೈಟ್ ಚಳವಳಿ ಲಾಂಗ್ ಹಿಡಿದು ಓಡಾಡುವ ಗೂಂಡಾ ಪಡೆಯೂ ಅಲ್ಲ, ಸುಪಾರಿ ಕೊಟ್ಟವರನ್ನು ಹಾರಿಸುವ ಅಂಡರ್‌ವರ್ಲ್ಡ್ ಗ್ಯಾಂಗೂ ಅಲ್ಲ, ಬೇಕಾಬಿಟ್ಟಿ ಬಾಂಬು ಸಿಡಿಸಿ ಶಕ್ತಿ ಪ್ರದರ್ಶನ ಮಾಡುವ ಭಯೋತ್ಪಾದಕ ಬಣವೂ ಅಲ್ಲ. ಅದೊಂದು ಸೈದ್ಧಾಂತಿಕ ನೆಲೆಯ ಮೇಲೆ ನಿಂತಿರುವ ತತ್ವಬದ್ಧ ಚಳವಳಿ. ಆ ಸಿದ್ಧಾಂತವನ್ನು, ತತ್ವವನ್ನು ನಾವು ಒಪ್ಪದಿರಬಹುದು, ಆದರೆ ಅದರ ಆದರ್ಶಗಳನ್ನು, ಮೌಲ್ಯಗಳನ್ನು, ಅದರೊಳಗಿನ ಪ್ರೀತಿಭಾವವನ್ನು ಅವಮಾನಿಸಲು, ಅನುಮಾನಿಸಲು ಸಾಧ್ಯವಿಲ್ಲ. ನಕ್ಸಲೈಟರು ಗೌರಿಯಂತಹವರನ್ನು ಕೊಲೆ ಮಾಡುವುದರ ಕುರಿತು ಆಲೋಚಿಸುವುದೇ ಅಪರಾಧ. ಇನ್ನು ವಿಕ್ರಂ ಗೌಡ. ಆ ಮುಗ್ಧ ಆದಿವಾಸಿ ಯುವಕ ಪ್ರೀತಿಯ ಎರಕ. ಸರ್ಕಾರ ಆದಿವಾಸಿ ಜನರನ್ನು ಕಾಡಿನಿಂದ ಎತ್ತಂಗಡಿ ಮಾಡಲು ಹೊರಟಾಗ ಸಿಡಿದು ನಕ್ಸಲೈಟ್ ದಳವನ್ನು ಸೇರಿದ ಮುಗ್ಧ ಹೋರಾಟದ ಕಿಡಿ. ಪಾಪ ತನ್ನನ್ನು ಗೌರಿಯ ಹಂತಕನಾಗಿ ಬಿಂಬಿಸುತ್ತಿರುವುದನ್ನು ಕೇಳಿ ಆ ಮನಸ್ಸು ಹೇಗೆ ಸಂಕಟಪಡುತ್ತಿದೆಯೋ ಊಹಿಸುವುದೂ ಕಷ್ಟ. ಗೌರಿಯವರನ್ನು ನಕ್ಸಲೈಟರು ಕೊಂದಿರುವ ಸಾಧ್ಯತೆ ಏಕಿಲ್ಲ ಎಂದು ಹೇಳಲು ನೂರು ವಿಚಾರಗಳಿವೆ. ಇಲ್ಲಿ ಅದನ್ನೆಲ್ಲ ಬರೆಯಬೇಕೆನಿಸುತ್ತಿಲ್ಲ.

ಗೌರಿಯವರ ಜೊತೆ ಈ ನಾಡಿನ ಸತ್ಯವನ್ನೇ ಕೊಲೆ ಮಾಡಲು ಹೊರಟಿದ್ದಾರೆ. ಆದರೆ ಇಡೀ ದೇಶದ ಮನುಜ ಆತ್ಮ ಮರುಜನ್ಮ ಪಡೆದಂತೆ ಎದ್ದು ನಿಂತಿದೆ. ಅಂತಃಕರಣದ ಗೌರಿ ಮನುಜರೆಲ್ಲರೊಳಗಿನ ಅಂತಃಕರಣವನ್ನು ಬಡಿದೆಬ್ಬಿಸಿದ್ದಾರೆ. ಮಾನವೀಯತೆಯ ಕೂಗು "ನಾನೂ ಗೌರಿ"ಯ ರೂಪದಲ್ಲಿ ಮಾರ್ದನಿಸುತ್ತಿದೆ. ದೇಶದ ಅಂತರಾತ್ಮದ ಅಳಿವು-ಉಳಿವಿನ ಸಂಘರ್ಷ ಹೊಸ ಹಂತಕ್ಕೆ ಚಿಮ್ಮಿ ನಿಂತಿದೆ. ನಮ್ಮೆಲ್ಲರ ಪ್ರೀತಿಯ 'ಸಣ್ಣ' ಗೌರಿ ಇಂದು 'ದೊಡ್ಡ' ಶಕ್ತಿಯಾಗಿ ನಮ್ಮನ್ನೆಲ್ಲಾ ಮುನ್ನಡೆಸುತ್ತಿದ್ದಾರೆ.




ಸಲಾಂ ಮೇಡಂ.


ನಾನೂ ಗೌರಿ

■ ನೂರ್ ಶ್ರೀಧರ್

ನಮ್ಮ ಕಣ್ಣೆದುರಿಗೆ ಕಂಡ ಮ್ಯುಟೇಷನ್



ಬಹು ಹತ್ತಿರದಿಂದ ಗೌರಿಯವರನ್ನು ನಾನು ನೋಡಿದ್ದು 2003ರ ನವೆಂಬರ್ ತಿಂಗಳ ಕೊನೆಯ ವಾರದಲ್ಲಿ, ಸಂಸ ಬಯಲು ರಂಗಮಂದಿರದ ವೇದಿಕೆಯ ಮೇಲೆ ನಡೆದ ಒಂದು ಸಭೆಯಲ್ಲಿ, ಅವರು ನನ್ನ ಪಕ್ಕದಲ್ಲಿ ಕೂತು, ಆಗಷ್ಟೇ ವ್ಯಾಪಕಗೊಳ್ಳುತ್ತಿದ್ದ ಮೊಬೈಲ್ ಫೋನನ್ನು ಹಿಡಿದು, ಯಾರಿಗೋ ಫೋನ್ ಮಾಡುತ್ತಿದ್ದರು. ಅವರ ಮಾತು, ಧೋರಣೆ, ಹಾವ-ಭಾವ, ಜೊತೆಗಿರುವವರೊಂದಿಗೆ ನಡವಳಿಕೆ, ವೈಚಾರಿಕ ಆಳ ಯಾವುದೂ ಅಂದಿನ ನನಗೆ ಇಷ್ಟವಾಗುವ ಸಾಧ್ಯತೆಯಿರಲಿಲ್ಲ. ಅಂದಿನಿಂದ 2017ರ ಸೆಪ್ಟೆಂಬರ್‌ರ 5ರವರೆಗೆ ಅವರೊಂದಿಗಿನ ಒಡನಾಟದಲ್ಲಿ ಕಂಡಿದ್ದು ಒಂದು ಅಚ್ಚರಿಯ ರೂಪಾಂತರ. ವೈಯಕ್ತಿಕವಾದ, ಭಾವನಾತ್ಮಕವಾದ ನೂರಾರು ಸಂಗತಿಗಳು ಈ ಮಧ್ಯೆ ಘಟಿಸಿಹೋಗಿವೆ. ಇಡೀ ಜೀವನದುದ್ದಕ್ಕೂ ಕಾಡುವ ಕೆಲವು ಅಂಶಗಳನ್ನು ಎಂದಾದರೂ ಬರೆಯಲಾದೀತೋ ಇಲ್ಲವೋ ನೋಡಬೇಕು. ಆದರೆ, ಈ ಹೊತ್ತಿನಲ್ಲಿ ಮುಂದಿಡಲೇಬೇಕಾದ್ದು ಗೌರಿ ಲಂಕೇಶ್ ಎಂಬ ವ್ಯಕ್ತಿತ್ವ ಈ 14 ವರ್ಷಗಳ ಬದಲಾದ ರೀತಿ. ಈ ಬದಲಾವಣೆಯನ್ನು ರೂಪಾಂತರ ಎನ್ನುವುದಕ್ಕಿಂತ ಮ್ಯುಟೇಷನ್ ಎಂದು ಕರೆಯಲು ಕಾರಣವಿದೆ.



ಹೊರನೋಟಕ್ಕೆ ಸ್ವಲ್ಪ ಉಡಾಫೆ ಸ್ವಭಾವದ, ಹುಂಬತನದಿಂದ ಮುನ್ನುಗ್ಗುವ, ಆಳವಾದ ಸೈದ್ಧಾಂತಿಕ ತಿಳಿವಳಿಕೆಯಿಲ್ಲದ, ಪ್ರಜಾತಂತ್ರ- ಮಾನವೀಯತೆ- ಸೌಹಾರ್ದತೆ ಇತ್ಯಾದಿಗಳನ್ನು ಮೇಲ್ಪದರಲ್ಲಿ ಮಾತ್ರ ಅರ್ಥ ಮಾಡಿಕೊಂಡು ಇಂಗ್ಲಿಷ್ ಲಿಬರಲ್ ಧೋರಣೆಯಿಂದ ವ್ಯವಹರಿಸುವ ವ್ಯಕ್ತಿಯಾಗಿ ಗೌರಿ ಹಲವರಿಗೆ ಕಂಡಿರಬಹುದು. ವಾಸ್ತವದಲ್ಲಿ 2003ರಲ್ಲಿ ಅವರು ಇದ್ದದ್ದು ಬಹುತೇಕ ಹಾಗೆಯೇ. ದೂರದಿಂದ ನೋಡುವವರಿಗೆ ಅವರ ಹೊರ ನಡವಳಿಕೆಯಲ್ಲಿ ಕಡೆಯವರೆಗೂ ಹಾಗೆಯೇ ಇದ್ದರು ಎಂತಲೂ ಅನ್ನಿಸಬಹುದು. ಲಂಕೇಶರ ಹಾಗೆ 'ಒಂದು ರೀತಿಯ ಲೋಹಿಯಾವಾದಿ'ಯೂ ಆಗಿರದ ಮೇಡಂ, ಕಮ್ಯುನಿಸ್ಟರ ಬಗ್ಗೆ ಸಾಕಷ್ಟು ಕಟುವಾದ ಮತ್ತು ವ್ಯಂಗ್ಯಪೂರಿತವಾದ ಅಭಿಪ್ರಾಯಗಳನ್ನೇ ಇಟ್ಟುಕೊಂಡಿದ್ದರು. ಲಂಕೇಶರ ರೀತಿಯಲ್ಲೇ ಆಗಾಗ್ಗೆ, ಬರಹದಲ್ಲಲ್ಲದಿದ್ದರೂ ಖಾಸಗಿ ಸಂಭಾಷಣೆಗಳಲ್ಲಿ ಲೇವಡಿ ಮಾಡುತ್ತಿದ್ದರು. ತನ್ನ 'ಆಕ್ಟಿವಿಸ್ಟ್' ಜೀವನಕ್ಕೆ ಮುಂಚೆ ಅಂಬೇಡ್ಕರರ ಯಾವುದೇ ಬರಹ ಓದಿರುವ ಸಾಧ್ಯತೆಯಿರಲಿಲ್ಲ. ಆದರೆ, 2014ರಲ್ಲಿ ಕೇಳಿಬಂದ ನೀಲಿ-ಕೆಂಪುಗಳ ಸಮಾಗಮದ ಚರ್ಚೆಯ ಹೊತ್ತಿಗೆ ಅವರು ನೀಲಿ-ಕೆಂಪನ್ನು ಗಾಢವಾಗಿ ತನ್ನೊಳಗೆ ಇಳಿಸಿಕೊಂಡಿದ್ದರು. ಅದೂ ಹೇಗೆ? ದೇವನೂರರು ಹೇಳುವ 'ಈ ಸಿದ್ಧಾಂತಗಳನ್ನು ನಾವು ಸ್ಪಿರಿಟ್ ಮಾಡಿ, ಒಟ್ಟಿಗೆ ಕಲೆಸಿ ಕುಡಿದುಬಿಡಬೇಕು' ಎಂಬ ರೀತಿಯಲ್ಲಿ.

ಏಕೆಂದರೆ ಎಡಪಂಥೀಯರಲ್ಲಿ ಕೆಲವರು ಟ್ಯಾಕ್ಟಿಕಲ್ ಕಾರಣಕ್ಕೆ, ಕೆಲವರು ಸೈದ್ಧಾಂತಿಕವಾಗಿ ಅಂಬೇಡ್ಕರ್‌ವಾದವೂ ನಮ್ಮದು ಎಂದು ಒಪ್ಪಿಕೊಂಡ ಕಾರಣಕ್ಕೆ ನೀಲಿಯ ಜೊತೆ ಒಂದಾಗಿದ್ದಾರೆ. ಆದರೆ, ಅವರಿಗಿಂತ ಹೃದಯಪೂರ್ವಕವಾಗಿ ಅದನ್ನು ತನ್ನದಾಗಿಸಿಕೊಂಡಿದ್ದು ಗೌರಿ. ಅಂಬೇಡ್ಕರರ ಜಾತಿವಿನಾಶ ಪುಸ್ತಕದ ಹೊಸ ಆವೃತ್ತಿಗೆ ಅರುಂಧತಿ ರಾಯ್ ಬರೆದ ಮುನ್ನುಡಿಯ ಕುರಿತು ನಡೆಯುತ್ತಿದ್ದ ಚರ್ಚೆಯನ್ನಷ್ಟೇ ನೋಡಿದ್ದ ನಾನು ಇನ್ನೂ ಅದನ್ನು ಓದಿರಲಿಲ್ಲ. ಆಫೀಸಿಗೆ ಹೋದಾಗ ಅಷ್ಟರಲ್ಲಾಗಲೇ ಮೇಡಂ ಅದನ್ನು ಓದಿಯಾಗಿತ್ತು! ತೀರಾ ಈಚೆಗೆ ಅರುಂಧತಿರಾಯ್‌ರ ಹೊಸ ಕೃತಿ ಮಿನಿಸ್ಟ್ರಿ ಆಫ್ ಅಟ್‌ಮೋಸ್ಟ್ ಹ್ಯಾಪಿನೆಸ್ ಪುಸ್ತಕ ಬಿಡುಗಡೆಯಾದ ಹೊಸದರಲ್ಲಿ ನಾನು ಮತ್ತು ಮಲ್ಲಿಗೆ ಜೊತೆಯಾಗಿ ಕಚೇರಿಗೆ ಹೋಗಿದ್ದೆವು. ಮಲ್ಲಿಗೆ ಅದರ ಬಗ್ಗೆ ಪ್ರಸ್ತಾಪ ಮಾಡಿದಾಗ, 'ನಾನು ಓದಿಯಾಗಿದೆ, ತೆಗೆದುಕೊಂಡು ಹೋಗು' ಎಂದು ಹೇಳಿ ಪುಸ್ತಕ ಕೊಟ್ಟರು. ಏಕಕಾಲದಲ್ಲಿ ಒಂದು ವಾರಪತ್ರಿಕೆ, ಒಂದು ಮಾಸ ಪತ್ರಿಕೆ, ಒಂದು ಪಾಕ್ಷಿಕ ಹಾಗೂ ಎರಡು ಪ್ರಕಾಶನ ಸಂಸ್ಥೆಗಳ ಜೊತೆ ಹಲವೆಂಟು ಬಗೆಯ ಸಾಮಾಜಿಕ ಕೆಲಸಗಳಲ್ಲಿ ತೊಡಗಿರುತ್ತಿದ್ದ ಗೌರಿ ಮೇಡಂ ವಾರಕ್ಕೆರಡು ಪುಸ್ತಕಗಳನ್ನಾದರೂ ಓದುತ್ತಿದ್ದಂತೆ ಕಾಣುತ್ತಿತ್ತು.



ಇದು ಕೇವಲ ಪುಸ್ತಕದ ಓದಿನ ವಿಚಾರವಲ್ಲ. ತಾನು ಒಡನಾಡುತ್ತಿರುವ ವಿವಿಧ ಸೈದ್ಧಾಂತಿಕ ಹಿನ್ನೆಲೆಯ ವ್ಯಕ್ತಿಗಳನ್ನು ಮತ್ತು ಅವರ ನಿಲುವುಗಳನ್ನು ನಿಧಾನಕ್ಕೆ ಅರ್ಥ ಮಾಡಿಕೊಳ್ಳಲು, ತನ್ನ ಲೋಕಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ತನ್ನದೇ ಸ್ವಂತ ವೈಚಾರಿಕ ನೆಲೆಯನ್ನು ರೂಪಿಸಿಕೊಳ್ಳಲು ಮೇಡಂಗೆ ಸಾಧ್ಯವಾಗಿತ್ತು. ಅದನ್ನು ತಮ್ಮ ಬರಹದಲ್ಲಿ ದಾಖಲಿಸುವುದೂ ಸಾಧ್ಯವಾಗಿತ್ತು. 10 ವರ್ಷಗಳ ಅವಧಿಯಲ್ಲಿ ಅವರ ಬರಹದಲ್ಲಿ ಬಂದ ಬದಲಾವಣೆಯನ್ನು ಗಮನಿಸಿದರೆ ಅದು ಸ್ಪಷ್ಟವಾಗುತ್ತದೆ. ಆದರೆ, ಮಾತಿನಲ್ಲಿ ಅದನ್ನು ಸುಸಂಗತವಾಗಿ ವ್ಯಕ್ತಪಡಿಸುವುದು ಅವರಿಗೆ ಅಷ್ಟು ಕರಗತವಾಗಿರಲಿಲ್ಲ. ಥೇಟ್ ಲಂಕೇಶರ ಹಾಗೆಯೇ.

ಈ ಮಧ್ಯೆ ಅವರ 'ವಂಡರ್‌ಫುಲ್' ಭಾಷಣವೊಂದನ್ನು ನಾವೆಲ್ಲರೂ ಖುದ್ದಾಗಿ ಕೇಳಿದೆವು. ಅದು ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ. ಗೌರಿಯವರ ಭಾಷಣದ ವಿರುದ್ಧ ಮತಾಂಧರು ಗದ್ದಲವೆಬ್ಬಿಸಿದ್ದರು. ಕಾರ್ಯಕ್ರಮಕ್ಕೆ ಎಷ್ಟು ಕಟ್ಟುನಿಟ್ಟಿನ ಭದ್ರತೆ ಇತ್ತೆಂದರೆ, ಅವರ ಸಹ ಭಾಷಣಕಾರರಾಗಿದ್ದ ರಾಜಶೇಖರ ಕೋಟಿಯವರು ಅರ್ಧ ಕಾರ್ಯಕ್ರಮ ಮುಗಿದನಂತರ ವೇದಿಕೆಗೆ ಬರಲು ಸಾಧ್ಯವಾಯಿತು. ದೊಡ್ಡ ಸಭಾಂಗಣದಲ್ಲಿ ನೆರೆದಿದ್ದವರಲ್ಲಿ ಆತಂಕ ಮತ್ತು ಕುತೂಹಲ ಮನೆ ಮಾಡಿತ್ತು. ಗೌರಿ ಅದರ ಬಗ್ಗೆ ಆರಂಭದಲ್ಲಿ ಪ್ರಸ್ತಾಪಿಸಿ, ಇಂತಹವರಿಗೆಲ್ಲಾ 'ಐ ಜಸ್ಟ್ ಡೋಂಟ್ ಕೇರ್' ಎಂದರು. ಅವರು ಹೇಳಿದ ರೀತಿ ನನಗೆ ಆಶ್ಚರ್ಯವನ್ನುಂಟುಮಾಡಿತ್ತು. ಏಕೆಂದರೆ ಖಾಸಗಿ ಸಂಭಾಷಣೆಯಲ್ಲೂ, ಸಾರ್ವಜನಿಕ ಭಾಷಣದಲ್ಲಿ ಸಾಮಾನ್ಯವಾಗಿ ಕಾಣುತ್ತಿದ್ದ ಉಡಾಫೆಯ ಟೋನ್‌ನಲ್ಲಿ ಅವರದನ್ನು ಹೇಳಿರಲಿಲ್ಲ. ಬಹಳ ಸುಸಂಗತವಾದ ರೀತಿಯಲ್ಲಿ ವಿದ್ವತ್ಪೂರ್ಣ ಭಾಷಣ ಮಾಡಿದ್ದರು. ನಮ್ಮೆಲ್ಲರ ಸ್ನೇಹದ, ಒಡನಾಟದ, ಜಗಳದ ಆರಂಭದ ದಿನಗಳಲ್ಲಿ ಭಾಷಣಗಳಿಗೆ ಹೋಗುವ ಮುಂಚೆ ಕೆಲವು ಗೆಳೆಯರಲ್ಲಿ 'ಸ್ವಲ್ಪ ಪಾಯಿಂಟ್ಸ್ ಹೇಳಪ್ಪಾ' ಎಂದು ಕೇಳಿ ಬರೆದುಕೊಳ್ಳುತ್ತಿದ್ದರು. ನಿಧಾನಕ್ಕೆ ತನ್ನದೇ ಖಚಿತವಾದ ಓದು ಮತ್ತು ಅನುಭವದ ಕಾರಣದಿಂದ ಅಂತಹ ಅಗತ್ಯ ಇಲ್ಲವಾಯಿತು.

ಈ ಬದಲಾವಣೆ ಕೇವಲ ಬೌದ್ಧಿಕ ತಿಳಿವಳಿಕೆಯದ್ದು ಮಾತ್ರವಾಗಿರಲಿಲ್ಲ. ಸ್ವಚ್ಛತೆ, ಪ್ರೈವೆಸಿಯಂತಹವು ಮಾತ್ರವಲ್ಲದೇ ಸುತ್ತಲಿನವರ ಜೊತೆ ಸ್ಪಷ್ಟವಾದ 'ಕ್ಲಾಸ್ ಧೋರಣೆ' ತೋರುತ್ತಿದ್ದ ಅವರ ಮುಂದೆಯೇ ಮುಖ ಗಂಟಿಕ್ಕಿ ಮುಖ ತಿರುಗಿಸಿ ಹೋಗಿಬಿಡುತ್ತಿದ್ದೆವು. ಈ ವಿಚಾರದಲ್ಲೂ ಅವರಲ್ಲಿ ಬಂದ ಬದಲಾವಣೆಯು ನನ್ನಂತಹವರ ಮಟ್ಟಿಗೆ ಬಹಳ ಮುಖ್ಯವಾದುದೆಂದು ಬಗೆಯುತ್ತೇನೆ. ನನಗೆ ಮೇಡಂ, ಗೌರಿ, ಅಮ್ಮ ಎಲ್ಲವೂ ಆಗಿದ್ದ ಗೌರಿ ಲಂಕೇಶ್‌ರು ನಮ್ಮ ಮೇಲೆ ತೋರುತ್ತಿದ್ದ ಪ್ರತೀವಾರದ ಡೆಡ್‌ಲೈನ್ ಕೋಪ ಮತ್ತು ಪದಮಿತಿಯ ಎಚ್ಚರಿಕೆಯನ್ನು ಈ ಸಾರಿಯೂ ಗಮನದಲ್ಲಿಟ್ಟುಕೊಂಡಿದ್ದೇನೆ. ಸೆ.5ರ ರಾತ್ರಿಯಿಂದ ಇಲ್ಲಿಯವರೆಗೂ ತಲೆ ಧಿಂ ಎನ್ನುತ್ತಿರುವುದು ನಿಂತಿಲ್ಲ; ಸೆ.12ರ ಕಾರ್ಯಕ್ರಮದ ತಯಾರಿಯ ಒತ್ತಡ ಕರೆಯುತ್ತಿದೆ. ಗೌರಿ ನನಗೆ ಕಲಿಸಿ ಹೋದ ಎಂದೂ ಮರೆಯದ ಪಾಠಗಳ ಕುರಿತು ಇನ್ಯಾವಾಗಲಾದರೂ ಬರೆಯುತ್ತೇನೆ.

■ ಡಾ. ವಾಸು

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 20-09-2017 RNI No. KARKAN2005

ಗೌರಿ ಲಂಕೇಶ್ ಹತ್ಯೆ ಖಂಡಿಸಿ ದೇಶದಾದ್ಯಂತ ಭುಗಿಲೆದ್ದ ಪ್ರತಿಭಟನೆಯ ಸ್ಯಾಂಪಲ್‌ಗಳು...



PRINTED, PUBLISHED BY LANKESH MEDIA No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone ...
Fax : 26604536, E-mail :lankesh70@rediff...